

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 26 ಭಾನುವಾರ 2025

ಸಂಪುಟ: 45 | ಸಂಚಿಕೆ: 279 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಕ್ರೋ ಫೈನಾನ್ಸ್‌ಗಳಿಗೆ ಕಡಿವಾಣ

ಸುಗ್ರೀವಾಜ್ಞೆ ಮೂಲಕ ಹೊಸ ಕಾನೂನು ಜಾರಿ

● ಬಜೆಟ್ ಅಧಿವೇಶನದಲ್ಲಿ ಕಾನೂನಿಗೆ ತಿದ್ದುಪಡಿ; ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಆರ್‌ಬಿಐ ನಿಯಮ ಗಾಳಿಗೆ ತೂರಿ ಅಸಲು, ಬಡ್ಡಿ ವಸೂಲಿ; ಕಠಿಣ ಕ್ರಮದ ಎಚ್ಚರಿಕೆ ● ಸಂಜೆ 5 ಗಂಟೆ ನಂತರ ಸಾಲ ವಸೂಲಿಗೆ ನಿರ್ಬಂಧ; ರೌಡಿಗಳು ಸಾಲ ವಸೂಲಿಗಿಳಿಯುವಂತಿಲ್ಲ ● ಈಗಾಗಲೇ ರಾಜ್ಯದಾದ್ಯಂತ ಪ್ರಕರಣ ದಾಖಲಾಗಿರುವ ಸಂಬಂಧ ಆರೋಪಿಗಳ ತಕ್ಷಣ ಬಂಧಿಸಲು ಕಟ್ಟಾಜ್ಞೆ ● ಆರ್‌ಬಿಐ ನಿಯಮಾವಳಿ ಉಲ್ಲಂಘಿಸಿ ಶೇ.28ರಿಂದ 29ರಷ್ಟು ಬಡ್ಡಿ ವಸೂಲಿ


ಮೈಕ್ರೊ ಫೈನಾನ್ಸ್ ಹಾವಳಿ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಬೆಂಗಳೂರು, ಜ.25(ಕೆಎಂಶಿ)– ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಯಮ ಗಾಳಿಗೆ ತೂರಿ ಸಾಲಗಾರರಿಂದ ಅಸಲು, ಬಡ್ಡಿ ವಸೂಲು ಮಾಡುವ ಮೈಕ್ರೊ ಫೈನಾನ್ಸ್ ಕಂಪನಿಗಳಿಗೆ ಕಡಿವಾಣ ಹಾಕಲು ಹೊಸ ಕಠಿಣ ಕಾನೂನು ಜಾರಿಗೆ ತರುವುದಾಗಿ ಸಿಎಂ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಸದ್ಯಕ್ಕೆ ಸುಗ್ರೀವಾಜ್ಞೆ ಅಸ್ತ್ರ: ಮುಂಬರುವ ಬಜೆಟ್ ಅಧಿವೇಶನದಲ್ಲೇ ತಿದ್ದುಪಡಿ ಮಸೂದೆ ಮಂಡಿಸಿ ಅಂಗೀಕಾರ ಪಡೆದು ಕಾನೂನು ರೂಪಿಸಲಾಗುವುದು, ಅದಕ್ಕೂ ಮುನ್ನವೇ ಸುಗ್ರೀವಾಜ್ಞೆ ಮೂಲಕ ಮೈಕ್ರೊ ಫೈನಾನ್ಸ್ ಹಾವಳಿಗೆ ಕಡಿವಾಣ ಹಾಕಲಾಗುವುದು. ಮೈಕ್ರೋ ಫೈನಾನ್ಸ್‌ಗಳಿಂದ ಸಾಲ ಪಡೆಯುವವರ ಹಿತ ಕಾಪಾಡಲು ಸರ್ಕಾರ ಬದ್ಧವಾಗಿದೆ ಎಂದಿದ್ದಾರೆ.

ರೌಡಿಗಳು ವಸೂಲಿಗಿಳಿಯುವಂತಿಲ್ಲ: ಇನ್ನು ಮುಂದೆ ರೌಡಿಗಳ ಮೂಲಕ ಸಾಲ ವಸೂಲಿ ಮಾಡುವಂತಿಲ್ಲ, ಸಂಜೆ 5ರ ನಂತರ ಸಾಲ ವಸೂಲಿಗೆ ಹೋಗುವಂತಿಲ್ಲ, ವಸೂಲಿ ಮಾಡುವಾಗ ಯಾವುದೇ ರೀತಿಯ ಕಿರುಕುಳ ನೀಡಬಾರದು.

ಆರೋಪಿಗಳ ತಕ್ಷಣ ಬಂಧನ: ರಾಜ್ಯಾದ್ಯಂತ ದಾಖಲಾಗಿರುವ ಪ್ರಕರಣಗಳ ಬಗ್ಗೆ ಕೂಡಲೇ ಕ್ರಮ, ಸಂಜೆಯೊಳಗೆ ಆರೋಪಿಗಳನ್ನು ಬಂಧಿಸಬೇಕು, ಸಾಲಗಾರರಿಗೆ ಕಿರುಕುಳ

■ 6ನೇ ಪುಟಕ್ಕೆ

ಬೆಂಗಳೂರು ಅರಮನೆ ವಶಕ್ಕೆ ಸುಗ್ರೀವಾಜ್ಞೆ; ಇದು ಯಾರ ಮೇಲಿನ ದ್ವೇಷದಿಂದಲ್ಲ

● ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ
● ಜನರ ಒಳಿತಿಗಾಗಿ ಈ ಕ್ರಮ ಅನಿವಾರ್ಯ

ಬೆಂಗಳೂರು, ಜ.25(ಕೆಎಂಶಿ)–ಮೈಸೂರು ರಾಜವಂಶಸ್ಥರಿಗೆ ಸೇರಿದ ಬೆಂಗಳೂರು ಅರಮನೆಯ ಖಾಲಿ ಜಾಗವನ್ನು ಅಭಿವೃದ್ಧಿಗೆ ಬಳಸಿಕೊಳ್ಳಲು ಸುಗ್ರೀವಾಜ್ಞೆ ತರುತ್ತಿರುವುದು ಯಾರ ಮೇಲಿನ ದ್ವೇಷದಿಂದಲ್ಲ, ಜನರ ಒಳಿತಿಗಾಗಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.



ಮೈಕ್ರೊ ಫೈನಾನ್ಸ್ ಕಂಪನಿಗಳ ಹಾವಳಿ ತಡೆಗೆ ಕಾನೂನು ರಚನೆ ಕುರಿತು ಸಚಿವರು, ಅಧಿಕಾರಿಗಳ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ದ್ವೇಷ ಸಾಧನೆಗೆ ಹೋಗಿಲ್ಲ. ಕಾನೂನಿದೆ, ಮುಂದಿನ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆ ಆಗಬಾರದೆಂದು ಈ ಕ್ರಮ ಕೈಗೊಂಡಿದ್ದೇವೆ.

ರಸ್ತೆ ಅಭಿವೃದ್ಧಿಗೆ ಅಗತ್ಯ ಭೂಮಿ ಪಡೆಯಲು 3,014 ಕೋಟಿ ರೂ. ಅಂದರೆ, ಎಕರೆಗೆ 200 ಕೋಟಿ ರೂ.ಗಳಿಗೂ ಹೆಚ್ಚು ಟಿಡಿಆರ್ ನೀಡಬೇಕಿದೆ. ಇಷ್ಟು ದರ ಬೆಂಗಳೂರಿನಲ್ಲಿ ಎಲ್ಲಿದೆ, ಜನರ ಮೇಲೆ ಇದು ಯಾವ ಪರಿಣಾಮ ಬೀರುತ್ತದೆ ಎಂದರು. ಜನರ ಒಳಿತಿಗಾಗಿ ರಸ್ತೆ ವಿಸ್ತೀರ್ಣ

■ 6ನೇ ಪುಟಕ್ಕೆ

ಮೈಕ್ರೋ ಫೈನಾನ್ಸ್ ಕಿರುಕುಳ; ಯುವಕ ನೇಣಿಗೆ ಶರಣು

ವ್ಯವಸಾಯ, ಕುಟುಂಬ ನಿರ್ವಹಣೆಗೆ ಸಾಲ


ಲೋಹಿತ್

ಕೆ.ಆರ್.ಪೇಟೆ, ಜ.25–ವ್ಯವಸಾಯ ಮತ್ತು ಕುಟುಂಬ ನಿರ್ವಹಣೆಗಾಗಿ ಸಾಲ ಮಾಡಿಕೊಂಡಿದ್ದ ಯುವಕನೋರ್ವ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಹಾಗೂ ಖಾಸಗಿ ಲೇವಾದೇವಿಯವರ ಕಿರುಕುಳ ತಾಳಲಾರದೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕಸಬಾ ಹೋಬಳಿಯ ವಳಗೆರೆ ಮೆಣಸ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಲೇಟ್ ರಾಜೇಗೌಡ ಮತ್ತು ರತ್ನಮ್ಮ ದಂಪತಿಗಳ ಪುತ್ರ ಲೋಹಿತ್‌ಕುಮಾರ್(35) ಆತ್ಮಹತ್ಯೆಗೆ ಶರಣಾದ ಯುವಕ. ಈತ ಅವಿವಾಹಿತನಾಗಿದ್ದ. ಲೋಹಿತ್‌ಕುಮಾರ್ ವ್ಯವಸಾಯ ಮಾಡಿಕೊಂಡು ಕುಟುಂಬ ನಿರ್ವಹಿಸುತ್ತಿದ್ದರು. ವ್ಯವಸಾಯ ಹಾಗೂ ಮನೆಯ ಖರ್ಚಿಗೆಂದು ಅಗ್ರಹಾರಬಾಚಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ

■ 2ನೇ ಪುಟಕ್ಕೆ

ಗಂಡ ಮಾಡಿದ ಸಾಲದಿಂದ ಬೇಸತ್ತು ಪತ್ನಿ ಆತ್ಮಹತ್ಯೆ

ಗುಂಡ್ಲುಪೇಟೆ ಬಳಿ ದುರಂತ


ಮಾದೇವಿ

ಗುಂಡ್ಲುಪೇಟೆ, ಜ.25– ಗಂಡ ಮಾಡಿರುವ ಸಾಲದಿಂದ ಬೇಸತ್ತು ಪತ್ನಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಘಟನೆ ತಾಲೂಕಿನ ಕೋಟೆಕೆರೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿಂಗರಾಜು ಪತ್ನಿ ಮಾದೇವಿ(26) ಆತ್ಮಹತ್ಯೆ ಮಾಡಿಕೊಂಡವರು. ಹೊಸ ಮನೆ ಕಟ್ಟಲು ಪತಿ ಸುಮಾರು 5 ಲಕ್ಷ ರೂ. ಸಾಲ ಮಾಡಿಕೊಂಡಿದ್ದರು. ಇದರ ಬಗ್ಗೆ ಚಿಂತೆಗೀಡಾಗಿದ್ದ ಮಾದೇವಿ ಮನೆಯಲ್ಲಿ ಯಾರೂ ಇಲ್ಲದ ವೇಳೆ ಸೀರೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ದಂಪತಿಗೆ 8 ವರ್ಷದ ಮಗನಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಸಾಲದ ಬಗ್ಗೆ ಯಾವುದೇ ಕಿರುಕುಳ ಇಲ್ಲದಿದ್ದರೂ ಗಂಡ ಮಾಡಿರುವ ಸಾಲದ ಬಗ್ಗೆ ಚಿಂತಿಸುತ್ತಲೇ ಇದ್ದ ತಮ್ಮ ಮಗಳು ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಮೃತಳ ತಂದೆ ರಾಜನಾಯ್ಕ ದೂರು ಕೊಟ್ಟಿದ್ದು, ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಗಣರಾಜ್ಯೋತ್ಸವದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 27–1–2025ರ ಸೋಮವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.
–ಸಂ.

ಲಕ್ಷ್ಮಿನಾರಾಯಣ ಸುಬ್ರಹ್ಮಣ್ಯಂ ಸೇರಿ 7 ಮಂದಿಗೆ ಪದ್ಮವಿಭೂಷಣ

ನಟ ಅನಂತನಾಗ್, ಅಂಕಣಕಾರ ಸೂರ್ಯಪ್ರಕಾಶ್, ತೆಲುಗು ನಟ ನಂದಮೂರಿ ಬಾಲಕೃಷ್ಣ, ತಮಿಳು ನಟ ಅಜಿತ್‌ಕುಮಾರ್ ಸೇರಿ 9 ಮಂದಿಗೆ ಪದ್ಮಭೂಷಣ

ರಾಜ್ಯದವರೇ ಆದ ಸಂಗೀತ ನಿರ್ದೇಶಕ ರಿಕ್ಕಿ ಕೇಜ್, ಡಾ.ವಿಜಯಲಕ್ಷ್ಮಿ ದೇಶಮಾನೆ, ಕಲೆಗಾರ ವೆಂಕಟಪ್ಪ ಅಂಬಾಜಿ, ಸಾಹಸ ನಿರ್ದೇಶಕ ಹಾಸನ್ ರಘು, ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ, ಪ್ರಶಾಂತ್ ಪ್ರಕಾಶ್ ಸೇರಿ 113 ಮಂದಿಗೆ ಪದ್ಮಶ್ರೀ ಪ್ರಶಸ್ತಿ


ಸುಬ್ರಹ್ಮಣ್ಯಂ | ಅನಂತನಾಗ್ | ಸೂರ್ಯಪ್ರಕಾಶ್ | ಬಾಲಕೃಷ್ಣ | ಅಜಿತ್‌ಕುಮಾರ್ | ಅಶ್ವಿನ್ | ರಿಕ್ಕಿ ಕೇಜ್

ನವದೆಹಲಿ, ಜ. 25– ಕೇಂದ್ರ ಸರ್ಕಾರವು 2024ನೇ ಸಾಲಿನ ಅತ್ಯುನ್ನತ ನಾಗರಿಕ ಸೇವಾ ಪ್ರಶಸ್ತಿಗಳಾದ ಪದ್ಮವಿಭೂಷಣ, ಪದ್ಮಭೂಷಣ, ಪದ್ಮಶ್ರೀ ಪ್ರಕಟಿಸಿದ್ದು, ರಾಜ್ಯಕ್ಕೆ ಒಂದು ಪದ್ಮ ವಿಭೂಷಣ, ಎರಡು ಪದ್ಮಭೂಷಣ, ಆರು ಪದ್ಮಶ್ರೀ ಸೇರಿದಂತೆ ಒಟ್ಟು ಒಂಭತ್ತು ಪದ್ಮ ಪ್ರಶಸ್ತಿಗಳು ಲಭಿಸಿವೆ. ಈ ಬಾರಿ 7 ಪದ್ಮ ವಿಭೂಷಣ, 9 ಪದ್ಮಭೂಷಣ, 113 ಪದ್ಮಶ್ರೀ ಪ್ರಶಸ್ತಿಗಳು ಪ್ರಧಾನ ಮಾಡಲಾಗುತ್ತಿದ್ದು, ಇವರಲ್ಲಿ 23 ಮಹಿಳೆಯರು ಸೇರಿದ್ದಾರೆ. 13 ಗಣ್ಯರಿಗೆ ಮರಣೋತ್ತರವಾಗಿ ಪ್ರಶಸ್ತಿ ಘೋಷಿಸಲಾಗಿದೆ.

ರಾಜ್ಯದ ವಯೋಲಿನ್ ವಾದಕ ಲಕ್ಷ್ಮೀ ನಾರಾಯಣ ಸುಬ್ರಹ್ಮಣ್ಯಂ ಅವರಿಗೆ ಕಲೆ ವಿಭಾಗದಲ್ಲಿ ಪದ್ಮವಿಭೂಷಣ, ಹಿರಿಯ ನಟ ಅನಂತನಾಗ್ ಮತ್ತು ಶಿಕ್ಷಣ ತಜ್ಞ, ಅಂಕಣಕಾರ ಹಾಗೂ ಪ್ರಸಾರ ಭಾರತಿ ಮಾಜಿ ಅಧ್ಯಕ್ಷ ಎ.ಸೂರ್ಯಪ್ರಕಾಶ್ ಅವರಿಗೆ ಪದ್ಮಭೂಷಣ, ಗ್ರಾಮಿ ಪ್ರಶಸ್ತಿ ವಿಜೇತ ಸಂಗೀತ ನಿರ್ದೇಶಕ ರಿಕ್ಕಿ ಕೇಜ್, ವೈದ್ಯಕೀಯ ಕ್ಷೇತ್ರದಲ್ಲಿ ವಿಜಯಲಕ್ಷ್ಮಿ ದೇಶಮಾನೆ, ಕಲೆಯಲ್ಲಿ ವೆಂಕಪ್ಪ ಅಂಬಾಜಿ, ಸಾಹಸ

■ 6ನೇ ಪುಟಕ್ಕೆ

ಬಸ್ ಕಿಟಕಿಯಿಂದ ತಲೆ ಹೊರ ಹಾಕಿದ ಮಹಿಳೆ ದುರಂತ ಸಾವು

● ನಜ್ಜು–ಗುಜ್ಜಾದ ತಲೆ ● ಮತ್ತಿಬ್ಬರ ಕೈಗಳಿಗೂ ಗಂಭೀರ ಗಾಯ


ಶಿವಲಿಂಗಮ್ಮ

ನಂಜನಗೂಡು, ಜ.25– ಚಲಿಸುತ್ತಿರುವ ಬಸ್ ಹಾಗೂ ಇನ್ನಿತರ ವಾಹನಗಳಿಂದ ಪ್ರಯಾಣಿಕರು ತಮ್ಮ ದೇಹದ ಯಾವುದೇ ಭಾಗ ಹೊರ ಹಾಕಬೇಡಿ ಎಂಬುದು ಎಚ್ಚರಿಕೆ. ಆದರೆ ಅದನ್ನು ಜನ ಧಿಕ್ಕರಿಸುತ್ತಲೇ ಬರುತ್ತಿದ್ದಾರೆ. ಯಾವುದೋ ಕಾರಣಕ್ಕೆ ಏಕಾಏಕಿ ಕಿಟಕಿಯಿಂದ ಕತ್ತು, ಕೈ ಹೊರ ಹಾಕಿದಾಗ ದುರಂತಗಳು ಸಂಭವಿಸಿ, ಹಲವಾರು ಭಾರೀ ಪ್ರಾಣವೇ ಹೋಗಿರುವ ಬೇಕಾದಷ್ಟು ನಿದರ್ಶನಗಳಿವೆ. ಇದಕ್ಕೆ ಮತ್ತೊಂದು ಘಟನೆ ಸೇರ್ಪಡೆಯಾಗಿದೆ.

ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರು ಕಿಟಕಿಯಿಂದ ತಲೆ ಹೊರ ಹಾಕಿದ ಪರಿಣಾಮ ಎದುರಿನಿಂದ ಬಂದ ವಾಹನ ಉಜ್ಜಿದ್ದು ಮಹಿಳೆಯ ತಲೆ ನುಜ್ಜುಗುಜ್ಜಾಗಿ, ಬಲಗೈ ಛಿದ್ರಗೊಂಡು ಸ್ಥಳದಲ್ಲೇ ಸಾವಿಗೀಡಾದರೆ, ಮತ್ತಿಬ್ಬರ ಕೈಗಳಿಗೂ ಪೆಟ್ಟಾದ ಘಟನೆ ಮೈಸೂರು– ಊಟಿ ರಾಷ್ಟ್ರೀಯ ಹೆದ್ದಾರಿಯ ತಾಲೂಕಿನ ಸಿಂಧುವಳ್ಳಿಪುರ ಗ್ರಾಮದ ಉಪ್ಪಿನಕಾಯಿ ಕಾರ್ಖಾನೆ ಎದುರು ಶನಿವಾರ ನಡೆದಿದೆ. ಗುಂಡ್ಲುಪೇಟೆ ತಾಲೂಕಿನ ಹಾಲಹಳ್ಳಿ ಗ್ರಾಮದ ನಿವಾಸಿ ರೇವಣ್ಣ ಎಂಬುವರ ಪತ್ನಿ ಶಿವಲಿಂಗಮ್ಮ(55) ಮೃತಪಟ್ಟವರು. ಈಕೆ ಬೆಂಗಳೂರಿನಲ್ಲಿ ನಡೆದ ತನ್ನ ಸಹೋದರ ಶಿವಮೂರ್ತಿ ಅವರ ಮಗಳ ನಿಶ್ಚಿತಾರ್ಥ ಮುಗಿಸಿಕೊಂಡು ಬಂದು ಶುಕ್ರವಾರ ರಾತ್ರಿ ಮೈಸೂರಿನಲ್ಲಿದ್ದ ತನ್ನ ಸಹೋದರ

■ 6ನೇ ಪುಟಕ್ಕೆ

ಖೋ ಖೋ ವಿಶ್ವಕಪ್ ವಿಜೇತೆ ಚೈತ್ರಾಗೆ ಹುಟ್ಟೂರಲ್ಲಿ ಅದ್ಧೂರಿ ಸ್ವಾಗತ

ಸಂಭ್ರಮದ ನಡುವೆ ಅಭಿನಂದನೆ, ಹೂ ಸುರಿಮಳೆ

ತಿ.ನರಸೀಪುರ, ಜ.25– ಕುರುಬೂರು ಗ್ರಾಮವನ್ನು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವ ಕಾರ್ಯವನ್ನು ಖೋ ಖೋ ವಿಶ್ವಕಪ್ ಆಟಗಾರ್ತಿ ಬಿ. ಚೈತ್ರಾ ಮಾಡಿದ್ದಾರೆ ಎಂದು ಕನಕಪುರ ದೇಗುಲ ಮಠದ ಶ್ರೀಚನ್ನಬಸಪ್ಪ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಕುರುಬೂರು ಗ್ರಾಮದ ವಿದ್ಯಾದರ್ಶಿನಿ ಕಾನ್ವೆಂಟ್ ಹಾಗೂ ಪ್ರೌಢ ಶಾಲಾ ಆವರಣದಲ್ಲಿ ವಿಶ್ವಕಪ್ ಖೋ ಖೋ ಪಂದ್ಯಾವಳಿಯಲ್ಲಿ ಉತ್ತಮ ಸಾಧನೆ ತೋರಿದ ಬಿ.ಚೈತ್ರ ಅವರಿಗೆ ಹಮ್ಮಿಕೊಳ್ಳಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಒಂದು ದೊಡ್ಡ ಕನಸನ್ನು ನನಸು ಮಾಡಲು ತ್ಯಾಗ ಮತ್ತು ನಿರಂತರ ಪರಿಶ್ರಮ ಮುಖ್ಯ ಎನ್ನುತ್ತಾರೆ. ಬಿ.ಚೈತ್ರಾ ಅವರ ಕೋಚ್ ಮಂಜುನಾಥ್ ಅವರು ಗಣಿತ ಶಿಕ್ಷಕರಾಗಿದ್ದು, ಕ್ರೀಡಾ ತರಬೇತಿ ಇಲ್ಲದಿದ್ದರೂ ಸಹ ಸ್ವತಃ ತಾವು ಕಲಿತು ನಿರಂತರ ಪರಿಶ್ರಮದ ಮೂಲಕ ಬಿ.ಚೈತ್ರಾರಂತಹ ಪ್ರತಿಭೆಯ ಫಲವನ್ನು ನಾಡಿಗೆ ನೀಡಿದ್ದಾರೆ. ಕುರುಬೂರು ಗ್ರಾಮ ತನ್ನದೇ ಇತಿಹಾಸ ಹೊಂದಿದ್ದು ಗ್ರಾಮವು ಅನೇಕ ರೀತಿ ನಾಡಿಗೆ ಪರಿಚಯವಿದ್ದು, ಸಾಕಷ್ಟು ಸಾಧಿಸಿದವರಿದ್ದರೂ ಇದೀಗ ಚೈತ್ರಾ ಅವರಿಂದಾಗಿ ವಿಶ್ವ ಮಟ್ಟದಲ್ಲಿ ಗ್ರಾಮಕ್ಕೆ ಮತ್ತೊಂದು ಕಿರೀಟ ದೊರಕಿದಂತಾಗಿದೆ.


ಖೋ ಖೋ ವಿಶ್ವಕಪ್ ಆಟಗಾರ್ತಿ ಬಿ.ಚೈತ್ರಾಗೆ ಅದ್ಧೂರಿ ಅಭಿನಂದನೆ

ಚೈತ್ರಾ ಅವರು ಮುಂದಿನ ದಿನಗಳಲ್ಲಿ ಏಷ್ಯನ್ ಗೇಮ್, ಒಲಂಪಿಕ್‌ಗಳಲ್ಲಿ ಆಡುವ ಕನಸನ್ನು ಹೊಂದಿದ್ದಾರೆ. ಅವರ ಕನಸು ನನಸಾಗಲಿ ಅವರ ಸಾಧನೆ ಇತರರಿಗೆ ಪ್ರೇರಣೆಯಾಗಲಿ ಎಂದರು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ಬಿ.ಚೈತ್ರಾ, ನನ್ನ ಸಾಧನೆ ಹಿಂದೆ ನನ್ನ ತರಬೇತುದಾರ ಮಂಜುನಾಥ್ ಸರ್ ಅವರ ಶ್ರಮವಿದೆ. ಪ್ರತಿ ಹಂತದಲ್ಲೂ ನನಗೆ ಪ್ರೋತ್ಸಾಹ ನೀಡಿದ್ದಾರೆ. ಕುರುಬೂರು ಗ್ರಾಮದಲ್ಲೂ ಕೂಡ ನನಗೆ ಉತ್ತಮ ಪ್ರೋತ್ಸಾಹ ಸಿಕ್ಕಿದೆ. ಇಲ್ಲಿ ಆಡುವ ಪ್ರತಿಯೊಬ್ಬ ಆಟಗಾರರಿಗೂ ಸಾಧನೆ ಮಾಡುವ ಸಾಮರ್ಥ್ಯವಿದೆ. ನನ್ನ ಹಿರಿಯ ಹಾಗೂ ಕಿರಿಯ ಆಟಗಾರರು ಸಾಕಷ್ಟು ಬೆಂಬಲ ನೀಡಿದ್ದಾರೆ. ನಾನು ವಿಶೇಷವಾಗಿ ದೇಗುಲ ಮಠಕ್ಕೆ ಋಣಿಯಾಗಿದ್ದೇನೆ. ಇಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಪಡೆದಿದ್ದೇನೆ. ಇದೇ ಮೈದಾನದಲ್ಲಿ

■ 6ನೇ ಪುಟಕ್ಕೆ

ಯುವರಾಜ ಕಾಲೇಜು ಪ್ರಾಂಶುಪಾಲ ಡಾ.ಸೋಮಶೇಖರಪ್ಪ ಇನ್ನಿಲ್ಲ



ಡಾ.ಸೋಮಶೇಖರಪ್ಪ

ಮೈಸೂರು, ಜ.25(ಆರ್‌ಕೆ)–ತೀವ್ರ ಹೃದಯಾಘಾತದಿಂದಾಗಿ ಮೈಸೂರಿನ ಯುವರಾಜ ಕಾಲೇಜು ಪ್ರಾಂಶುಪಾಲ ಡಾ.ಸೋಮಶೇಖರಪ್ಪ (59) ಅವರು ಇಂದು ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಯುವರಾಜ ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕರು, ಪ್ರಾಧ್ಯಾಪಕರು, ವಿಭಾಗದ ಮುಖ್ಯಸ್ಥರು ಆಗಿ ಸೇವೆ ಸಲ್ಲಿಸಿದ್ದ ಡಾ.ಸೋಮಶೇಖರಪ್ಪ, ಪ್ರಸ್ತುತ ಪ್ರಾಂಶುಪಾಲರಾಗಿದ್ದರು. ಮೂಲತಃ ಚಿತ್ರದುರ್ಗದವರಾದ ಅವರು, ಸುಮಾರು 30 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ್ದು, ಕಳೆದ ನಾಲ್ಕು ದಿನಗಳ ಹಿಂದೆ ಹೃದಯಾಘಾತದಿಂದ ಬನ್ನೂರು ರಸ್ತೆಯಲ್ಲಿರುವ ಕಾವೇರಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ನಿನ್ನೆ ರಾತ್ರಿ ಐಸಿಯುನಿಂದ ವಾರ್ಡ್‌ಗೆ ಸ್ಥಳಾಂತರಗೊಂಡಿದ್ದ ಡಾ.ಸೋಮಶೇಖರಪ್ಪ, ಇಂದು ಬೆಳಗ್ಗೆ ಉಪಾಹಾರ ಸೇವಿಸಿ ಆಸ್ಪತ್ರೆಯಲ್ಲೇ ನಡೆದಾಡಿದ್ದರು.

ಮಧ್ಯಾಹ್ನ ಸುಮಾರು 12.30ರ ಸುಮಾರಿಗೆ ತೀವ್ರ ಹೃದಯಾಘಾತವಾಗಿದ್ದು, ತಕ್ಷಣ ಅವರಿಗೆ ವೈದ್ಯರು ಚಿಕಿತ್ಸೆ ನೀಡಿದರಾದರೂ ಫಲಕಾರಿಯಾಗದೆ ಕೊನೆಯುಸಿರೆಳೆದರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ವಿಷಯ ತಿಳಿಯುತ್ತಿದ್ದಂತೆಯೇ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ಎಂ.ಕೆ.ಸವಿತಾ, ಆಸ್ಪತ್ರೆಗೆ ಭೇಟಿ ನೀಡಿದರು. ಡಾ.ಸೋಮಶೇಖರಪ್ಪ ಅವರ ಪಾರ್ಥಿವ ಶರೀರವನ್ನು ಯುವರಾಜ ಕಾಲೇಜು ಬಳಿ ತಂದು ಇರಿಸಲಾಯಿತು. ಈ ವೇಳೆ ಕಾಲೇಜು ಅಧ್ಯಾಪಕ ವರ್ಗ, ಇತರೆ ಸಿಬ್ಬಂದಿ ಹಾಗೂ ವಿದ್ಯಾರ್ಥಿ ಸಮೂಹ ಸಾವಿರಾರು ಮಂದಿ ಅಗಲಿದ ಸೋಮಶೇಖರಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ನಂತರ ಚಿತ್ರದುರ್ಗದಿಂದ ಬಂದಿದ್ದ ಅವರ ಸಂಬಂಧಿಕರು ಪಾರ್ಥಿವ ಶರೀರವನ್ನು ಮಧ್ಯಾಹ್ನದ ನಂತರ ಅಲ್ಲಿಗೆ ಕೊಂಡೊಯ್ದು ಸಂಜೆ ವೇಳೆಗೆ ಅಂತ್ಯಕ್ರಿಯೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಅವಿವಾಹಿತರಾದ ಡಾ.ಸೋಮಶೇಖರಪ್ಪ, ಉತ್ತಮ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಪ್ರಾಧ್ಯಾಪಕರು, ವಿದ್ಯಾರ್ಥಿಗಳೊಂದಿಗೆ ಸೌಹಾರ್ದಯುತ ಸಂಬಂಧ ಹೊಂದಿ, ಅವರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರ ವಸತಿ ಗೃಹದಲ್ಲಿ ನೆಲೆಸಿದ್ದರು. ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಹೊಸ ಮನೆಯನ್ನು ನಿರ್ಮಾಣ ಮಾಡಿದ್ದರೂ ಒಂದು ದಿನವೂ ಆ ಮನೆಯಲ್ಲಿ ವಾಸ ಮಾಡಲಿಲ್ಲ. ಜೊತೆಗೆ ಕಾರು ಖರೀದಿಸಿದ್ದರೂ ಒಂದು ದಿನವೂ ಬಳಸಿರಲಿಲ್ಲ. ಮನೆ ಬಳಿ ನಿಂತಿದ್ದ ಕಾರಿನ ಸುತ್ತ ಗಿಡಗಂಟಿಗಳು ಬೆಳೆದಿತ್ತು. ಈಗಲೂ ಮನೆ ಹಾಗೆಯೇ ನಿಂತಿದೆ ಎಂದು ಅವರ ಅನುಯಾಯಿಗಳು ಯುವರಾಜ ಕಾಲೇಜು ಬಳಿ ಹೇಳುತ್ತಿದ್ದುದು ಅವರ ವೈರಾಗ್ಯ ಜೀವನಕ್ಕೆ ಸಾಕ್ಷಿ ಎಂಬಂತಿದೆ.

ಡಾ.ಸೋಮಶೇಖರಪ್ಪ ಅವರ ನಿಧನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳು, ಕುಲಸಚಿವರುಗಳು, ಡೀನ್‌ಗಳು, ವಿವಿಧ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಕಂಬನಿ ಮಿಡಿದಿದ್ದಾರೆ.



ಕಾದ್ಯಮಾಡ ಎಂ.ಮುತ್ತಣ್ಣ

ಮೈಸೂರಿನ ಸಿದ್ದಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆ ನಿವೃತ್ತ ಪ್ರಾಂಶುಪಾಲ ಕಾದ್ಯಮಾಡ ಎಂ.ಮುತ್ತಣ್ಣ (92) ತಮ್ಮ ನಿವಾಸದಲ್ಲಿ ಶನಿವಾರ ನಿಧನರಾದರು. ಮೃತರ ಪತ್ನಿ ಕಾದ್ಯಮಾಡ ಗೌರಿ ಮುತ್ತಣ್ಣ (ಮನೆಯಪಂಡ) 2017ರ ಫೆಬ್ರವರಿಯಲ್ಲಿ ನಿಧನರಾಗಿದ್ದರು. ಅವರ ಇಚ್ಛಾನುಸಾರ ಪಾರ್ಥಿವ ಶರೀರವನ್ನು ಜೆಎಸ್‌ಎಸ್ ಆಸ್ಪತ್ರೆಗೆ ಇಂದು ಮಧ್ಯಾಹ್ನ 3 ಗಂಟೆಗೆ ದಾನ ಮಾಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ವೈ.ಎಸ್.ಜಯಲಕ್ಷ್ಮಿ



ಮೈಸೂರು ಮೆಡಿಕಲ್ ಕಾಲೇಜಿನ ಪೆಥಾಲಜಿ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ.ವೈ.ಎಸ್.ಜಯಲಕ್ಷ್ಮಿ (84) ಅವರು ಗೋಕುಲಂನಲ್ಲಿರುವ ತಮ್ಮ ನಿವಾಸದಲ್ಲಿ ಶನಿವಾರ ನಿಧನರಾದರು. ಶ್ರೀಯುತರು ಲಕ್ನೋದಲ್ಲಿರುವ ಮಿಲಿಟರಿ ಆಸ್ಪತ್ರೆ ಮತ್ತು ಜಮ್ಮುವಿನಲ್ಲಿರುವ ಜನರಲ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ್ದರು. ನಿವೃತ್ತಿ ನಂತರ ಬೆಳ್ಳೂರಿನ ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿದ್ದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸಿ.ಆರ್.ರಾಜು

ನೀರಾವರಿ ಇಲಾಖೆಯ ನಿವೃತ್ತ ಮುಖ್ಯ ಇಂಜಿನಿಯರ್ ಮತ್ತು ಮೈಸೂರಿನ ಗಾಯತ್ರಿಪುರಂ ನಿವಾಸಿ ಸಿ.ಆರ್. ರಾಜು (78) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಮೈಲಮ್ಮ, ಪುತ್ರ ಶಿವಕುಮಾರ್, ಪುತ್ರಿ ಉಮಾಮಹೇಶ್ವರಿ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಾಳೆ (ಜ.26) ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ರುದ್ರಾಣಿ

ಮೈಸೂರಿನ ಜಾವಾ ಫ್ಯಾಕ್ಟರಿ ನೌಕರ ಹಾಗೂ ಕುವೆಂಪುನಗರ ನಿವಾಸಿ ದಿವಂಗತ ವೈ.ಬಿ. ನಾಗರಾಜ್ ಅವರ ಪತ್ನಿ ರುದ್ರಾಣಿ (85) ನಿನ್ನೆ (ಶುಕ್ರವಾರ) ನಿಧನರಾದರು. ಮೃತರು ನಿವೃತ್ತ ಪಶು ವೈದ್ಯಾಧಿಕಾರಿ, ಪುತ್ರ ಡಾ. ಷಡಕ್ಷರಿಮೂರ್ತಿ, ಇಬ್ಬರು ಪುತ್ರಿಯರು, ಸೊಸೆ, ಅಳಿಯ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನತಾಶಾ



ಮೈಸೂರಿನ ಕೆಹೆಚ್‌ಬಿ ಕಾಲೋನಿ ನಿವಾಸಿ ಬಾಸಿಲ್ ಮಾರ್ಟಿನ್ ಮತ್ತು ಚೆರಿಲ್ ಮಾರ್ಟಿನ್ ದಂಪತಿ ಪುತ್ರಿ ನತಾಶಾ (32) ಶುಕ್ರವಾರ ಅನಾರೋಗ್ಯದಿಂದ ನಿಧನರಾದರು. ಮೃತರು ತಂದೆ, ತಾಯಿ, ಇಬ್ಬರು ಸಹೋದರರು, ಓರ್ವ ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹೋಲಿ ಕ್ರಾಸ್ ಸಿಮೆಟ್ರಿಯಲ್ಲಿ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕಮಲಮ್ಮ ನಾಗರಾಜ್

ಮೈಸೂರಿನ ವಿದ್ಯಾರಣ್ಯಪುರಂ 4ನೇ ಮೇನ್, 17ನೇ ಕ್ರಾಸ್ ನಿವಾಸಿ ದಿವಂಗತ ನಾಗರಾಜ್ ಅವರ ಪತ್ನಿ ಕಮಲಮ್ಮ ನಾಗರಾಜ್ (94) ಶುಕ್ರವಾರ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಓರ್ವ ಪುತ್ರಿ ಮತ್ತು ಓರ್ವ ಪುತ್ರ ಇದಕ್ಕೂ ಮೊದಲು ಸಾವನ್ನಪ್ಪಿದ್ದರು. ಅಂತ್ಯಕ್ರಿಯೆ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಯುವಕ ನೇಣಿಗೆ ಶರಣು

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 50 ಸಾವಿರ ರೂ. ಸಾಲ ಸೇರಿದಂತೆ, ಕೆ.ಆರ್.ಪೇಟೆ ಪಟ್ಟಣದಲ್ಲಿರುವ ವಿವಿಧ ಮೈಕ್ರೋ ಫೈನಾನ್ಸ್ ಹಣಕಾಸು ಸಂಸ್ಥೆಗಳಿಂದ ಲಕ್ಷಾಂತರ ರೂ. ಸಾಲ ಪಡೆದಿದ್ದರು. ಇದರ ಜೊತೆಗೆ ಗ್ರಾಮದಲ್ಲಿ ಖಾಸಗಿ ವ್ಯಕ್ತಿಗಳಿಂದಲೂ ಕೈಸಾಲ ಮಾಡಿದ್ದರು. ಸಾಲದ ಹೊರೆ ಜಾಸ್ತಿಯಾಗಿತ್ತು. ದಿನೇ ದಿನೆ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಪ್ರತಿನಿಧಿಗಳು ಮನೆ ಬಳಿ ಬಂದು ಸಾಲ ಮರುಪಾವತಿ ಮಾಡುವಂತೆ ಪೀಡಿಸುತ್ತಿದ್ದರು. ಜೊತೆಗೆ ಖಾಸಗಿ ವ್ಯಕ್ತಿಗಳು ಸಹ ಸಾಲ ತೀರಿಸುವಂತೆ ಒತ್ತಾಯಿಸುತ್ತಿದ್ದರು. ಮೈಕ್ರೋ ಫೈನಾನ್ಸ್ ಪ್ರತಿನಿಧಿಗಳು ಮತ್ತು ಖಾಸಗಿ ಲೇವಾ ದೇವಿಗಾರರ ಕಿರುಕುಳ ತಾಳಲಾರದೆ ಶನಿವಾರ ಮುಂಜಾನೆ ತಮ್ಮ ಮನೆಯಲ್ಲಿಯೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ. ಘಟನೆ ಕುರಿತು ಮೃತನ ಸಹೋದರ ವಿ.ಆರ್.ರಮೇಶ್ ನೀಡಿದ ದೂರಿನ ಮೇರೆಗೆ ಕೆ.ಆರ್.ಪೇಟೆ ಟೌನ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಗ್ರಾಮಸ್ಥರ ಒತ್ತಾಯ: ಸಾಲಗಾರರ ಕಾಟ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವ ಲೋಹಿತ್‌ಕುಮಾರ್ ಕುಟುಂಬ ಕಡುಬಡತನದಿಂದ ಜೀವನ ನಡೆಸುತ್ತಿದ್ದು, ಈಗ ದುಡಿದು ಮನೆಯನ್ನು ನಿರ್ವಹಣೆ ಮಾಡುತ್ತಿದ್ದ ಮಗ ಸಾವನ್ನಪ್ಪಿರುವುದರಿಂದ ಈಗ ಕುಟುಂಬ ತುಂಬಾ ಸಂಕಷ್ಟಕ್ಕೆ ಸಿಲುಕಿದೆ. ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ವಳಗೆರೆಮೆಣಸ ಗ್ರಾಮಸ್ಥರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.01.2025 ಭಾನುವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತಪಿತ್ತ), ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಬ್ರೈಡಲ್ ಜ್ಯೂವೆಲ್ಲರಿ ಶೋ, ಸ್ಥಳ: ಮೈಸೂರು ಶೋ ರೂಮ್, ಬಿ.ಎನ್.ರಸ್ತೆ ಬೆಳಗ್ಗೆ 10 ರಿಂದ.

■ **ಹಾರ್ಟ್ ಸಂಸ್ಥೆ, ರೋಟರಿ ಕ್ಲಬ್ ಆಫ್ ಮೈಸೂರ್ ವೆಸ್ಟ್, ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ನಾರಾಯಣ ಹೆಲ್ತ್, ಎಎಸ್‌ಜಿ ಕಣ್ಣಿನ ಆಸ್ಪತ್ರೆ:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ರಾಮಕೃಷ್ಣ ಶಾಲೆಯ ಆವರಣ, ಬೆಳಗ್ಗೆ 10.30 ರಿಂದ.

■ **ಶ್ರೀ ನಟರಾಜ ಪ್ರದರ್ಶಕ ಕಲೆಗಳ ಕೇಂದ್ರ :** ಮಂಜಿರ ಮಹೋತ್ಸವ, ಉದ್ಘಾಟನೆ: ವಿದ್ವಾನ್ ಡಾ.ಸತ್ಯ ನಾರಾಯಣರಾಜು, ಮುಖ್ಯ ಅತಿಥಿಗಳು: ವಿದುಷಿ ಡಾ.ಕೃಪಾ ಫಡ್ಕೆ, ಅಧ್ಯಕ್ಷತೆ: ಶ್ರೀ ನಟರಾಜ ಪ್ರದರ್ಶಕ ಕಲೆಗಳ ಕೇಂದ್ರದ ಅಧ್ಯಕ್ಷ ಎಂ.ಕೆ.ಬಾಲರಾಜು, ಸಂಜೆ 6.15ಕ್ಕೆ ಅಂತರ ರಾಷ್ಟ್ರೀಯ ಭರತನಾಟ್ಯ ನೃತ್ಯ ದಂಪತಿ ವಿದ್ವಾನ್ ಶಿಜಿತ್ ನಂಬಿಯಾರ್ ಮತ್ತು ವಿದುಷಿ ಪಾರ್ವತಿ ಮೆನನ್; ಸಂಜೆ 7.30ಕ್ಕೆ ಮೈಸೂರಿನ ಉದಯೋನ್ಮುಖ ಕಲಾವಿದೆಯರಾದ ವಿದುಷಿ ಪೂಜಾ ಸುಗಮ್ ಮತ್ತು ವಿದುಷಿ ಸಮೀಕ್ಷಾ ಅವರಿಂದ ಯುಗಳ ನೃತ್ಯ ಪ್ರದರ್ಶನ, ಸ್ಥಳ: ಗಾನಭಾರತೀ ರಮಾ ಗೋವಿಂದ ಕಲಾ ವೇದಿಕೆ.

■ **ಭೂಮಿಕಾ ಅಸೋಸಿಯೇಟ್ಸ್, ದಿವಂಗತ ಮೈಕ್ ಚಂದ್ರು ಗೆಳೆಯರ ಬಳಗ :** ಮಧುರ ಗಾನಾಮೃತ, ಕನ್ನಡ ಹಾಗೂ ಹಿಂದಿ ಚಿತ್ರಗೀತೆಗಳ ರಸಮಂಜರಿ ಕಾರ್ಯಕ್ರಮ, ಸ್ಥಳ: ಶಾರದಾ ವಿಲಾಸ ಶತ ಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಅಘಹರಾನಂದ ಅವರಿಂದ ಶ್ರೀ ರಾಮಕೃಷ್ಣರ ಭಗವದನುಭವ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಭೂಮಿ ಬಳಗ, ಮೈಸೂರು:** ಮಾತುಕತೆ, ವಿಷಯ: ಸಂಗಾತಿಯರು ಸಿಗದ ಸಂಕಟ ಮತ್ತು ಹೆಣ್ಣು ಭ್ರೂಣ ಹತ್ಯೆ: ಸಮಸ್ಯೆ ಮತ್ತು ಪರಿಹಾರ, ಉದ್ಘಾಟನೆ: ರೈತ ಮುಖಂಡ ಕೃಷ್ಣೇಗೌಡ, ಎ.ಜಿ. ಅನಿತ್‌ರಾಜ, ಅಧ್ಯಕ್ಷತೆ: ಡಾ.ಹಿ.ಶಿ.ರಾಮಚಂದ್ರೇಗೌಡ, ಸ್ಥಳ: ಬಿ.ವಿ.ಕಾರಂತ ರಂಗಚಾವಡಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಸ್ವದೇಶಿ ಜಾಗರಣ ಮಂಚ್:** ಸ್ವದೇಶಿ ಮೇಳ–2025ದ ಸಮಾರೋಪ ಸಮಾರಂಭ, ಬೆಳಗ್ಗೆ 11ರಿಂದ ಆಯುರ್ವೇದ ಆರೋಗ್ಯ ಶಿಬಿರ, ಡಾ.ಅರುಣ್‌ಕುಮಾರ್ ಅವರಿಂದ, ಸಂಜೆ 5ರಿಂದ ವಿದ್ವಾನ್ ರಾಕೇಶ್ ಅಯ್ಯರ್ ಮತ್ತು ತಂಡದಿಂದ ಶಾಸ್ತ್ರೀಯ ಸಂಗೀತ ಗಾಯನ, ಸಂಜೆ 7ರಿಂದ ಕರ್ನಾಟಕ ಕಲಾ ದರ್ಶಿನಿ ಅವರಿಂದ ಶಿವಪಂಚಾಕ್ಷರ ಮಹಿಮೆ ನಾಟಕ ಪ್ರದರ್ಶನ, ನಿರ್ದೇಶನ : ಯಕ್ಷಗುರು ಶ್ರೀನಿವಾಸ್ ಸಾಸ್ತಾನ, ಸ್ಥಳ: ಮಹಾರಾಜ ಕಾಲೇಜು ಮೈದಾನ.

■ **ವಾಸವಿ ಸೇವಾ ಸಮಿತಿ, ಮೈಸೂರು ಸೌತ್, ಶ್ರೀ ವಾಸವಿ ಟ್ರಸ್ಟ್, ಮೈಸೂರು ಸೌತ್:** ಇಂದಿನ ವಿದ್ಯಾರ್ಥಿಗಳೇ ಮುಂದಿನ ಭವ್ಯ ಭಾರತವನ್ನು ರೂಪಿಸುವ ರೂವಾರಿಗಳು ಕುರಿತು ಕಾರ್ಯಕ್ರಮ, ಮುಖ್ಯ ಅತಿಥಿಗಳು: ಮುಕುಂದ್ ಗುರೂಜಿ, ರಾಷ್ಟ್ರೀಯ ಯೋಗಪಟು ತಿರುಮಲ ಯೋಗ ಪ್ರಕಾಶ್, ವಾಸವಿ ಸೇವಾ ಸಮಿತಿ ಮೈಸೂರು ಸೌತ್ ಅಧ್ಯಕ್ಷ ಸಂಪತ್‌ಕುಮಾರ್, ಶ್ರೀವಾಸವಿ ಟ್ರಸ್ಟ್ ಅಧ್ಯಕ್ಷ ಎ.ಆರ್. ನಾಗೇಂದ್ರ ಶೆಟ್ಟಿ, ಸ್ಥಳ: ನಂ.8, ಪ್ರಾರ್ಥನಾ ಮಂದಿರ, ವಿಶ್ವೇಶ್ವರನಗರ, ಸಂಜೆ 4ಕ್ಕೆ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಪಶ್ಚಿಮ :** 27ನೇ ವಾರ್ಷಿಕ ಸಂಗೀತೋತ್ಸವ, ಶ್ರೀ ಪುರಂದರ ಹಾಗೂ ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ, ನಾಡಿನ ಪ್ರಸಿದ್ಧ ವಿದ್ವಾಂಸರು, ವಿದುಷಿಯ ರಿಂದ ಗೋಷ್ಠಿ ಗಾಯನ, ವಿದ್ವಾನ್ ಟಿ.ವಿ.ರಾಮಪ್ರಸಾದ್ ಅವರಿಂದ ಗಾಯನ, ವಿದ್ವಾನ್ ಅಚ್ಯುತರಾವ್–ಪಿಟೀಲು, ವಿದ್ವಾನ್ ಫಣೀಂದ್ರ ಭಾಸ್ಕರ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸರಸ್ವತಿಪುರಂ, ಸಂಜೆ 6ಕ್ಕೆ.

■ **ರಾಗ ವೈಭವ:** ಪಂಡಿತ್ ಸಂಜೀವ್ ಅಭ್ಯಂಕರ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಗಾಯನ, ಪಂಡಿತ್ ವ್ಯಾಸಮೂರ್ತಿ ಕಟ್ಟಿ–ಹಾರ್ಮೋನಿಯಂ, ಪಂಡಿತ್ ಯೋಗೀಶ್ ಭಟ್–ತಬಲ, ಮುಖ್ಯ ಅತಿಥಿಗಳು: ಡಾ.ಎಂ.ಜಗನ್ನಾಥ್ ಶೆಣೈ, ಕೆ.ವಿ.ಮೂರ್ತಿ, ಶ್ರೀಮತಿ ಲಲಿತಾಮೂರ್ತಿ, ಡಾ.ಆರ್.ಪ್ರತಿಭಾ, ಕೆ.ಎಲ್.ಗೌಡ, ಗೋವಿಂದೇಗೌಡ, ಕೆ.ದಶರಥ್, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಅಖಿಲ ಕರ್ನಾಟಕ ಪರಮಪೂಜ್ಯ ಡಾ.ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರ ಭಕ್ತ ವೃಂದ:** ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಾಸೋಹ ದಿನ 6ನೇ ವರ್ಷದ ಪುಣ್ಯಸ್ಮರಣೆ, ಉಪಸ್ಥಿತರು: ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸಿದ್ಧಲಿಂಗ ಸ್ವಾಮೀಜಿ, ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ, ಶ್ರೀ ಚಿದಾನಂದ ಸ್ವಾಮೀಜಿ, ಗುರುಶಾಂತ ಸ್ವಾಮೀಜಿ, ಶ್ರೀಕಂಠ ಸ್ವಾಮೀಜಿ, ಮುಖ್ಯ ಅತಿಥಿಗಳು: ಸಂಸದರಾದ ಯದುವೀರ್ ಒಡೆಯರ್, ಡಾ.ಸಿ.ಎನ್.ಮಂಜುನಾಥ್, ಶಾಸಕ ಶ್ರೀವತ್ಸ, ನಟ ಡಾಲಿ ಧನಂಜಯ, ಮಾಜಿ ಸಂಸದ ಪ್ರತಾಪ್ ಸಿಂಹ, ಎಂಎಲ್‌ಸಿ ಕೆ.ವಿವೇಕಾನಂದ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5ಕ್ಕೆ.

■ **ಬಸವ ಮಾರ್ಗ ಫೌಂಡೇಷನ್ :** ತುಮಕೂರು ಶ್ರೀ ಸಿದ್ದಗಂಗಾ ಮಠದ ಪೀಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಅವರಿಂದ ಧಾರ್ಮಿಕ ಉಪನ್ಯಾಸ, ಸ್ಥಳ: ಬಸವ ಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರ, ರಿಂಗ್ ರಸ್ತೆ, ಮಧ್ಯಾಹ್ನ 3ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಶ್ವಾಸ (ಉಬ್ಬಸ, ದಮ್ಮು ಕಾಯಿಲೆ) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.

■ **ಬಹುಜನ ವಿದ್ಯಾರ್ಥಿ ಸಂಘ, ಮೈಸೂರು ವಿಭಾಗ:** ಸಂವಿಧಾನೋತ್ಸವ, ಸಂಘದ ಬೆಳ್ಳಿ ಮಹೋತ್ಸವ ಕಾರ್ಯಕ್ರಮ, ಉಪಸ್ಥಿತರು: ಪೂಜ್ಯ ಬೋಧಿರತ್ನ ಬಂತೇಜಿ, ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಪ್ರೊ.ಹೊನ್ನು ಸಿದ್ದಾರ್ಥ, ಪ್ರೊ.ಡಿ.ಆನಂದ್, ಡಾ.ನಂಜಯ್ಯ ಹೊಂಗನೂರು, ಡಾ.ಮಾರುತಿ, ಡಾ.ಬಿ.ರಮೇಶ್, ಡಾ.ಜೆ.ವಿಜಯ ನರಸಿಂಹ, ಡಾ. ವಡ್ಡಗೆರೆ ನಾಗರಾಜಯ್ಯ, ಪುರುಷೋತ್ತಮ್, ರಂಗೇಗೌಡ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10.30ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಮೈ ಫ್ಯಾಮಿಲಿ ನಾಟಕ ಪ್ರದರ್ಶನ, ಸ್ಕ್ರಿಪ್ಟ್ : ಸತೀಶ್ ತಿಪಟೂರು, ನಿರ್ದೇಶನ : ಗಣೇಶ್ ಮಂದಾರ್ತಿ, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ

ಸುತ್ತೂರು ಜಾತ್ರಾ ಮಹೋತ್ಸವ

■ **ವಸ್ತುಪ್ರದರ್ಶನ, ಕೃಷಿ ಮೇಳ, ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣಾ ಶಿಬಿರ, ದೋಣಿ ವಿಹಾರ ಉದ್ಘಾಟನೆ :** ಸಮ್ಮುಖ: ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಮಾಜಿ ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿ, ವಸ್ತುಪ್ರದರ್ಶನ ಉದ್ಘಾಟನೆ: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೃಷಿ ಮೇಳ : ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಸಾಂಸ್ಕೃತಿ ಮೇಳ: ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಆರೋಗ್ಯ ತಪಾಸಣೆ : ಸಂಸದ ಡಾ.ಕೆ.ಸುಧಾಕರ್, ದೋಣಿ ವಿಹಾರ : ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಸಂಜೆ 4ಕ್ಕೆ

■ **ಸಂಚಲನ ಮೈಸೂರು :** ರಾಜ್ಯ ಮಟ್ಟದ ಮಕ್ಕಳ ನಾಟಕೋತ್ಸವ, ಜಾನಪದ ಉತ್ಸವದ ಸಮಾರೋಪ ಸಮಾರಂಭ, ಉಪಸ್ಥಿತರು: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಶಾಸಕ ಜಿ.ಟಿ.ದೇವೇಗೌಡ, ಡಾ.ಎಸ್.ತುಕಾರಾಮ್, ರಂಗೇಗೌಡ, ಮಂಡ್ಯ ರಮೇಶ್, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ.

ಗಣರಾಜ್ಯೋತ್ಸವ ಕಾರ್ಯಕ್ರಮಗಳು

■ **ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳು:** ಗಣರಾಜ್ಯೋತ್ಸವ, ಧ್ವಜಾರೋಹಣ: ಹೂಟಗಳ್ಳಿ ನಗರಸಭೆ ಆಯುಕ್ತ ಬಿ.ಎನ್.ಚಂದ್ರಶೇಖರ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಮುಖ್ಯ ಅತಿಥಿಗಳು: ಆಡಳಿತ ಮಂಡಳಿ ಸದಸ್ಯ ಎಸ್. ಶಿವಲಿಂಗಯ್ಯ, ಉಪಸ್ಥಿತರು: ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ, ಸಿದ್ದಯ್ಯ, ಡಾ.ಸೀಮ, ಉಪ ಪ್ರಾಂಶುಪಾಲ ಕೆ.ಎಂ.ಸುರೇಶ, ಸ್ಥಳ: ಬಯಲು ರಂಗಮಂದಿರ, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಆವರಣ, ಬೆಳಗ್ಗೆ 7.30ಕ್ಕೆ

■ **ಶ್ರೀ ನಟರಾಜ ಪ್ರತಿಷ್ಠಾನ:** 76ನೇ ಗಣರಾಜ್ಯೋತ್ಸವ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಧ್ವಜಾರೋಹಣ: ಮಾಜಿ ಸೈನಿಕ ನಂಜುಂಡಸ್ವಾಮಿ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಶಿವರಾಜಪ್ಪ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 8ಕ್ಕೆ

■ **ಶ್ರೀ ರಾಮಕೃಷ್ಣ ವಿದ್ಯಾಕೇಂದ್ರ, ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿಪೂರ್ವ ಕಾಲೇಜು:** ಗಣರಾಜ್ಯೋತ್ಸವ, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಪಾಪೇಗೌಡ, ಮುಖ್ಯ ಅತಿಥಿಗಳು: ಪ್ರಾಚಾರ್ಯ ಬಾಲಾಜಿ, ಪ್ರೊ.ಚಂದ್ರಶೇಖರ್, ಸಿ.ಶಿವಪ್ಪ, ವಿ.ಪಿ. ಸವಿತಾ, ಜಿ.ಎನ್.ವಿಶ್ವನಾಥ್, ಸ್ಥಳ: ಶಾರದಾ ಸಭಾಂಗಣ, ಬೆಳಗ್ಗೆ 8ಕ್ಕೆ

■ **ಕರ್ನಾಟಕ ರಾಜ್ಯ ಮುಕ್ತ ವಿವಿ:** ಗಣರಾಜ್ಯೋತ್ಸವ, ಅಧ್ಯಕ್ಷತೆ: ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು: ವಿಶ್ರಾಂತ ಕುಲಪತಿ ಪ್ರೊಎನ್.ಎಸ್.ರಾಮೇಗೌಡ, ಮಾಜಿ ಎಂಎಲ್‌ಸಿ ಸಿ.ರಮೇಶ್, ಸ್ಥಳ: ಆಡಳಿತ ಭವನ ಮುಂಭಾಗ, ಕರಾಮುವಿವಿ, ಬೆಳಗ್ಗೆ 8ಕ್ಕೆ.

■ **ಅಣ್ಣಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ :** ಗಣರಾಜ್ಯೋತ್ಸವ, ಮುಖ್ಯ ಅತಿಥಿಗಳು : ಇತಿಹಾಸ ತಜ್ಞ ಪ್ರೊ. ಪಿ.ವಿ. ನಂಜರಾಜ ಅರಸ್, ಎಎಂಇಎಸ್ ನಿರ್ದೇಶಕ ಎಸ್. ಸೌಮ್ಯ, ಸ್ಥಳ: ಶ್ರೀ ಭೈರವೇಶ್ವರ ಪ್ರೌಢಶಾಲೆ, ಹೆಬ್ಬಾಳು 1ನೇ ಹಂತ, ಬೆಳಗ್ಗೆ 8.30ಕ್ಕೆ

■ **ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ :** ಗಣರಾಜ್ಯೋತ್ಸವ ದಿನಾಚರಣೆ, ಅಧ್ಯಕ್ಷತೆ : ಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು : ಮಾಜಿ ಸಿಂಡಿಕೇಟ್ ಸದಸ್ಯ ಪ್ರೊ. ಜಿ.ಸಿ. ರಾಜಣ್ಣ, ಆಡಳಿತ ಮಂಡಳಿ ಸದಸ್ಯ ಪಿ. ನಾಗರಾಜು, ಸ್ಥಳ: ಸಂಸ್ಥೆ ಆವರಣ, ಬೆಳಗ್ಗೆ 8.30ಕ್ಕೆ.

■ **ಶಾರದಾ ವಿಲಾಸ ಶಿಕ್ಷಣ ಸಂಸ್ಥೆ:** ಗಣರಾಜ್ಯೋತ್ಸವ, ಧ್ವಜಾರೋಹಣ: ಆಡಳಿತ ಮಂಡಳಿ ಹಿರಿಯ ಸದಸ್ಯ ಎಸ್.ಎಲ್.ರಾಮಚಂದ್ರ, ಮುಖ್ಯ ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ, ಸ್ಥಳ: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ, ಬೆಳಗ್ಗೆ 8.30ಕ್ಕೆ

■ **ಜೆ.ಪಿ.ನಗರ ಲಯನ್ಸ್ ಕ್ಲಬ್ :** ಬೆಳಗ್ಗೆ 8.30ಕ್ಕೆ ಗಣರಾಜ್ಯೋತ್ಸವ ಕಾರ್ಯಕ್ರಮ, ಸ್ಥಳ: ಡಾ. ಪುಟ್ಟರಾಜ ಗವಾಯಿಗಳ ಕ್ರೀಡಾಂಗಣ; ಸಂಜೆ 5ರಿಂದ ಸ್ವರ ಮಾಧುರ್ಯ ಗಾನ ಬಳಗದವರಿಂದ ಹಳೆಯ ಕನ್ನಡ ಚಿತ್ರಗೀತೆಗಳ "ನಮ್ಮೊಳಗೊಂದು ನಮ್ಮ ಹಾಡು" ಕಾರ್ಯಕ್ರಮ, ಸ್ಥಳ: ಡಾ.ಪುಟ್ಟರಾಜಗವಾಯಿಗಳ ಯೋಗ ಮತ್ತು ಧ್ಯಾನ ಮಂದಿರ.

■ **ಆದಿ ಕರ್ನಾಟಕ ಮಹಾಸಂಸ್ಥೆ :** ಸಂವಿಧಾನ ಜಾರಿಯ ವಜ್ರ ಮಹೋತ್ಸವ ಆಚರಣೆ ಹಾಗೂ ಮೆರವಣಿಗೆ, ಧ್ವಜಾರೋಹಣ: ಪತ್ರಕರ್ತೆ ರಶ್ಮಿ ಕೋಟಿ, ಉಪಸ್ಥಿತರು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಿದ್ದರಾಜು, ಪುರುಷೋತ್ತಮ್, ಸಿದ್ದಸ್ವಾಮಿ, ಹೆಚ್.ವಾಸು, ಆರ್.ಸಿ.ಮಹೇಶ್, ರಾಮಸ್ವಾಮಿ, ಸಿ.ಗಂಗಾಧರ, ಸ್ಥಳ: ಅಂಬೇಡ್ಕರ್ ಉದ್ಯಾನವನ, ಅಶೋಕಪುರಂ, ಬೆಳಗ್ಗೆ 8.30ಕ್ಕೆ

■ **ಟಿಎನ್‌ಎಸ್ ಆದರ್ಶ ವಿದ್ಯಾರ್ಥಿ ನಿಲಯ :** 76ನೇ ಗಣರಾಜ್ಯೋತ್ಸವ, ಧ್ವಜಾರೋಹಣ : ಟಿಎನ್‌ಎಸ್ ಆದರ್ಶ ವಿದ್ಯಾರ್ಥಿ ನಿಲಯ ಸಂಸ್ಥಾಪಕರಾದ ಎಂ. ಪ್ರಫುಲ್‌ಕುಮಾರ್, ಸ್ಥಳ: ವಿದ್ಯಾರ್ಥಿ ನಿಲಯ ಆವರಣ, ಎನ್.ಆರ್. ಮೊಹಲ್ಲಾ, ಬೆಳಗ್ಗೆ 9ಕ್ಕೆ.

■ **ಚಾಮುಂಡಿ ಚಿಲ್ಡ್ರನ್ಸ್ ಹೋಂ:** ಗಣರಾಜ್ಯೋತ್ಸವ, ಮುಖ್ಯ ಅತಿಥಿಗಳು: ಎಂ.ರವಿಚಂದ್ರ, ಎಂ.ಸಿ.ನಂದಕುಮಾರ್, ಸ್ಥಳ: ಚಾಮುಂಡಿ ಚಿಲ್ಡ್ರನ್ಸ್ ಹೋಂ, ಬೃಂದಾವನ ಬಡಾವಣೆ, ಬೆಳಗ್ಗೆ 9.30ಕ್ಕೆ

■ **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ:** ಗಣರಾಜ್ಯೋತ್ಸವ, ಅಧ್ಯಕ್ಷತೆ: ಸಂಸ್ಥೆ ಅಧ್ಯಕ್ಷ ಎಂ.ರಾಮಪ್ಪ, ಅತಿಥಿಗಳು: ಡಾ.ಪಿ.ಎನ್. ಹೇಮಚಂದ್ರ, ಸ್ಥಳ: ಸಂಸ್ಥೆ ಆವರಣ, ರೂಪಾನಗರ, ಬೆಳಗ್ಗೆ 9.30ಕ್ಕೆ.

■ **ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** ಗಣರಾಜ್ಯೋತ್ಸವದ ಅಂಗವಾಗಿ ಗಣರಾಜ್ಯದ ನಡೆ ಸಂವಿಧಾನದ ಆಶಯದ ಕಡೆ: ಒಂದು ಅವಲೋಕನ ಉಪನ್ಯಾಸ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊಎನ್.ಕೆ. ಲೋಕನಾಥ್, ವಿಶೇಷ ಉಪನ್ಯಾಸ, ಪ್ರೊ.ಡಿ.ಡೊಮಿನಿಕ್ ಅವರಿಂದ, ಅಧ್ಯಕ್ಷತೆ: ಹಿರಿಯ ಪ್ರಾಧ್ಯಾಪಕ ಡಾ.ಜೆ.ಸೋಮಶೇಖರ್, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಭೀಮ್ ಸೇನೆ :** ಕಾರ್ಯಾಲಯ ಉದ್ಘಾಟನೆ, ಉದ್ಘಾಟನೆ: ಪ್ರೊ.ಕೆ.ಎಸ್.ಭಗವಾನ್, ಸ್ಥಳ: ಕೆಎಸ್‌ಆರ್‌ಟಿಸಿ ನಗರ ಬಸ್ ನಿಲ್ದಾಣ, ಕೆ.ಆರ್. ವೃತ್ತ, ಬೆಳಗ್ಗೆ 11ಕ್ಕೆ.

■ **ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ:** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಹುತಾತ್ಮ ದಿನಾಚರಣೆ, ಕಿತ್ತೂರು ರಾಣಿ ಚೆನ್ನಮ್ಮ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ಕುರುಬರಹಳ್ಳಿ ವೃತ್ತ, ಮಧ್ಯಾಹ್ನ 12ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾ.

■ **ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆವರಣ :** 76ನೇ ಗಣರಾಜ್ಯೋತ್ಸವ, ಸಮ್ಮುಖ: ಶ್ರೀ ಮಹಾಂತ ಸ್ವಾಮೀಜಿ, ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಶಂಕರ ಬಿದರಿ, ಧ್ವಜಾರೋಹಣ: ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ಮುಖ್ಯ ಅತಿಥಿಗಳು: ವೆಂಕಟರಾವ್ ನಾಡಗೌಡ, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ಪ್ರಶಾಂತ್ ಕಲ್ಲೂರ್, ಜೆ.ಡಿ.ವೀರಪ್ಪ, ಬೆಳಗ್ಗೆ 8ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ರಾಜಶೇಖರ ಜಮದಂಡಿ, 6.15 ರಾಷ್ಟ್ರ ವಂದನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎನ್.ಹೇಮಾ, ಹಂಸಿನಿ. ಎಸ್.ಕುಮಾರ್, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು, 8.40 ಗಣರಾಜ್ಯೋತ್ಸವ ಸಂದರ್ಭದಲ್ಲಿ ಕರ್ನಾಟಕದ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರಿಂದ ಸಂದೇಶ, 9.35 ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಸೊಸೈಟಿ, 9.40 ನವದೆಹಲಿಯ ಕರ್ತವ್ಯ ಪಥದಲ್ಲಿ ಜರುಗಲಿರುವ ಗಣರಾಜ್ಯೋತ್ಸವ ಪಥ ಸಂಚಲನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ನವದೆಹಲಿಯ ವಾರ್ ಮೆಮೋರಿಯಲ್‌ನಲ್ಲಿ ನಡೆಯುವ ಸಮಾರಂಭದ ನೇರ ವೀಕ್ಷಕ ವಿವರಣೆ, **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ದೇವಿರಮ್ಮ ಮತ್ತು ಸಂಗಡಿಗರಿಂದ ಭೈರವನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ದೀಪಾ ಸತ್ಯನಾರಾಯಣ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಮುತ್ತಿನಹಾರ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ : ಮೈಸೂರು. ಎ.ಚಂದನ್‌ಕುಮಾರ್–ಕೊಳಲು, 4.45 ಚಿತ್ರಗೀತೆಗಳು, 5.05 ಮೈಸೂರಿನಲ್ಲಿ ಜರುಗಿದ 76ನೇ ಗಣರಾಜ್ಯೋತ್ಸವ ಸಮಾರಂಭದ ಬಾನುಲಿ ವರದಿ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 6.51 ಕೃಷಿರಂಗ : ಗಣರಾಜ್ಯ ದಿನೋತ್ಸವದ ಮುನ್ನಾ ದಿನದಂದು ಭಾರತದ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ದೇಶವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣದ ಕನ್ನಡ ಅನುವಾದದ ಮರು ಪ್ರಸಾರ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮದ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ರಾಜ್ಯದ ವಿವಿಧೆಡೆ ಜರುಗಿದ ಗಣರಾಜ್ಯೋತ್ಸವ ಸಮಾರಂಭದ ವಿಶೇಷ ವರದಿ, 9.15 ರಂಗಗೀತೆಗಳು–ತಾಯೂರು ಚೆನ್ನನಾಯಕ, 9.30 Radio Scope- ರಾಷ್ಟ್ರೀಯ ವಿಜ್ಞಾನ ಸಂಚಿಕೆ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ವಿದುಷಿ. ಕಲಾಪಿನಿ ಕೊಮ್ಕಲಿ – ಗಾಯನ

ಮೈಸೂರು ಹಾಗೂ ಸುತ್ತಮುತ್ತ ನಾಳೆ...

ನಾಳಿನ ಪಂಚಾಂಗ

27.01.2025 ಸೋಮವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಡಯಾಬಿಟಿಕ್ ರೆಟಿನೋಪತಿ, ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತಪಿತ್ತ), ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಶ್ರೀ ನಟರಾಜ ಪ್ರದರ್ಶಕ ಕಲೆಗಳ ಕೇಂದ್ರ :** ಮಂಜಿರ ಮಹೋತ್ಸವ, ಹೆಸರಾಂತ ಒಡಿಸ್ಸಿ ನೃತ್ಯ ಕಲಾವಿದೆಯರಾದ ವಿದುಷಿ ಅನುಶ್ರೀ ಪದ್ಮನಾಭ ಅವರಿಂದ ನೃತ್ಯ ಕಾರ್ಯಕ್ರಮ, ಸಂಜೆ 7.30ಕ್ಕೆ ಬೆಂಗಳೂರಿನ ಹಿರಿಯ ನೃತ್ಯ ಗುರುಗಳಾದ ವಿದುಷಿ ಶೀಲಾ ಚಂದ್ರಶೇಖರ್, ವಿದುಷಿ ದೀಪ್ತಿ ರಾಧಾಕೃಷ್ಣನ್ ಅವರಿಂದ ನೃತ್ಯ ಕಾರ್ಯಕ್ರಮ, ಸ್ಥಳ: ಗಾನಭಾರತೀ ರಮಾ ಗೋವಿಂದ ಕಲಾ ವೇದಿಕೆ, ಸಂಜೆ 6 ರಿಂದ.

■ **ಅಮೃತಾಂಶು ಟ್ರಸ್ಟ್, ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ :** ಉಚಿತ ಕಣ್ಣಿನ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: 2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಶ್ವಾಸ (ಉಬ್ಬಸ, ದಮ್ಮು ಕಾಯಿಲೆ) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 10ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಇತಿಹಾಸ ಅಧ್ಯಯನ ವಿಭಾಗ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠ:** ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಶ್ರೀ ಜಯಚಾಮರಾಜ ಒಡೆಯರ್ ಕುರಿತು ಪ್ರೊ.ವೈ.ಎಸ್. ನಾಯಕವಾಡಿರವರು ಸಂಪಾದಿಸಿರುವ ಕೃತಿಗಳ ಬಿಡುಗಡೆ ಸಮಾರಂಭ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕೃತಿಗಳ ಬಿಡುಗಡೆ: ಶಾಸಕ ಜಿ.ಟಿ.ದೇವೇಗೌಡ, ಕೃತಿ ಕುರಿತು: ಪ್ರೊ.ಸಿ.ಪಿ.ಸಿದ್ದಾಶ್ರಮ, ಪ್ರೊ.ಕೆ.ಸದಾಶಿವ, ಪ್ರೊ.ಎ.ಸತ್ಯನಾರಾಯಣ, ಅಧ್ಯಕ್ಷತೆ: ಹಿರಿಯ ಪ್ರಾಧ್ಯಾಪಕ ಪ್ರೊ. ವೈ.ಎಸ್.ನಾಯಕವಾಡಿ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮೈಸೂರು ವಿವಿ, ಬೆಳಗ್ಗೆ 11ಕ್ಕೆ.

■ **ವಾಸನ್ ಕಣ್ಣಿನ ಆಸ್ಪತ್ರೆ, ಮೈಸೂರು ಶಾಖೆ, ಹಿರಿಯ ನಾಗರಿಕರ ಮಂಡಳಿ:** ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಹಿರಿಯ ನಾಗರಿಕರ ಮಂಡಳಿ, ಸರಸ್ವತಿ ಸಮುದಾಯ ಭವನ, ಬೆಳಗ್ಗೆ 10 ರಿಂದ.

ಸುತ್ತೂರಿನಲ್ಲಿಂದು, ನಂಜನಗೂಡು ತಾ.

ಸುತ್ತೂರು ಜಾತ್ರಾ ಮಹೋತ್ಸವ

■ **ಸಾಮೂಹಿಕ ವಿವಾಹ:** ಸಮ್ಮುಖ: ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳು, ಡಾ. ಶ್ರೀ ಕಲ್ಲಯ್ಯಜ್ಜನವರು, ಅಧ್ಯಕ್ಷತೆ: ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಉದ್ಘಾಟನೆ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಮಾಂಗಲ್ಯ ವಿತರಣೆ : ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಪ್ರಮಾಣ ಪತ್ರ ವಿತರಣೆ: ಸಚಿವ ಶಿವರಾಜ್ ಎಸ್. ತಂಗಡಗಿ, ಪರಿಕರ ವಿತರಣೆ: ಉದ್ಯಮಿ ರೇಖಾ ಮತ್ತು ಎಸ್.ಎಸ್. ಗಣೇಶ್, ಪ್ರತಿಜ್ಞಾವಿಧಿ ಬೋಧನೆ : ಸಂಸದ ಯದುವೀರ್, ಬೆಳಗ್ಗೆ 10ಕ್ಕೆ.

■ **ರಾಜ್ಯ ಮಟ್ಟದ ಭಜನಾ ಮೇಳ, ದೇಸಿ ಆಟಗಳು, ಸೋಬಾನೆ ಪದ, ರಂಗೋಲಿ ಸ್ಪರ್ಧೆ, ಸುತ್ತೂರು ಜಾತ್ರಾ ನಾಟಕೋತ್ಸವ :** ಸಮ್ಮುಖ : ಶ್ರೀ ಯೋಗಿ ಶ್ರೀನಿವಾಸ ಅರ್ಕ, ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ : ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ನಾಟಕೋತ್ಸವ ಉದ್ಘಾಟನೆ : ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಭಜನಾ ಮೇಳ ಉದ್ಘಾಟನೆ : ಶಿಕ್ಷಣ ಸಚಿವ ಮಧು ಬಂಗಾರಪ್ಪ, ದೇಸಿ ಆಟಗಳ ಉದ್ಘಾಟನೆ : ಸಂಸದೆ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಸೋಬಾನೆ ಪದ ಸ್ಪರ್ಧೆ ಉದ್ಘಾಟನೆ : ಮಾಜಿ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ರಂಗೋಲಿ ಸ್ಪರ್ಧೆ : ಮಾಜಿ ಸಚಿವೆ ಶ್ರೀಮತಿ ರಾಣಿ ಸತೀಶ್, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ

ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಆಧಾರ ಶಿಲೆ–ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ. ರಾಮದಾಸ್ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ.ಪಿ.ರೇವತಿ, ಬಿ.ಶ್ರೀರಾಂ ಭಟ್, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭರವಸೆ ಹೊನಲು–ವೈದ್ಯರ ಕಿವಿಮಾತು ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.05 ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, 9.10 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸಂಗೀತ ವಿದ್ವಾಂಸರಾದ ಟಿ.ಪಿ. ವೈದ್ಯನಾಥನ್ ಅವರೊಂದಿಗೆ ಶ್ರೀನಿವಾಸ ಪ್ರಸಾದ್ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಿ.ಕೆ.ಜಯರಾಮನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ, ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ರೇಖಾ ವೆಂಕಟೇಶ್, 12.45 ನಮ್ಮ ಆರೋಗ್ಯ: 'ಆಸ್ಟಿಯೋಪೊರೋಸಿಸ್–ಕಾರಣಗಳು ಮತ್ತು ಚಿಕಿತ್ಸೆ' ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಕೆ.ಆರ್.ಆಸ್ಪತ್ರೆಯ ಕನ್ಸಲ್ಟೆಂಟ್ ಆರ್ಥೋಪೆಡಿಕ್ ಸರ್ಜನ್ ಡಾ.ಬಲರಾಮ್ ಪಾಟೀಲ್. ಎಂಬವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಮಾತಂಗಿ ಸತ್ಯಮೂರ್ತಿ – ಹಾಡುಗಾರಿಕೆ, 4.00 ಮಹಿಳಾರಂಗ 'ನಾನು ನನ್ನ ಕಂಪನಿ' ವಿವಿಧ ರೀತಿಯ ಸೌಂದರ್ಯ ವರ್ಧಕ ತೈಲಗಳನ್ನು ತಯಾರಿಸುವ ಉದ್ಯಮಿ ಹೀನಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45 ಹಿಂದಿ ಪಾಠ, ಪ್ರಸ್ತುತಿ: ಮಾಧವಿ ಭಂಡಾರಿ, 5.00ಅಪೋಲೋ–ಬಿಜಿಎಸ್ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ವಿಷಯ : ಮಹಿಳೆಯರನ್ನು ಬಾಧಿಸುವ ಕ್ಯಾನ್ಸರ್‌ಗೆ ಚಿಕಿತ್ಸೆ ಭಾಗವಹಿಸುವ ತಜ್ಞರು: ಡಾ.ರಮ್ಯಾ ವೈ, ಸರ್ಜಿಕಲ್ ಆಂಕಾಲಜಿಸ್ಟ್, ನಡೆಸಿಕೊಡುತ್ತಾರೆ: ಬೇದ್ರೆ ಮಂಜುನಾಥ್, ಪ್ರಾಯೋಜಕರು: ಅಪೋಲೋ–ಬಿಜಿಎಸ್ ಆಸ್ಪತ್ರೆ, ಕುವೆಂಪುನಗರ, ಮೈಸೂರು, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ರೈತ ವಿಜ್ಞಾನಿಗಳ ಸಹಭಾಗಿತ್ವದಲ್ಲಿ ಬೀಜೋತ್ಪಾದನೆ ಈ ಕುರಿತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೀಜೋತ್ಪಾದನಾ ವಿಭಾಗದ ವಿಶೇಷ ಅಧಿಕಾರಿ ಡಾ.ಕೆ.ಮಧುಸೂದನ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ –ಇತ್ತೀಚೆಗೆ ಜರುಗಿದ ಮೈಸೂರು ವಿಶ್ವವಿದ್ಯಾಲಯದ 105 ಘಟಿಕೋತ್ಸವದಲ್ಲಿ ಎಂ.ಕಾಂ. ವಿಷಯದಲ್ಲಿ ಪ್ರಥಮ ಡಿಚಿಟಿಇ ನೊಂದಿಗೆ 3 ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ಗಳಿಸಿದ ಮೈಸೂರು ಸಂಜನಾ ಪ್ರಭು ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಮೋಹನ್–ಕ್ಲಾರಿಯೋನೆಟ್, 10.00 ರೂಪಕ – ಹರಿಯನ್ನರಸಿದ ವನಿತೆಯರು, ರಚನೆ ಮತ್ತು ಪ್ರಸ್ತುತಿ : ಡಾ. ಸುಕನ್ಯಾ ಪ್ರಭಾಕರ್, 10.30 ಸವಿನೆನಪು

ಸಿಎಂ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿಗೆ 14 ಮುಡಾ ನಿವೇಶನ ಹಂಚಿಕೆ ಪ್ರಕರಣ

ಮೈಸೂರು ಲೋಕಾಯುಕ್ತ ಎಸ್ಪಿಯಿಂದ ಹೈಕೋರ್ಟ್

ಧಾರವಾಡ ಪೀಠಕ್ಕೆ ನಾಳೆ ತನಿಖಾ ವರದಿ ಸಲ್ಲಿಕೆ

ಮೈಸೂರು, ಜ. 25(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಬಿ.ಎಂ. ಪಾರ್ವತಿ ಅವರಿಗೆ ಮುಡಾದಿಂದ 14 ನಿವೇಶನಗಳನ್ನು ಮಂಜೂರು ಮಾಡಿದ ಪ್ರಕರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಮೈಸೂರು ಎಸ್ಪಿ ಟಿ.ಜೆ. ಉದೇಶ ಅವರು ಸೋಮವಾರ ರಾಜ್ಯ ಉಚ್ಛನ್ಯಾಯಾಲಯದ ಧಾರವಾಡ ಪೀಠಕ್ಕೆ ತನಿಖಾ ವರದಿ ಸಲ್ಲಿಸುವರು.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಕರ್ನಾಟಕ ಲೋಕಾಯುಕ್ತ ಐಜಿಪಿ ಸುಬ್ರಹ್ಮಣ್ಯೇಶ್ವರ ರಾವ್, ಸಿಎಂ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಪರಿಹಾರಾತ್ಮಕವಾಗಿ ವಿಜಯನಗರ 1, 3 ಮತ್ತು 4ನೇ ಹಂತದ ಪ್ರತಿಷ್ಠಿತ ವಸತಿ ಬಡಾವಣೆಗಳಲ್ಲಿ ಅತೀ ಹೆಚ್ಚು ಬೆಲೆಬಾಳುವ



14 ನಿವೇಶನಗಳನ್ನು ಈ ಹಿಂದಿನ ಮುಡಾ ಆಯುಕ್ತ ಡಾ. ಡಿ.ಬಿ. ನಟೇಶ್ ಅಕ್ರಮವಾಗಿ ಮಂಜೂರು ಮಾಡಿದ್ದಾರೆಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ನೀಡಿದ ದೂರಿನ ಕುರಿತು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಸೂಚನೆಯಂತೆ ತನಿಖೆ ನಡೆಸಿರುವ ಕರ್ನಾಟಕ ಲೋಕಾಯುಕ್ತ ಮೈಸೂರು ಎಸ್ಪಿ ಟಿ.ಜೆ. ಉದೇಶ ಅವರು ವರದಿ ಸಲ್ಲಿಸಲೆಂದು ಹಲವು ಪುಟಗಳ ತನಿಖಾ ವರದಿ, ಪೂರಕ ದಾಖಲೆ ಪ್ರತಿಗಳು, ಸಾಕ್ಷ್ಯಾಧಾರಗಳೊಂದಿಗೆ ಧಾರವಾಡ ಹೈಕೋರ್ಟ್ ಪೀಠಕ್ಕೆ ಭೇಟಿ ನೀಡಿದಾಗ, ಸೋಮವಾರ (ಜ. 27) ಬೆಳಗ್ಗೆ ವರದಿ ಸಲ್ಲಿಸುವಂತೆ ನ್ಯಾಯಮೂರ್ತಿಗಳು ಸಲಹೆ ನೀಡಿದ್ದಾರೆ ಎಂದು ಸುಬ್ರಹ್ಮಣ್ಯೇಶ್ವರರಾವ್ ತಿಳಿಸಿದರು. ಜ.27 ರಂದು ಉದೇಶ ಅವರು ಮತ್ತೆ ಧಾರವಾಡಕ್ಕೆ ತೆರಳಿ ಪ್ರಕರಣ ಸಂಬಂಧ ಈವರೆಗೆ ನಡೆದಿರುವ ತನಿಖೆಯ ವರದಿಯನ್ನು ಕೋರ್ಟ್‌ಗೆ ಸಲ್ಲಿಸುವರು ಎಂದ ಅವರು, ತನಿಖೆ ಪೂರ್ಣಗೊಳಿಸಲು ಕಾಲಾವಕಾಶವಿರುವ ಕಾರಣ, ಈವರೆಗಿನ ಸ್ಥಿತಿಯನ್ನಷ್ಟೇ ವರದಿಯಲ್ಲಿ ಸೇರಿಸಿದ್ದು, ತನಿಖೆ ಪೂರ್ಣಗೊಳಿಸಲು ಇನ್ನೂ ಹೆಚ್ಚಿನ ಕಾಲಾವಕಾಶ ಬೇಕಾಗಿದೆ ಎಂದು ತಿಳಿಸಿದರು.

ಸಿಬಿಐಗೆ ವಹಿಸಬೇಕೆಂಬ ಅರ್ಜಿ ವಿಚಾರಣೆ ನಾಳೆ

ಮೈಸೂರು, ಜ. 25(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಮಂಜೂರು ಮಾಡಿದ್ದ ಮುಡಾ ನಿವೇಶನ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕೆಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಜ.27ರಂದು ನಡೆಯಲಿದೆ. ಲೋಕಾಯುಕ್ತ ಎಸ್ಪಿ, ಅಧೀನಾಧಿಕಾರಿಗಳು ಸರ್ಕಾರದಡಿ ಕರ್ತವ್ಯ ನಿರ್ವಹಿಸಬೇಕಾಗಿರುವುದರಿಂದ ಪ್ರಕರಣದ ಆರೋಪಿಗಳಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ನಿ ಬಿ.ಎಂ.ಪಾರ್ವತಿ ಅವರನ್ನು ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸಿ ವಸ್ತುಸ್ಥಿತಿಯ ಹಾಗೂ ನ್ಯಾಯಸಮ್ಮತ ವರದಿ ಸಿದ್ಧಪಡಿಸುತ್ತಾರೆಂಬ ವಿಶ್ವಾಸವಿಲ್ಲದ ಕಾರಣ, ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಸ್ನೇಹಮಯಿ ಕೃಷ್ಣ ಉಚ್ಛನ್ಯಾಯಾಲಯಕ್ಕೆ ಮನವಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ಕೈಗೊಂಡಿರುವ ನ್ಯಾಯಾಲಯವು, ಮುಂದಿನ ವಿಚಾರಣೆಯನ್ನು ಜ. 27ಕ್ಕೆ ನಿಗದಿಪಡಿಸಿದ್ದು, ಅಂದೇ ತೀರ್ಪು ಕಾಯ್ದಿರಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ

ಜ.28 ರಂದು ಆಯವ್ಯಯ ಪೂರ್ವಭಾವಿ ಸಭೆ

ಮೈಸೂರು, ಜ.25– ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ವತಿಯಿಂದ 2025–26 ನೇ ಸಾಲಿನ ಆಯವ್ಯಯ ಪೂರ್ವಭಾವಿ ಸಭೆಯನ್ನು ಜ.28 ರಂದು ಬೆಳಗ್ಗೆ 11 ಗಂಟೆಗೆ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಸಭೆಗೆ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಗ್ರಾ.ಪಂ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮಾಜಿ ನಾಮ ನಿರ್ದೇಶಿತ ಸದಸ್ಯರು ಹಾಗೂ ಸಾರ್ವಜನಿಕರು, ಸಂಘ ಸಂಸ್ಥೆಗಳ ಮುಖ್ಯಸ್ಥರು, ಎನ್‌ಜಿಓ ಹಾಗೂ ಸ್ವಸಹಾಯ ಸಂಘದವರು ಆಗಮಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೂಯಿಸ್ ಬ್ರೈಲ್ ದೃಷ್ಟಿ ವಿಶ್ವಾಸಿಗರ ಆರಾಧ್ಯ ದೈವ

ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಕೃಷ್ಣ ಹೊಂಬಾಳ್

ಮೈಸೂರು, ಜ.25(ಎಂಕೆ)–ದೃಷ್ಟಿ ವಿಶ್ವಾಸಿಗರ ಪಾಲಿಗೆ ಲೂಯಿಸ್ ಬ್ರೈಲ್ ಅವರೇ ಆರಾಧ್ಯ ದೈವ, ವಿದ್ಯಾದಾತ ಎಂದು ಮೈಸೂರು ವಿವಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಕೃಷ್ಣ ಹೊಂಬಾಳ್ ಹೇಳಿದರು.

ಮೈಸೂರಿನ ಲಷ್ಕರ್ ಮೊಹಲ್ಲಾದಲ್ಲಿರುವ ಬೂದುಗುಂಟೆ ಕಾವಾಕ್ಷಮ್ಮ ಕಲ್ಯಾಣ ಮಂಟಪದಲ್ಲಿ ದೃಷ್ಟಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಲೂಯಿಸ್ ಬ್ರೈಲ್ ಅವರ 216ನೇ ಜಯಂತಿ ಆಚರಣೆ ಅಂಗವಾಗಿ ಆಯೋಜಿಸಿದ್ದ ರಾಜ್ಯಮಟ್ಟದ ಉಚಿತ ಆರೋಗ್ಯ, ರಕ್ತದಾನ ಶಿಬಿರ ಹಾಗೂ ರಸಪ್ರಶ್ನೆ ಕಾರ್ಯಕ್ರಮದ ಸಮಾರೋಪದಲ್ಲಿ ಮಾತನಾಡಿದ ಅವರು, ದೃಷ್ಟಿ ರಹಿತರನ್ನೆಲ್ಲಾ, ದೃಷ್ಟಿ ವಿಶ್ವಾಸಿಗರನ್ನಾಗಿ ಮಾಡಿದ ಮಹಾನ್ ವ್ಯಕ್ತಿ ಎಂದು ಶ್ಲಾಘಿಸಿದರು.

ಆರೇ ಆರು ಚುಕ್ಕೆಗಳಲ್ಲಿ ಜಗತ್ತಿನ ಎಲ್ಲಾ ಭಾಷೆಗಳಲ್ಲಿ ಅಕ್ಷರಗಳನ್ನು ಬರೆಯುವಂತಹ ಲಿಪಿಯನ್ನು ಆವಿಷ್ಕರಿಸಿ, ಅಭಿವೃದ್ಧಿಪಡಿಸಿ, ಜಗತ್ತಿನ ದೃಷ್ಟಿರಹಿತರನೆಲ್ಲಾ ದೃಷ್ಟಿ ವಿಶ್ವಾಸಿಗರನ್ನಾಗಿ ಪರಿವರ್ತಿಸಿದ ಅವರ ಆವಿಷ್ಕಾರ ಜಗತ್ತಿನಲ್ಲಿ ನಡೆದ ಒಂದು ವಿಸ್ಮಯವೇ ಆಗಿದೆ. ಲೂಯಿ ಬ್ರೈಲರು ತಾವು ಆವಿಷ್ಕರಿಸಿದ ಲಿಪಿಯ ಮೂಲಕ ದೃಷ್ಟಿ ರಹಿತರ ಬೆರಳುಗಳಲ್ಲಿ ಸ್ಪರ್ಶದ ಬೆಳಕನ್ನು ತುಂಬಿದರು ಎಂದು ನೆನೆದರು.

ನಿಷ್ಪ್ರಯೋಜಕರೆಂದು ಪರಿಗಣಿಸಬಹುದಾಗಿದ್ದ ದೃಷ್ಟಿರಹಿತರೆಲ್ಲಾ ಸಾಮರ್ಥ್ಯಭರಿತ ಮಾನವ ಸಂಪನ್ಮೂಲಗಳನ್ನು ಒಳಗೊಂಡ ವ್ಯಕ್ತಿಗಳಾಗಿ ಪರಿವರ್ತನೆಗೊಂಡು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ಪ್ರಶಂಸನೀಯ. ದೃಷ್ಟಿರಹಿತರೆಲ್ಲರು ಶಿಕ್ಷಣದ ಬಲದಿಂದ ಸ್ವಾವಲಂಬಿಗಳಾಗಿ, ಸ್ವಾಭಿಮಾನಿಗಳಾಗಿ, ಆತ್ಮ ಘನತೆಯಿಂದ ಬದುಕುತ್ತಾ ಇತರರಿಗೂ ಮಾದರಿಯಾಗುತ್ತಿರುವುದು ಅವಲೋಕನಾರ್ಹ ಸಂಗತಿಯಾಗಿದ್ದು, ಲೂಯಿ ಬ್ರೈಲರು ದೃಷ್ಟಿರಹಿತರ ಪಾಲಿಗೆ ವಿಶ್ವಾಕ್ಷರಿ ಎಂದರು.



ಲೂಯಿಸ್ ಬ್ರೈಲ್ ಅವರ 216ನೇ ಜಯಂತಿ ಆಚರಣೆ ಅಂಗವಾಗಿ ಉಚಿತ ಆರೋಗ್ಯ, ರಕ್ತದಾನ ಶಿಬಿರ ಹಾಗೂ ರಸಪ್ರಶ್ನೆ ಕಾರ್ಯಕ್ರಮ ನಡೆಯಿತು.

ಸಮಾಜಮುಖಿಯಾಗಿ ಕೆಲಸ ಮಾಡಬೇಕು: ದೃಷ್ಟಿ ಚಾರಿಟೆಬಲ್ ಟ್ರಸ್ಟ್ ಮೂರು ವರ್ಷಗಳಲ್ಲಿ ವಿನೂತನ ಕಾರ್ಯಕ್ರಮಗಳನ್ನು ಮಾಡುವಲ್ಲಿ ಯಶಸ್ವಿಯಾಗಿದ್ದು, ಇನ್ನಷ್ಟು ಬೆಳೆದು ಸಮಾಜಮುಖಿ ಕೆಲಸ ಮಾಡಬೇಕು. ಟ್ರಸ್ಟ್‌ಗೆ ಸಾಮಾಜಿಕ ಕಳಕಳಿ ಮತ್ತು ಬದ್ಧತೆ ಇದೆ. ರಕ್ತದಾನ ಮತ್ತು ಆರೋಗ್ಯ ಶಿಬಿರ ಆಯೋಜನೆ ಬಹಳ ವಿಶೇಷ ಕಾರ್ಯಕ್ರಮವಾಗಿದೆ. ಸಮಾಜದಿಂದ ಪಡೆಯುವುದು ಎಷ್ಟು ಮುಖ್ಯವೋ ಸಮಾಜಕ್ಕೆ ನಮ್ಮಿಂದ ಕೊಡುವುದು ಅಷ್ಟೇ ಮುಖ್ಯ ಎಂದು ಹೇಳಿದರು.

ಅಂಗವಿಕಲ ವ್ಯಕ್ತಿಗಳ ಕಾಯ್ದೆ ಅಡಿಯಲ್ಲಿ ಆಯುಕ್ತರಾಗಿದ್ದ ಕೆ.ವಿ.ರಾಜಣ್ಣ ಅವರು, ಕರ್ನಾಟಕದಲ್ಲಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣಕ್ಕಾಗಿ ಒಂದು ಆಯೋಗ ಇದೇ ಎಂಬುದನ್ನು ಪರಿಚಯ ಮಾಡಿಕೊಟ್ಟರು. ಊಟೋಪಹಾರವನ್ನು ಉಚಿತವಾಗಿ ಕೊಡುವಂತೆ ಆದೇಶ ಹೊರಡಿಸಿ, ದೊಡ್ಡ ಸಹಾಯ ಮಾಡಿದ್ದರು. ಇಂತಹ ಸಹಾಯ ಮಾಡುವ ಮನೋಭಾವನೆ ಉಳಿದವರಿಗೆ ಬರಲಿ. ಪೂರಕವಾದ ವಾತಾವರಣ ಸೃಷ್ಟಿಯಾಗಲಿ ಎಂದು ಆಶಿಸಿದರು. ನಂತರ ರಸಪ್ರಶ್ನೆ ಸ್ಪರ್ಧೆ ವಿಜೇತರಿಗೆ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. ಮೈಸೂರು ವಿವಿ ನಿವೃತ್ತ ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ.ರಾಮಸ್ವಾಮಿ, ದೃಷ್ಟಿ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಬಿ.ಆರ್. ದಿವಾಕರ್ ಮತ್ತಿತರರಿದ್ದರು.

PUBLIC NOTIFICATION

My client Sri. Thyagaraju.S, S/o Swamy Gowda, aged about 31 years, residing at No. 80/A, 10th Cross, Gaddige-Mysuru Main Road, Bogadi, Mysuru- 570026, is intending to purchase the schedule property from one Smt. Padmanayana V. Shetty, W/o Sri. Vasudeva Shetty, residing at No. 3:105, Bhadra Sadhana, Innanje Village, Kapu Taluk, Udupi District. The said Smt. Padmanayana V. Shetty is the absolute owner in possession of the schedule property to this paper notification and Smt. Padmanayana V. Shetty is selling the schedule property for a bonafide value in favour of my client Sri. Thyagaraju.S. My client before purchasing the schedule property is issuing this public notification calling upon the general public to inform my client within 15 days from the date of this notification, that anybody is having a claim over the schedule property. My client hereby clarifies to the general public that if he does not receive any objection within 15 days of this notification from the general public then my client will proceed to purchase the schedule property from Smt. Padmanayana V. Shetty.

Schedule

Vacant site property bearing No. 9373557815, issued by Patana Panchayati, old No. 152200403000101177, site No. 81, measuring east to west 12.192 meters and north to south 18.288 meters totally measuring 222.9673 Sq. meters, situated at Bogadi, Kasaba Hobli, Mysuru, bounded on:
East by: Property No. 80, West by: Property No. 82, North by: Property No. 86 and, South by: Road.

Sd/- Vinay Babu
NEETHI LAW ASSOCIATES
EWS-63, Panchamantra Road, Kuvempunagar, MYSURU-570023
Mob: 9448516336
Place: Mysore
Date: 25-01-2025





ನಕ್ಕರೆ ಅದೇ ಸ್ವರ್ಗ

ಹುಡುಗಿ : ನಿನಗೆ ಬಹಳ ಬೇಜಾರು ಆಗೋದು ಯಾವಾಗ?

ಹುಡುಗ : ನೀನು ರಾತ್ರಿ ಗುಡ್‌ನೈಟ್ ಅಂತ ಹೇಳಿ ಆನ್‌ಲೈನ್ ಇರ್ತೀಯಲ್ಲಾ ಆವಾಗ

ಮೈಸೂರು ಮಿತ್ರ

ಭಾನುವಾರ, 26 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಸಮುದ್ರದಾಳಕ್ಕೆ ಧುಮುಕು. ಮುತ್ತು ರತ್ನಗಳು ದೊರೆಯುವವು. ಸುರಕ್ಷಿತವಾಗಿರಬೇಕೆಂದು ಅಲ್ಲಾಡದೆ ಕುಳಿತರೆ ದಂಡೆಯ ಮರಳಷ್ಟೆ ನಿನ್ನ ಪಾಲಿಗೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನಲ್ಲಿರುವ ಮಾನ ನಿನಗೆ ಕೊಡುವುದು ಬಹುಮಾನ.

ನಿಮ್ಮ ಪತ್ರಗಳು

■ ಸುತ್ತೂರು ಜಾತ್ರೆಗೆ ವೈಜ್ಞಾನಿಕ ಮೆರುಗು ನೀಡಿದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಮಾನ್ಯರೇ,

ಐತಿಹಾಸಿಕ ಸುತ್ತೂರು ದಿವ್ಯ ಕ್ಷೇತ್ರದಲ್ಲಿ ಜ.26ರಿಂದ 31ರವರೆಗೆ ಸುತ್ತೂರು ಜಾತ್ರೆ ನಡೆಯುತ್ತದೆ. ಸುತ್ತೂರು ಜಾತ್ರೆಗೆ ಸಾಮಾಜಿಕ, ವೈಜ್ಞಾನಿಕ, ಕೃಷಿ ಆಧಾರಿತ ಮೆರುಗು ನೀಡಿದ ಕೀರ್ತಿ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ಸಲ್ಲುತ್ತದೆ. ಸುತ್ತೂರು ಜಾತ್ರೆ ಎಂದರೆ ಜನ ಜಾಗೃತಿ ಎಂದೇ ಜನಪ್ರಿಯವಾಗಿದೆ. ಸುತ್ತೂರು ಜಾತ್ರೆಯ ವೈಶಿಷ್ಟ್ಯ ಎಂದರೆ ಭಜನಾ ಮೇಳ, ವಸ್ತುಪ್ರದರ್ಶನ, ಸಾಮೂಹಿಕ ವಿವಾಹ, ಕೃಷಿ ಮೇಳ, ಕೃಷಿ ವಿಚಾರ ಸಂಕಿರಣ, ಚಿತ್ರಕಲಾ ಮತ್ತು ಗಾಳಿಪಟ ಸ್ಪರ್ಧೆಗಳು, ಚಿತ್ರಸಂತೆ, ಕುಸ್ತಿ ಪಂದ್ಯಗಳು, ಆರೋಗ್ಯ ತಪಾಸಣಾ ಶಿಬಿರಗಳು, ದೋಣಿ ವಿಹಾರ, ಗ್ರಾಮೀಣ ಜನತೆಗಾಗಿ ದೇಸೀ ಆಟಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ನಾಟಕೋತ್ಸವ, ಕಲಾತಂಡಗಳಿಂದ ಪ್ರದರ್ಶನ, 54 ದಿನಗಳ ದನಗಳ ಪರಿಷೆ, ಕಪಿಲಾರತಿ ಮತ್ತು ತೆಪ್ಪೋತ್ಸವ ಇವುಗಳು ಎಲ್ಲರನ್ನೂ ಆಕರ್ಷಿಸುತ್ತವೆ.

ಜಾತ್ರೆಯ ಎಲ್ಲ ಕಾರ್ಯಕ್ರಮಗಳೂ ಜನಪರವಾಗಿರುತ್ತವೆ. ಭಕ್ತಾದಿಗಳು, ಸೇವಾರ್ಥದಾರರು, ಸಾರ್ವಜನಿಕರು, ಸಂಘ ಸಂಸ್ಥೆಗಳು ಹಾಗೂ ಜೆಎಸ್‌ಎಸ್ ವಿದ್ಯಾಪೀಠ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳ ಸಹಕಾರದಿಂದ ನಡೆಯುತ್ತದೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಂತ್ರಿಗಳು, ಮುಖ್ಯಮಂತ್ರಿಗಳು, ಗಣ್ಯರು, ವಿವಿಧ ಮಠದ ಯತಿಗಳು ಭಾಗವಹಿಸುತ್ತಾರೆ. ಒಂದು ವಾರಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ 20 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುತ್ತಾರೆ ಎಂಬುದೇ ಹೆಗ್ಗಳಿಕೆಯ ಸಂಗತಿಯಾಗಿದೆ. ಸುತ್ತೂರು ಜಾತ್ರೆಗೆ ಅಂತರರಾಷ್ಟ್ರೀಯ ಮಹತ್ವವನ್ನು ನೀಡುವಂತೆ ವೈಜ್ಞಾನಿಕ ಜಾತ್ರೆಯನ್ನಾಗಿ ಮಾಡಿದ ಯಶಸ್ಸು ಶ್ರೀ ಡಾ.ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳಿಗೆ ಸಲ್ಲುತ್ತದೆ.

–ಅಮೋಘವರ್ಷ ನಾಗರಾಜ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಮೈಸೂರು

■ ಮಾಯವಾಗುತ್ತಿರುವ ಎಟಿಎಂಗಳು!

ಮಾನ್ಯರೆ,

ಮೈಸೂರಿನ ಚಾಮರಾಜಪುರಂ ಎಟಿಎಂ ಬಾಗಿಲು ಮುಚ್ಚಿರುವ ಬಗ್ಗೆ ಕೊ.ಸು. ನರಸಿಂಹಮೂರ್ತಿಯವರು (24.1.25.ರ 'ಮೈಸೂರು ಮಿತ್ರ' ನಿಮ್ಮ ಪತ್ರದಲ್ಲಿ) ಬರೆದಿದ್ದಾರೆ. ಅದೇ ರೀತಿ ದಟ್ಟಗಳ್ಳಿ 3ನೇ ಹಂತ ಕನಕದಾಸನಗರದ ನೇತಾಜಿ ವೃತ್ತದ ಬಳಿ ಇರುವ ಎಸ್‌ಬಿಐ ಶಾಖೆಯಲ್ಲಿ ಇದ್ದ ಎಟಿಎಂ ಯಂತ್ರವನ್ನು ಒಂದೆರಡು ತಿಂಗಳ ಹಿಂದೆ ಬಿಚ್ಚಿ ಗೂಡ್ಸ್ ಆಟೋದಲ್ಲಿ ತುಂಬಿಕೊಂಡು ಹೋಗುವುದನ್ನು ನಾನು ನೋಡಿದೆ. ಬಹುಶಃ ದುರಸ್ತಿಗಾಗಿ ಅಥವಾ ಹೊಸಯಂತ್ರವನ್ನು ಹಾಕುವ ಸಲುವಾಗಿ ಇದನ್ನು ತೆರವು ಮಾಡಿದ್ದಾರೆ ಎಂದು ಸುಮ್ಮನಾದೆ. ಆದರೆ ಈಗ ಇಷ್ಟು ದಿನವಾದರೂ ಎಟಿಎಂ ಯಂತ್ರವನ್ನು ಮರುಸ್ಥಾಪಿಸದಿರುವುದನ್ನು ನೋಡಿದರೆ ಅದನ್ನು ಗುಜರಿಗೆ ಹಾಕಿ ಎಸ್‌ಬಿಐ ಕೈ ತೊಳೆದುಕೊಂಡಂತೆ ಕಾಣುತ್ತದೆ. ಬ್ಯಾಂಕ್‌ಗಳಲ್ಲಿ, ಎಟಿಎಂಗಳನ್ನು ಕಡಿಮೆ ಮಾಡಿ ಇನ್ನೂ ಹೆಚ್ಚಿನ ಲಾಭ ಗಳಿಸುವ ಹುನ್ನಾರ ಇರಬಹುದು.

ಸಿಬ್ಬಂದಿ ಕೊರತೆ ಹಾಗೂ ಕೆಲಸದ ಹೊರೆ ಕಡಿಮೆ ಮಾಡಿಕೊಳ್ಳುವ ತಂತ್ರವಾಗಿ ಎಟಿಎಂಗಳ ಬಳಕೆಯನ್ನು ವ್ಯಾಪಕಗೊಳಿಸಲಾಯಿತು. ಕೇವಲ 100 ರೂ ಇದ್ದ ಎಟಿಎಂ ಶುಲ್ಕ ಈಗ 300ರ ಗಡಿ ದಾಟಿದೆ. ಇದಲ್ಲದೆ ಬೇರೆ ಬ್ಯಾಂಕ್ ಎಟಿಎಂ ಬಳಸಿದರೆ ಅದಕ್ಕೂ ಶುಲ್ಕ ವಸೂಲಿ ಮಾಡುತ್ತಾರೆ. (ನಿಮಗೆ ನೆನಪಿರಬೇಕು ಇದೇ ಎಸ್‌ಬಿಐನವರು 7–8 ವರ್ಷಗಳ ಹಿಂದೆ ಎಸ್‌ಬಿ ಖಾತೆಗಳಲ್ಲಿ ಮಿನಿಮಮ್ ಬ್ಯಾಲೆನ್ಸ್ ಇಲ್ಲ ಎಂದು ಖಾತೆದಾರರ ಖಾತೆಯಿಂದ ತಿಂಗಳಿಗೆ ಕನಿಷ್ಠ 250 ರಂತೆ ದಂಡ ವಸೂಲಿ ಮಾಡಿ ಜನರ 25 ಸಾವಿರ ಕೋಟಿ ಹಣವನ್ನು ಲೂಟಿ ಮಾಡಿದರು. ಬಹುಶಃ ಇದು ಪ್ರಪಂಚದ ಅತಿ ದೊಡ್ಡ ನೈತಿಕ ದರೋಡೆ ಎಂದರೆ ತಪ್ಪಾಗಲಾರದು! ಇದು ಈಗ ಸುದ್ದಿಯಾಗುತ್ತಿರುವ ಮೈಕ್ರೋ ಫೈನಾನ್ಸ್‌ಗಳ ದಾದಾಗಿರಿಗಿಂತ ಇದು ಕಡಿಮೆಯದೇನಲ್ಲ)

ಸಿಬ್ಬಂದಿ ಕೊರತೆ ನೀಗಿದ ಜೊತೆಗೆ ಎಟಿಎಂ ಶುಲ್ಕದಿಂದಲೂ ಭರ್ಜರಿ ಆದಾಯ ಗಳಿಸುತ್ತಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳು ಪ್ರತಿ 3 ತಿಂಗಳಿಗೊಮ್ಮೆ 6 ಸಾವಿರ, 8 ಸಾವಿರ ನಿವ್ವಳ ಲಾಭ ಗಳಿಸಿದ್ದನ್ನು ಬಹಿರಂಗಗೊಳಿಸುತ್ತಿವೆ. ಇಷ್ಟಾದರೂ ಇವರ ಗ್ರಾಹಕ ಸುಲಿಗೆಯ ಚಾಳಿ ಕಡಿಮೆಯೇ ಆಗುವುದಿಲ್ಲ. ಮಾರವಾಡಿಗಳ ಬಡ್ಡಿಯಂತೆಯೇ ಇವರ ಶುಲ್ಕಗಳು ಕೂಡ ಗ್ರಾಹಕರಿಗೆ ಶೂಲೆಯಾಗಿವೆ. ಆದರೆ ಅಧಿಕಾರದ ಚುಕ್ಕಾಣಿ ಹಿಡಿದವರಿಗೆ ಇವುಗಳು ಕಾಣುವುದಿಲ್ಲ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ವಿಷ್ಣುಭವನದ ಲೋಟವೂ... ಸುಗ್ರೀವಾಜ್ಞೆಯೂ....!

ಮಾನ್ಯರೆ,

ವಿಷ್ಣು ಭವನ ಎಂಬ ಹೋಟೆಲಿನಲ್ಲಿ ಪ್ರತಿನಿತ್ಯ ಸ್ಟೀಲ್ ಲೋಟಗಳು ಕಾಣೆಯಾಗುತ್ತಿದ್ದವು. ಉಪಾಹಾರಕ್ಕೆಂದು ಬರುವ ಕೆಲವು ಗ್ರಾಹಕರು ಆ ಲೋಟಗಳನ್ನು ಕದ್ದೊಯ್ಯುತ್ತಿದ್ದರು. ಲೋಟಗಳು ಕಳುವಾಗುವುದನ್ನು ತಪ್ಪಿಸಲು ಹೋಟೆಲ್ ಮಾಲೀಕರು ಒಂದು ಉಪಾಯ ಮಾಡಿದರು. ಹೋಟೆಲಿನ ಎಲ್ಲಾ ಲೋಟಗಳಲ್ಲಿ 'ವಿಷ್ಣು ಭವನದಿಂದ ಕದ್ದಿದ್ದು' ಎಂಬ ಬರಹವನ್ನು ಕೆತ್ತಿಸಿದರು. ಇದರಿಂದ ಆ ಲೋಟಗಳ ಕಳುವು ನಿಲ್ಲಬಹುದು ಎಂದು ಭಾವಿಸಿದ್ದರು. ಆದರೆ ಲೋಟಗಳ ಕಳುವು ನಿಲ್ಲಲಿಲ್ಲ. ಆ ಲೋಟಗಳನ್ನು ಕದ್ದ ಕಳ್ಳ ಆ ಲೋಟಗಳಲ್ಲಿ ಕೆತ್ತಿದ್ದ ಬರಹದ ಪಕ್ಕದಲ್ಲಿ 'ಅಲ್ಲ' ಎಂದು ಕೆತ್ತಿದ. ಇದರಿಂದ ಆ ಲೋಟಗಳನ್ನು 'ವಿಷ್ಣುಭವನದಿಂದ ಕದ್ದಿದ್ದು ಅಲ್ಲ' ಎಂಬ ಭಾವನೆ ಮೂಡಿಸಿದಂತಾಯಿತು ಎಂಬುದು ಆ ಕಳ್ಳನ ಭಾವನೆ!

ರಸ್ತೆ ವಿಸ್ತರಣೆಗೆ ಅಗತ್ಯವಿರುವ 15.36 ಎಕರೆ ಭೂಮಿಗೆ ರೂ.3014 ಕೋಟಿ ಟಿಡಿಆರ್ ಪರಿಹಾರ ನೀಡಲು ಸುಪ್ರೀಂ ಕೋರ್ಟ್ ನೀಡಿದ್ದ ಆದೇಶದಿಂದ ತಪ್ಪಿಸಿಕೊಳ್ಳಲು ನಮ್ಮ ಸರಕಾರವು ಅರಮನೆ ಆಸ್ತಿಯ ಬಳಕೆ ಮತ್ತು ನಿಯಂತ್ರಣಾಧಿಕಾರವನ್ನು ತಾನೇ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸುಗ್ರೀವಾಜ್ಞೆ ಹೊರಡಿಸಲು ಮುಂದಾಗಿರುವ ವಿಚಾರವನ್ನು ಓದಿದಾಗ ಈ 'ವಿಷ್ಣುಭವನದ ಲೋಟ' ನೆನಪಾಯಿತು!

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

■ ರಾಜಕಾರಣದಲ್ಲಿ ಯಾರೂ ಮಿತ್ರರು ಅಲ್ಲ, ಶತ್ರುಗಳು ಅಲ್ಲ

ಮಾನ್ಯರೆ,

ರಾಜಕಾರಣದಲ್ಲಿ ಯಾರೂ ಶಾಶ್ವತವಾಗಿ ಮಿತ್ರರು ಅಲ್ಲ, ಶತ್ರುಗಳು ಅಲ್ಲ ಎಂಬುದಕ್ಕೆ ಇತ್ತೀಚೆಗೆ ಇಬ್ಬರು ಮಾಜಿ ಸಚಿವರುಗಳ ನಡುವೆ ನಡೆಯುತ್ತಿರುವ ಮಾತಿನ ಕಾಳಗವೇ ಸಾಕ್ಷಿ. ಒಂದು ಕಾಲದಲ್ಲಿ ಆಪ್ತ ಗೆಳೆಯರಾದ ಇಡೀ ಬಳ್ಳಾರಿಯ ಜಿಲ್ಲೆಯನ್ನೇ ತಮ್ಮ ಸಾಮ್ರಾಜ್ಯಶಾಹಿ ಮಾಡಿಕೊಂಡಿದ್ದ ಗಾಲಿ ಜನಾರ್ದನ ರೆಡ್ಡಿ ಮತ್ತು ಬಿ.ಶ್ರೀರಾಮುಲು ಇತ್ತೀಚೆಗೆ ಬಹಿರಂಗವಾಗಿ ಒಬ್ಬರ ಮೇಲೆ ಇನ್ನೊಬ್ಬರು ವೈಯಕ್ತಿಕ ಆರೋಪ ಮಾಡುತ್ತಿರುವುದನ್ನು ಕೇಳಿದರೆ ಏನೆಲ್ಲಾ ಸಮಾಜಘಾತಕ ಕೆಲಸಗಳನ್ನು ಇವರು ಮಾಡಿರಬಹುದು ಎಂದು ಸಾರ್ವಜನಿಕರಿಗೆ ಅನುಮಾನ ಮೂಡುತ್ತದೆ. ಇವರು ಮಾಡಿರುವ ಘನಂದಾರಿ ಕೆಲಸಗಳನ್ನು ಮಾಧ್ಯಮಗಳ ಮುಂದೆ ಒಬ್ಬೊಬ್ಬರಾಗಿ ಒಂದೊಂದು ದಿನ ಹೇಳಲಿ. ಇವರಿಬ್ಬರ ನಿಜ ಬಣ್ಣ ಬಯಲಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ ಮೈಸೂರು.



ಅಡಗೂರು ಹೆಚ್.ವಿಶ್ವನಾಥ್


ಸಾಹಿತಿ–ರಾಜಕಾರಣಿ

ಮೊ: 9663996390

ಹಳ್ಳಿ ಹಕ್ಕಿ ಹಾಡು



ನೆನೆಯೋ 'ಗಾಂಧಿ ಭಾರತ'



> ಈ ಸಮಾವೇಶ ಸ್ವಾತಂತ್ರ್ಯಾನಂತರದ ಭಾರತದಲ್ಲಿ ನಡೆದ ಒಂದು ಅರ್ಥಪೂರ್ಣ ಕಾರ್ಯಕ್ರಮ. ಇದು ನಾಡಿನ ಸ್ವಾತಂತ್ರ್ಯ ಪ್ರೇಮಿಗಳ ಮನಸ್ಸನ್ನು ಗೆದ್ದಿದೆ. ಮಹಾತ್ಮ ಗಾಂಧಿಯವರ ಅಹಿಂಸಾ ಮಾರ್ಗ, ಸರಳ ಜೀವನ, ಸತ್ಯಾಗ್ರಹ, ಉಪವಾಸ ಇದೇ ಪ್ರಪಂಚಕ್ಕೆ ಮಾದರಿ. ಯಾವುದೇ ದ್ವೇಷ–ಅಸೂಯೆ, ಸುಳ್ಳು ರಕ್ತಪಾತಗಳಿಲ್ಲದೆ ಬ್ರಿಟಿಷರಂತಹ ಶಕ್ತಿಶಾಲಿಗಳನ್ನು ಮಣಿಸಿದ ಮಹಾನ್ ಚೇತನ ಗಾಂಧೀಜಿ. ಅಷ್ಟೇ ಏಕೆ ಇಂದಿಗೂ ಬ್ರಿಟಿಷರು ಗೌರವಿಸುವ ಮಹಾನ್ ಮಹಾತ್ಮ ಅವರು. ಇಡೀ ಪ್ರಪಂಚದಲ್ಲಿ ಮತ್ತೊಬ್ಬ ಗಾಂಧಿ ಇಲ್ಲ.

ನಮಸ್ಕಾರಗಳು, ಕುಶಲವೇ... ಕ್ಷೇಮವೇ...

ನಾನು ನಿಮ್ಮೆಲ್ಲರ ವಿಶ್ವನಾಥ್, ನನ್ನ ವಿಶಾಲ ದೇಶದ, ನಾಡಿನ ಪ್ರಚಲಿತ ವಿದ್ಯಮಾನಗಳ ಬಗ್ಗೆ ನನಗೆ ಅತೀವ ಕುತೂಹಲ, ಆಸಕ್ತಿ. ಆಗಾಗ ನಾನು ಇಂತಹ ಸಂಗತಿಗಳ ಬಗೆಗೆ ಮಾತನಾಡುವುದನ್ನು ನೀವೆಲ್ಲ ಕೇಳಿಯೇ ಇರುತ್ತೀರಿ. ಪ್ರಚಲಿತ ವಿದ್ಯಮಾನಗಳ ಬಗೆಗೆ ನನ್ನ ನಿಲುವು, ಅಭಿಪ್ರಾಯ, ತಕರಾರು, ಮೆಚ್ಚುಗೆ, ಖಂಡನೆ ಇವೆಲ್ಲವನ್ನೂ ಜನರೊಂದಿಗೆ ಹೇಳಿಕೊಂಡಾಗ ಆ ವಿಷಯಕ್ಕಿರುವ ಬೇರೆ ಆಯಾಮಗಳೂ ನನ್ನ ಅರಿವಿಗೆ ಬರುತ್ತೆ. ಎಷ್ಟೋ ಬಾರಿ ನನ್ನ ಅಭಿಪ್ರಾಯಕ್ಕೆ, ವಿಚಾರಕ್ಕೆ ಪ್ರಬಲ ವಿರೋಧ ನೀಡುವ ಪ್ರತಿಕ್ರಿಯೆಗಳಿಂದಲೂ ನಾನು ಕಲಿತಿದ್ದೇನೆ, ಪ್ರಭಾವಿತನಾಗಿದ್ದೇನೆ. ಹಾಗಾಗಿ ಪ್ರಜಾಪ್ರಭುತ್ವವಾದಿ ನಾಗರಿಕನಾಗಿ ನನ್ನ ಅನಿಸಿಕೆಗಳನ್ನು ದಾಖಲಿಸುವುದು, ಅದಕ್ಕೆ ನಿಮ್ಮಂತಹ ಪ್ರಬುದ್ಧ ಓದುಗರಿಂದ ಪ್ರತಿಕ್ರಿಯೆಗಳ ಪಡೆಯುವುದನ್ನೂ ನಾನು ಆಸ್ವಾದಿಸುತ್ತೇನೆ. ಒಂದು ಚಲನಶೀಲ ಸಮಾಜದಲ್ಲಿ ಇಂತಹ ಬೌದ್ಧಿಕ ವಿಚಾರ ವಿನಿಮಯ, ಅನುಸಂಧಾನಗಳು ಅಗತ್ಯವಾಗಿವೆ. ಹಾಗೂ ಸತತವಾಗಿ ನಡೆಯುತ್ತಲೇ ಇರಬೇಕೆಂದು ನಾನಾದರೂ ಸದಾ ನಂಬಿದ್ದೇನೆ.

ಹಾಗೆಯೇ ನಾವೆಲ್ಲ ಪ್ರಜಾಪ್ರಭುತ್ವದಲ್ಲಿ, ಸಂವಿಧಾನಬದ್ಧವಾದ, ಅತ್ಯಂತ ವ್ಯವಸ್ಥಿತವಾದ ಆಡಳಿತ ವ್ಯವಸ್ಥೆಯನ್ನು ಒಪ್ಪಿದ್ದೇವೆ. ಸ್ವಾತಂತ್ರ್ಯಾನಂತರ ಭಾರತದ ನಾಗರಿಕರು ಇಂತಹದೊಂದು ಆಡಳಿತ ಕ್ರಾಂತಿಯನ್ನು ಸ್ವಾಗತಿಸಿದ್ದು ನಿಜಕ್ಕೂ ಅತ್ಯಂತ ಸಮಂಜಸ ಸಂಗತಿ. ನಿರಂಕುಶ ಸ್ವಾರ್ಥಪ್ರಭುತ್ವ, ಬ್ರಿಟಿಷರ ದಬ್ಬಾಳಿಕೆಗಳು, ಸಾಮಾಜಿಕ ಅಸಮಾನತೆಗಳಿಂದ ಬೇಸತ್ತಿದ್ದ ಭಾರತೀಯರ ಬದುಕಿನಲ್ಲಿ ಮಹತ್ತರ ಬದಲಾವಣೆಗಳನ್ನು ತಂದಿದ್ದೆಂದರೆ ಅದು ಪ್ರಜಾಪ್ರಭುತ್ವ. ಇದರ ಆಧಾರ ಸ್ಥಂಭಗಳಾದ ಸಂಸತ್ತು, ಸಂವಿಧಾನ, ಚುನಾವಣೆಗಳು, ಅವರೇ ಆರಿಸಿದ ಜನಪ್ರತಿನಿಧಿಗಳ ಮೂಲಕ ನಡೆಯುತ್ತಿರುವ ಆಡಳಿತ ಸೊಗಸಾಗಿದೆ. ಪ್ರಜಾಪ್ರಭುತ್ವ ಜೀವಂತವಾಗಿರಲು, ಭಿನ್ನ ಅಭಿಪ್ರಾಯಗಳನ್ನು ಆಲಿಸಲು, ಚರ್ಚೆಗಳ ಮೂಲಕ ಪರಿಹಾರ ಕಂಡುಕೊಳ್ಳಲು ವಿಭಿನ್ನ ಚಿಂತನೆ, ಸಿದ್ಧಾಂತಗಳ ರಾಜಕೀಯ ವಿಷಯಗಳನ್ನು ಯಾವುದೇ ಪೂರ್ವಗ್ರಹಗಳಿಲ್ಲದೆ ನಾವು ಸ್ವಾಗತಿಸಿ–ಗ್ರಹಿಸಿದಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥವಿರುತ್ತದೆ.

ಭಾರತದಲ್ಲಿಂದು ಜನರು ಅಂತರ್ಜಾಲದ ಬಳಕೆಯನ್ನು ಆನಂದಿಸುತ್ತಿದ್ದಾರೆ. ಪ್ರತಿಯೊಬ್ಬರ ಕೈಯಲ್ಲೂ ಮೊಬೈಲ್‌ಗಳಿವೆ. ಈ ಪುಟ್ಟದಾದ ಉಪಕರಣದ ಬಳಕೆಯ ಎಲ್ಲಾ ಸಾಧ್ಯತೆಗಳನ್ನು ಜನ ಬಲ್ಲರು. ಹಾಗಾಗಿ ಇಂದು ಎಲ್ಲರ ಬಳಿಯೂ ಮಾಹಿತಿಗಳ ಮಹಾಪೂರವೇ ಇದೆ. ಕಂಪ್ಯೂಟರ್‌ಗಳು, ವಿದ್ಯುನ್ಮಾನ ಉಪಕರಣಗಳು, ಮಾಧ್ಯಮಗಳು ಇವೆಲ್ಲ ಜನರನ್ನು ಪ್ರಭಾವಿಸುತ್ತಿವೆ. ಸಾರ್ವಜನಿಕರ ದೃಷ್ಟಿಕೋನದಲ್ಲೂ ಆಮೂಲಾಗ್ರವಾದ ಬದಲಾವಣೆಗಳಾಗಿದೆ. ಇದನ್ನು ರಾಜಕೀಯ ಪಕ್ಷಗಳು ಅರಿತಿದ್ದು ತಮ್ಮನ್ನು ಸಾರ್ವಜನಿಕರೆದುರು ಸಮರ್ಥವಾಗಿ ಬಿಂಬಿಸಿಕೊಳ್ಳಲು ಬಯಸುತ್ತಿರುವುದು ಸಹಜವೇ ಆಗಿದೆ. ಹೊಸ ತಲೆಮಾರುಗಳಿಗೆ ತಮ್ಮ ಪಕ್ಷದ ಉಜ್ವಲ ಚರಿತ್ರೆ, ಪರಂಪರೆ, ಸೇವೆ ಹಾಗೂ ಸಮರ್ಪಣೆಗಳನ್ನು ತಿಳಿಸುವಲ್ಲಿ ಎಲ್ಲಾ ಪ್ರಮುಖ ಪಕ್ಷಗಳು ಪೈಪೋಟಿಯಲ್ಲಿವೆ. ಜನರನ್ನು ತಲುಪಲು ರೋಡ್ ಶೋ, ಬೈಠಕ್, ಸಮ್ಮೇಳನ, ಧಾರ್ಮಿಕ ಉತ್ಸವಗಳು ಇವನ್ನೆಲ್ಲಾ ನಡೆಸುತ್ತಿವೆ.

ಪ್ರತಿ ರಾಜಕೀಯ ಪಕ್ಷಕ್ಕೂ ಇದೇ ಅನಿವಾರ್ಯವಾದ ಪ್ರಹಸನವಾಗಿದೆ. ಪಕ್ಷಗಳ ಅಸ್ತಿತ್ವಕ್ಕಾಗಿ, ಅವುಗಳನ್ನು ಬಲಗೊಳಿಸುವುದಕ್ಕಾಗಿ, ಜನರ ಮನಸ್ಸಲ್ಲಿ ಸದಾ ಉಳಿಯುವುದಕ್ಕಾಗಿ ಇಂತಹ ಕಸರತ್ತುಗಳನ್ನು ಮಾಡಲೇಬೇಕಾಗಿದೆ.

ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ 'ಗಾಂಧಿ ಭಾರತ'ವನ್ನೇ ನೋಡೋಣ. AICCಯ ಸಂಕಲ್ಪ, ಆಶ್ರಯದಲ್ಲಿ ನಡೆದ ಈ ಕಾರ್ಯಕ್ರಮ, ಸಮಾವೇಶದ ಕುರಿತಾದ ವರದಿ, ಚಿತ್ರಗಳನ್ನು ನೀವೆಲ್ಲ ನೋಡಿಯೇ ಇರುತ್ತೀರಾ. 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ್' ಘೋಷಣೆ ನಿಜಕ್ಕೂ ಮಸುಕಾಗುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮ, ಗಾಂಧೀಜಿಯವರ ಸಮರ್ಪಣೆ, ತ್ಯಾಗ, ಡಾ॥ ಭೀಮ್ ರಾವ್ ಅಂಬೇಡ್ಕರ್ ಅವರ ಮಹತ್ವದ ಕೊಡುಗೆ ಹಾಗೂ ದೇಶದ ಬೆನ್ನೆಲುಬಾಗಿರುವ ಸಂವಿಧಾನ ಈ ಎಲ್ಲವನ್ನು ಮತ್ತೊಮ್ಮೆ ಜ್ಞಾಪಿಸಿತು. ನಮ್ಮ ಯುವ ಪೀಳಿಗೆಗೆ ಪಕ್ಷಾತೀತವಾಗಿ ನಾವಿದನ್ನು ತಿಳಿಸಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಸಾವರ್ಕರ್ ಅಂದರೆ ಬಿಜೆಪಿ, ಗಾಂಧಿ ಎಂದರೆ ಕಾಂಗ್ರೆಸ್ ಎಂಬ ಹಳದಿ ಕಣ್ಣುಗಳು ಹೆಚ್ಚಾಗುತ್ತಿರುವುದು ಆತಂಕವನ್ನುಂಟು ಮಾಡುವ ಸಂಗತಿ. ದೇಶ ಭಕ್ತರು, ಗಾಂಧಿ, ನೆಹರು, ಅಂಬೇಡ್ಕರ್ ಇವರೆಲ್ಲರೂ ಈ ದೇಶದ ಆಸ್ತಿಯಲ್ಲವೇ? ಅವರನ್ನು ನೆನೆಯುವುದು, ಅವರ ಆದರ್ಶಮಯ ಜೀವನ, ಅವರು ಪ್ರತಿಪಾದಿಸಿದ ಸಿದ್ಧಾಂತಗಳು, ಅವರೆಲ್ಲರ ತ್ಯಾಗಗಳನ್ನು ಮುಂದಿನ ಪೀಳಿಗೆಗೂ ತಲುಪಿಸುವುದು ಅವಶ್ಯ– ಅನಿವಾರ್ಯ. ಅದುಬಿಟ್ಟು ಇವನ್ನೆಲ್ಲ ಲೇವಡಿ ಮಾಡುವುದು ಸರಿಯೇ? ಕಾಂಗ್ರೆಸ್ ನಡೆಸಿದ ಈ ಸಮಾವೇಶದ ರಾಜಕೀಯ ಕಾರಣಗಳೇನೇ ಇರಲಿ, ಆದರೆ ಸಾಮಾಜಿಕ ಮುಖವನ್ನು ನಿರಾಕರಿಸಬಾರದಲ್ಲವೆ?

ಈ ಸಮಾವೇಶ ಸ್ವಾತಂತ್ರ್ಯಾನಂತರದ ಭಾರತದಲ್ಲಿ ನಡೆದ ಒಂದು ಅರ್ಥಪೂರ್ಣ ಕಾರ್ಯಕ್ರಮ. ಇದು ನಾಡಿನ ಸ್ವಾತಂತ್ರ್ಯ ಪ್ರೇಮಿಗಳ ಮನಸ್ಸನ್ನು ಗೆದ್ದಿದೆ. ಮಹಾತ್ಮ ಗಾಂಧಿಯವರ ಅಹಿಂಸಾ ಮಾರ್ಗ, ಸರಳ ಜೀವನ, ಸತ್ಯಾಗ್ರಹ, ಉಪವಾಸ ಇದೇ ಪ್ರಪಂಚಕ್ಕೆ ಮಾದರಿ. ಯಾವುದೇ ದ್ವೇಷ–ಅಸೂಯೆ, ಸುಳ್ಳು ರಕ್ತಪಾತಗಳಿಲ್ಲದೆ ಬ್ರಿಟಿಷರಂತಹ ಶಕ್ತಿಶಾಲಿಗಳನ್ನು ಮಣಿಸಿದ ಮಹಾನ್ ಚೇತನ ಗಾಂಧೀಜಿ. ಅಷ್ಟೇ ಏಕೆ ಇಂದಿಗೂ ಬ್ರಿಟಿಷರು ಗೌರವಿಸುವ ಮಹಾನ್ ಮಹಾತ್ಮ ಅವರು. ಇಡೀ ಪ್ರಪಂಚದಲ್ಲಿ ಮತ್ತೊಬ್ಬ ಗಾಂಧಿ ಇಲ್ಲ.

ಈ ರೀತಿಯ ಸಮಾವೇಶಗಳು ರಾಜ್ಯದೆಲ್ಲೆಡೆ ನಡೆಯಬೇಕು. ನಮ್ಮ ಯುವ ಜನತೆಗೆ ನಾವು ಅನೇಕ ವಿಚಾರಗಳನ್ನು ತಿಳಿಸಲೇಬೇಕು. ಯಾರನ್ನೇ ಆದರೂ ನೀನು ಯಾವ ಊರಿಗೆ ಸೇರಿದವನು, ಯಾವ ಜಾತಿ, ಯಾವ ಮತ ಎಂದರೆ ಥಟ್ಟನೆ ಹೇಳುತ್ತಾರೆ. ಆದರೆ ನೀವು ಯಾವ ರೀತಿಯಾದ ಆಡಳಿತ ವ್ಯವಸ್ಥೆಯಲ್ಲಿ ಬದುಕುತ್ತಿದ್ದೀರಿಯಾ ಎಂದರೆ ಸರಿಯಾಗಿ ಹೇಳಲಾರ. ಶಿಕ್ಷಣದ ಮೂಲಕ ಜಾತ್ಯಾತೀತ ಜನತಂತ್ರ ವ್ಯವಸ್ಥೆಯಲ್ಲಿ ಬದುಕುತ್ತಿದ್ದಾನೆಂದು ಅವರಿಗೆ ತಿಳಿಸುವಲ್ಲಿ ನಾವು ವಿಫಲರಾಗಿದ್ದೇವೆ. ಬರೀ ಚುನಾವಣೆ–ಸರ್ಕಾರ ರಚನೆ ಗುಂಗಲ್ಲೇ ಮಗ್ನವಾಗಿರುವ ರಾಜಕೀಯ ಪಕ್ಷಗಳೂ ತಮ್ಮ ಜವಾಬ್ದಾರಿ ಮರೆತಿವೆ.


ಬೆಳಗಾವಿಯಲ್ಲಿ ಈ ಸರ್ಕಾರದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಾಯಕತ್ವ ನಿರ್ವಹಣೆ, ಸಾಮರ್ಥ್ಯದಲ್ಲಿ ನಡೆದ "ಗಾಂಧಿ ಭಾರತ" ಸಮಾವೇಶ ನಿಜಕ್ಕೂ ಯಶಸ್ವಿಯಾಗಿದೆ. ಜೊತೆಗೆ ಸಮಾವೇಶದಲ್ಲಿ ರಾಷ್ಟ್ರ ನಾಯಕರು, ಮುಖ್ಯಮಂತ್ರಿಗಳು, ಮಂತ್ರಿಗಳೂ ಸಮಾವೇಶಗೊಂಡು ನಡೆಸಿಕೊಟ್ಟಿದ್ದು ಪ್ರಶಂಸನೀಯ. ದೇಶದ ನೆನ್ನೆಗಳನ್ನು ಮುಂದಿನ ನಾಳೆಗಳನ್ನು ಎದುರಿಸಬೇಕಾದ ಯುವ ಸಮೂಹ ಬಳಿ ಕೊಂಡೊಯ್ಯುವ ಇಂತಹ ಸಮಾವೇಶಗಳು ಬೇಕಾಗಿವೆ. ಚುನಾವಣಾ ರ್‍ಯಾಲಿಗಳು, ಘನಘೋರ ದ್ವೇಷ ಭಾಷಣಗಳು, ಮತ ಭಿಕ್ಷೆಯ ರಾಜಕಾರಣಕ್ಕಿಂತ ಇಂತಹವು ಸಾರ್ವಜನಿಕರನ್ನು ತಲುಪುತ್ತವೆ. ನಮ್ಮಲ್ಲಿ ಪ್ರಜಾಪ್ರಭುತ್ವದ ಸ್ಫೂರ್ತಿಯನ್ನು ಇಮ್ಮಡಿಗೊಳಿಸುತ್ತವೆ.

ನಾನು ಪ್ರತಿನಿಧಿಸುವ ಬಿಜೆಪಿಯೂ ಸೇರಿದಂತೆ ಇತರ ಪಕ್ಷಗಳು ಈ ಸಮಾವೇಶವನ್ನೂ ಗೇಲಿ ಮಾಡಿವೆ, ಟೀಕಿಸಿವೆ. ಇದು ಸಹಜ. ನಮ್ಮಲ್ಲಂತೂ ವಿರೋಧ ಪಕ್ಷಗಳು ಎಲ್ಲವನ್ನೂ ವಿರೋಧಿಸುವುದನ್ನು ಕೆಲಸ ಮಾಡಿಕೊಂಡಿವೆ. ಇದು ದಿಲ್ಲಿಯಲ್ಲೂ ಅಷ್ಟೇ. ಆದರೆ ಗಾಂಧಿ, ಅಂಬೇಡ್ಕರ್ ಮತ್ತು ಸಂವಿಧಾನ ಎಂದಿಗೂ ಈ ದೇಶ ಸ್ಮರಿಸಬೇಕಾದ ಗತಕಾಲದ ಕಾಂಗ್ರೆಸ್‌ನ ಕೊಡುಗೆಗಳು.


ಈ ಸಮಾವೇಶದ ಕಲ್ಪನೆ, ಸಮರ್ಥ ನಿರ್ವಹಣೆ ಹಾಗೂ ಯಶಸ್ವಿಗಾಗಿ ನಾನು ಕೆಪಿಸಿಸಿ ಸಾರಥಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಅಭಿನಂದಿಸುತ್ತೇನೆ. ಇಂತಹ ಜನಜಾಗೃತಿ ಸಮಾವೇಶಗಳು ಹೆಚ್ಚಲಿ, ಚುನಾವಣಾ ಸಮಾವೇಶಗಳು ನಿಲ್ಲಲಿ ಎಂಬುದೇ ನನ್ನ ಆಶಯ.

ಖಗೋಳದ ಕೌತುಕ ಕಂಡು ಬೆರಗಾದ ವಿದ್ಯಾರ್ಥಿಗಳು

● ಬರಿಗಣ್ಣಿನಿಂದಲೇ ಶುಕ್ರ, ಮಂಗಳ, ಗುರು, ಶನಿ ಸೇರಿ 4 ಗ್ರಹಗಳ ಒಮ್ಮೆಗೆ ಕಾಣುವ ವಿಸ್ಮಯ ● ಸಿಎಫ್‌ಟಿಆರ್‌ಐ ಸ್ಕೂಲ್‌ನಲ್ಲಿ ವೀಕ್ಷಣೆ ಕಾರ್ಯಕ್ರಮ



ಮೈಸೂರಿನ ಸಿಎಫ್‌ಟಿಆರ್ ಸ್ಕೂಲ್ ಆವರಣದಿಂದ ಶನಿವಾರ ರಾತ್ರಿ ವಿದ್ಯಾರ್ಥಿಗಳು ಟೆಲಿಸ್ಕೋಪ್ ಮೂಲಕ ಖಗೋಳದಲ್ಲಿ ಗ್ರಹಗಳನ್ನು ವೀಕ್ಷಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.



ಮೈಸೂರಿನ ಸಿಎಫ್‌ಟಿಆರ್ ಸ್ಕೂಲ್ ಆವರಣದಿಂದ ಶನಿವಾರ ರಾತ್ರಿ ಗುರು ಗ್ರಹ (ಜುಪಿಟರ್) ಮತ್ತು ಅದರ ನಾಲ್ಕು ಉಪಗ್ರಹಗಳು ಕಂಡು ಬಂದಿದ್ದು ಹೀಗೆ.

ಮೈಸೂರು,ಜ.25(ಪಿಎಂ)– ಬರಿಗಣ್ಣಿನಿಂದಲೇ ಶುಕ್ರ, ಮಂಗಳ, ಗುರು, ಶನಿ ಸೇರಿದಂತೆ ಒಟ್ಟಾರೆ ನಾಲ್ಕು ಗ್ರಹ ಗಳನ್ನು ಒಂದೇ ಸಮಯದಲ್ಲಿ ನೋಡ ಬಹುದಾದ ಅಪರೂಪದ ಖಗೋಳದ ಕೌತುಕಕ್ಕೆ ವಿದ್ಯಾರ್ಥಿಗಳು ಸಾಕ್ಷಿಯಾದರು. ನೆಪ್ಚೂನ್ ಮತ್ತು ಯುರೇನಸ್ ಗ್ರಹಗಳನ್ನೂ ಟೆಲಿಸ್ಕೋಪ್‌ನಲ್ಲಿ ಕಂಡು ಪುಳಕಿತಗೊಂಡರು.

ಮೈಸೂರಿನ ಸಿಎಫ್‌ಟಿಆರ್‌ಐ ಸ್ಕೂಲ್‌ನ ಮಹಡಿಯಲ್ಲಿ ಶನಿವಾರ ಸಂಜೆ ಗ್ರಹಗಳ ವೀಕ್ಷಣೆಯ ವಿಶೇಷ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಜ್ಞರ ಮಾರ್ಗದರ್ಶನದಲ್ಲಿ ಬರಿಗಣ್ಣಿನಿಂದಲೇ ಈ ನಾಲ್ಕು ಗ್ರಹಗಳನ್ನು ನೋಡಿ ಸಂಭ್ರಮಿಸಿದರು. ಅಲ್ಲದೆ, ಬರಿಗಣ್ಣಿನಿಂದ ನೋಡಲು ಸಾಧ್ಯವಿಲ್ಲದ ನೆಪ್ಚೂನ್ ಮತ್ತು ಯುರೇನಸ್ ಗ್ರಹಗಳನ್ನು ಟೆಲಿಸ್ಕೋಪ್ ಮೂಲಕ ನೋಡಿ ಅಚ್ಚರಿಗೊಂಡರು.

ಶಾಲೆಯ 10ನೇ ತರಗತಿ ವಿದ್ಯಾರ್ಥಿಗಳಿಗಾಗಿ ಈ ಕಾರ್ಯಕ್ರಮ ಏರ್ಪಡಿಸಿದ್ದರೂ ಬೇರೆ ಬೇರೆ ತರಗತಿಯ ಆಸಕ್ತ ವಿದ್ಯಾರ್ಥಿಗಳು ಹಾಜರಿದ್ದು ಖಗೋಳ ಕೌತುಕ ವೀಕ್ಷಿಸಿದರು. ಅಲ್ಲದೆ, ವಿದ್ಯಾರ್ಥಿಗಳ ಪೋಷಕರಿಗೂ ಇಂತಹ ಅಪರೂಪ ಸನ್ನಿವೇಶಕ್ಕೆ ಸಾಕ್ಷಿಯಾದರು. ಮೈಸೂರಿನ ಮಾನಸ ಗಂಗೋತ್ರಿಯ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ನಿವೃತ್ತ ಪ್ರಾಂಶುಪಾಲ ಡಾ.ಎಸ್.ಎನ್.ಪ್ರಸಾದ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ, ಶಾಲೆಯ ಹಳೇ ವಿದ್ಯಾರ್ಥಿ ಚಿರಂಜೀವಿ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಗ್ರಹಗಳನ್ನು ವೀಕ್ಷಿಸಿದರು.

ಇದೇ ವೇಳೆ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಡಾ.ಎಸ್.ಎನ್. ಪ್ರಸಾದ್, ಒಟ್ಟಾಗಿ ನಾಲ್ಕು ಗ್ರಹಗಳು ಒಂದೇ ಸಮಯದಲ್ಲಿ ಕಂಡು ಬರುವುದು ಇಂದಿನ ವಿಶೇಷ. ಉಳಿದೆರಡನ್ನು ಟೆಲಿ ಸ್ಕೋಪ್ ಮೂಲಕ ನೋಡಬೇಕಾಗುತ್ತದೆ. ಇಂತಹ ಸನ್ನಿವೇಶ ತೀರಾ ವಿಶೇಷವಲ್ಲ. ಹಿಂದೆ ಸಹ ಆಗಿದ್ದು, ಮುಂದೆಯೂ ಆಗಲಿದೆ. ಕೆಲ ವರ್ಷಗಳಲ್ಲಿ ಮತ್ತೆ ಇದು ಪುನರಾವರ್ತನೆ ಆಗಲಿದೆ. ಆದರೆ ಕೆಲ ಮಾಧ್ಯಮ, ಸಾಮಾಜಿಕ ಜಾಲತಾಣಗಳಲ್ಲಿ ನೂರಾರು ವರ್ಷಗಳಲ್ಲಿ ಮಾತ್ರ ಇದು ಸಂಭವಿಸುತ್ತದೆ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಗ್ರಹಗಳ ಮೆರವಣಿಗೆಯಲ್ಲ: ಗ್ರಹಗಳ ಮೆರವಣಿಗೆ ಎಂದು ತಪ್ಪಾಗಿ ಕೆಲ ಮಾಧ್ಯಮ, ಸಾಮಾಜಿಕ ಜಾಲತಾಣಗಳಲ್ಲಿ ಕರೆಯಲಾಗುತ್ತಿದೆ. ಮೆರವಣಿಗೆ ಅಥವಾ ಜೋಡಣೆ ಎಂದು ಕರೆಯಲು ಬರುವುದಿಲ್ಲ. ಏಕೆಂದರೆ ಈ ಗ್ರಹಗಳು ಒಂದಕ್ಕೊಂದು ಒಂದೇ ಸಾಲಿನಲ್ಲಿ ಬರಲು ಸಾಧ್ಯವೇ ಇಲ್ಲ. ಕೋಟ್ಯಂತರ ವರ್ಷಗಳಾದರೂ ಅದು ಸಾಧ್ಯವಿಲ್ಲ ಎಂದರು.

ಇಂತಹ ಸನ್ನಿವೇಶ ನೋಡುವುದು ಮಾತ್ರ ವಿಶೇಷ. ಈ ನಿಟ್ಟಿನಲ್ಲಿ ಪ್ರಚಾರವೂ ಅಗತ್ಯ. ಈಗ ಬಿಟ್ಟರೆ ಮತ್ತೆ ಈ ರೀತಿಯಲ್ಲಿ ನೋಡಲಾಗದು ಎಂಬುದು ತಪ್ಪಾಗುತ್ತದೆ. ಮತ್ತೆ ಯಾವಾಗ ಇಂತಹ ಸನ್ನಿವೇಶ ಒದಗಿಬರಬಹುದು ಎಂಬುದನ್ನು ಮುಂಗಡವಾಗಿ ಕಂಡುಕೊಳ್ಳಲು ಸಾಧ್ಯವಿದೆ. ಈಗ ವಿಶೇಷವೆಂದರೆ ಮಂಗಳ ಬಹಳ ಪ್ರಕಾಶಮಾನವಾಗಿ ಕಾಣಿಸುತ್ತಿದೆ. ಏಕೆಂದರೆ ಸೂರ್ಯನ ಬೆಳಕು ಹೆಚ್ಚು ನೇರವಾಗಿ ಬೀಳುವುದರಿಂದ ಅದು ಪ್ರಕಾಶಮಾನವಾಗಿ ಕಾಣುತ್ತಿದೆ. ಸುಮಾರು ಎರಡು ವರ್ಷಕ್ಕೊಮ್ಮೆ ಮಂಗಳ ಹೀಗೆ ಪ್ರಕಾಶಮಾನವಾಗಿ ಗೋಚರಿಸಲಿದೆ ಎಂದು ಹೇಳಿದರು.

ಗುರು ಗ್ರಹ ಸಾಮಾನ್ಯವಾಗಿ ಯಾವಾಗಲೂ ಪ್ರಕಾಶಮಾನದಿಂದಲೇ ಗೋಚರಿಸಲಿದೆ. ಶುಕ್ರ ಗ್ರಹ ಕೂಡ ಯಾವಾಗಲೂ ಪ್ರಕಾಶದಿಂದ ಕಾಣುತ್ತದೆ. ಆದರೆ ಸಾಮಾನ್ಯವಾಗಿ ಅದನ್ನು ನಕ್ಷತ್ರ ಎಂದುಕೊಳ್ಳುತ್ತೇವೆ. ಹೀಗೆ ಒಂದೇ ಸಮಯದಲ್ಲಿ ನಾಲ್ಕು ಗ್ರಹಗಳನ್ನು ನೋಡುವುದು ಅತ್ಯಾಪರೂಪವಲ್ಲ, ಆದರೆ ಅಪರೂಪ ಎನ್ನುವಹುದು ಎಂದು ವಿವರಿಸಿದರು.

ಶುಕ್ರ ಅರ್ಧಚಂದ್ರನಂತೆ ಕಂಡಿದ್ದು ವಿಶೇಷ

ಮೈಸೂರು,ಜ.25(ಪಿಎಂ)– ಶುಕ್ರ ಗ್ರಹ ಇಂದು ಅರ್ಧಚಂದ್ರನಂತೆ ಕಾಣುತ್ತಿರುವುದು ವಿಶೇಷ ಎಂದು ಖಗೋಳಶಾಸ್ತ್ರಜ್ಞ ವಸಂತ್ ಹೆಗಡೆ ತಿಳಿಸಿದರು.

ಶನಿವಾರ ರಾತ್ರಿ ಟೆಲಿಸ್ಕೋಪ್ ಮೂಲಕ ಗ್ರಹಗಳನ್ನು ವೀಕ್ಷಿಸಿದ ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಬರಿಗಣ್ಣಿಗೆ ನಾಲ್ಕು ಗ್ರಹಗಳು ಅದ್ಭುತವಾಗಿ ಕಾಣುತ್ತಿವೆ. ಟೆಲಿಸ್ಕೋಪ್ ಮೂಲಕ ಶುಕ್ರ ಗ್ರಹ ನೋಡಿದ್ದು, ಅದು ಅರ್ಧಚಂದ್ರನಂತೆ ಗೋಚರಿಸುತ್ತಿದೆ. ಎಷ್ಟೋ ವರ್ಷಗಳ ನಂತರವಷ್ಟೇ ಹೀಗೆ 4 ಗ್ರಹಗಳನ್ನು ಒಮ್ಮೆಗೆ ಬರಿಗಣ್ಣಿನಿಂದ ನೋಡಬಹುದು ಎಂಬುದು ಸರಿಯಲ್ಲ. ಜೊತೆಗೆ ನೇರ ರೇಖೆಯಲ್ಲಿ ಗ್ರಹಗಳು ಕಾಣಿಸುತ್ತವೆ ಎಂಬುದು ಸುಳ್ಳು. ಸೂರ್ಯ ಒಂದು ದಿಕ್ಕಿನಲ್ಲಿದ್ದು, ನಮಗೆ ಗೋಚರಿಸುತ್ತಿರುವ ಗ್ರಹಗಳು ಮತ್ತೊಂದು ದಿಕ್ಕಿನಲ್ಲಿವೆ. ನೇರ ರೇಖೆಯಲ್ಲಿ ಇಲ್ಲ. ಈಗ ಪಶ್ಚಿಮದಲ್ಲಿ ಶನಿ ಮತ್ತು ಶುಕ್ರ ಕಾಣುತ್ತಿದ್ದರೆ, ಪೂರ್ವದ ಹತ್ತಿರದಲ್ಲಿ ಮಂಗಳ ಮತ್ತು ಗುರು ಕಾಣುತ್ತಿವೆ. ನೇರ ರೇಖೆಯಲ್ಲಿ ಅವು ಇಲ್ಲವೆಂದು ವಿವರಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಕ್ರೊ ಫೈನಾನ್ಸ್ ಹಾವಳಿ; ಸಹಕಾರಿ ಪತ್ತಿನ ಬ್ಯಾಂಕ್‌ಗಳಿಂದ ಜನರ ರಕ್ಷಣೆ ಸಾಧ್ಯ

ಮಾಜಿ ಸಚಿವ, ಶಾಸಕರೂ ಆದ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರ ಅಭಿಮತ

- ಸಹಕಾರಿ ಕ್ಷೇತ್ರದ ಪತ್ತಿನ ಸಹಕಾರಿ ಸಂಘಗಳ ಪದಾಧಿಕಾರಿಗಳು, ಸಿಇಓಗಳಿಗೆ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ
- ಸಹಕಾರಿ ಕ್ಷೇತ್ರದಲ್ಲಿ ಜಾತಿ, ಭ್ರಷ್ಟಾಚಾರ ಪ್ರವೇಶಿಸಿದೆ; ಚುನಾವಣೆಯಲ್ಲಿ ಉಡುಗೊರೆ ನೀಡುವ ದುರ್ಗತಿ ಬಂದಿದೆ

ಮೈಸೂರು, ಜ.25(ಎಂಟಿವೈ)– ಹೆಚ್ಚು ಬಡ್ಡಿ ಸಂಗ್ರಹಿಸುವ ಖಾಸಗಿ ಹಾಗೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಜನರನ್ನು ರಕ್ಷಿಸಲು ಹಾಗೂ ಕಡಿಮೆ ಬಡ್ಡಿ ದರದಲ್ಲಿ ಸಾಲ–ಸೌಲಭ್ಯ ನೀಡಲು ಸಹಕಾರ ಪತ್ತಿನ ಬ್ಯಾಂಕ್ ಸ್ಥಾಪನೆ ಮಾಡಿದ್ದರೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಜನರಿಗೆ ಕಂಟಕವಾಗಿರುವುದು ವಿಪರ್ಯಾಸ ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ವಿಷಾದಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ವತಿಯಿಂದ ಜಿಲ್ಲೆಯ ಪತ್ತಿನ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಸಿಇಓ) ಆಯೋಜಿಸಿದ್ದ ಒಂದು ದಿನದ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ವಿವಿಧೆಡೆ ಕಳೆದ ಕೆಲ ತಿಂಗಳಿಂದ ಮೈಕ್ರೋ ಫೈನಾನ್ಸ್ ಹಾವಳಿಯಿಂದ ಹೆದರಿ ಜನರು ಮನೆ ಬಿಟ್ಟು ಹೋಗುವಂತಾಗಿದೆ. ತಿಂಗಳು, ವಾರ, ದಿನದ ಬಡ್ಡಿಯಲ್ಲಿ ಸಾಲ ಸೌಲಭ್ಯ ನೀಡಿ ಜನರನ್ನು ಸುಲಿಗೆ ಮಾಡುತ್ತಿದ್ದ ಖಾಸಗಿ ಹಣಕಾಸು ಹಾಗೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಹಾವಳಿಗೆ ಕಡಿವಾಣ ಹಾಕಲು ಪತ್ತಿನ ಸಹಕಾರ ಬ್ಯಾಂಕುಗಳಲ್ಲಿ ಸಾಲ ಕೊಡುವ ವ್ಯವಸ್ಥೆ ಆರಂಭಿಸಲಾಯಿತು. ಆದರೆ ಈಗಲೂ ಮೈಕ್ರೋ ಫೈನಾನ್ಸ್ ಹಾವಳಿ ಹೆಚ್ಚಾಗಿ ಬಡವರಿಗೆ ತೊಂದರೆಯಾಗುತ್ತಿದೆ. ಖಾಸಗಿ ಹಣಕಾಸು ವ್ಯವಹಾರಕ್ಕೆ ಕಡಿವಾಣ ಹಾಕಿ ಪ್ರತಿಯೊಬ್ಬರೂ ಆರ್ಥಿಕವಾಗಿ ಸಬಲರಾಗುವಂತೆ ಪತ್ತಿನ, ಕೃಷಿ ಮತ್ತು ನಗರ ಬ್ಯಾಂಕ್‌ಗಳಲ್ಲಿ ಠೇವಣಿ ಮೊತ್ತವನ್ನು ಹೆಚ್ಚಿಸಿ ಮತ್ತಷ್ಟು ಬಲಪಡಿಸಬೇಕು ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಶನಿವಾರ ನಡೆದ ಪತ್ತಿನ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ತರಬೇತಿ ಕಾರ್ಯಾಗಾರಕ್ಕೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು.

ಪ್ರಾಮಾಣಿಕತೆಯಿಂದ ಉನ್ನತ ಸ್ಥಾನ: ಸಹಕಾರ ಕ್ಷೇತ್ರ ಸರ್ಕಾರದ ಅನುದಾನದಿಂದ ಬೆಳೆಯಲು ಸಾಧ್ಯವಿಲ್ಲ. ಸರ್ಕಾರವೂ ಅನುದಾನ ನೀಡುವುದಿಲ್ಲ. ಈ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಪಕ್ಷಾತೀತ, ಜಾತ್ಯತೀತ ಆಡಳಿತ ನಡೆಯಬೇಕು. ಜಾತಿ ಮತ್ತು ಭ್ರಷ್ಟಾಚಾರದಿಂದಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ನಾನು ಈ ಹಿಂದೆ ಕಾರ್ಯದರ್ಶಿಯಾಗಿ ಮಾಡಿದ ಕೆಲಸವೇ ಇಂದು ರಾಜ್ಯ ಮಟ್ಟದಲ್ಲಿ ದೊಡ್ಡ ಸ್ಥಾನ ಸಂಪಾದಿಸಲು ಕಾರಣವಾಯಿತು. ಸಹಕಾರ ಕ್ಷೇತ್ರದಲ್ಲಿ ಬೆಳೆದವರು ತಾನೂ ಬೆಳೆಯುವುದಲ್ಲದೆ ಸಂಸ್ಥೆಯನ್ನು ಬೆಳೆಸಬೇಕು. ಬಡವರ ಪರ ಕೆಲಸ ಮಾಡಬೇಕು ಎನ್ನುವ ಮನೋಭಾವ ಹೊಂದಿರಬೇಕು. ಸಹಕಾರ ಕ್ಷೇತ್ರ ಬಡವರಿಗೆ ಸಂಜೀವಿನಿಯಂತಿರಬೇಕು. ಬ್ಯಾಂಕ್ ವ್ಯವಹಾರ ಪ್ರಾಮಾಣಿಕವಾಗಿ ಇರಬೇಕು. ಆಯಾಯ ದಿನದಂದು ಲೆಕ್ಕ ಬರೆದು ಇಡಬೇಕು. ಸಾಲಗಾರರು ಮತ್ತು ಸದಸ್ಯರ ಸಂಪರ್ಕ ಇಟ್ಟುಕೊಳ್ಳಬೇಕು. ಉಳಿತಾಯ ಮಾಡುವ ಕೆಲಸಕ್ಕೆ ಪ್ರೇರಣೆ ನೀಡಬೇಕು. ಹೊಸಬರನ್ನು ಗುರುತಿಸಿ ಸಾಲ ಕೊಟ್ಟು ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಹಿವಾಟು ಹೆಚ್ಚಾಗುವಂತೆ ಮಾಡಬೇಕು ಎಂದರು.

ತರಬೇತಿ ಅವಶ್ಯ: ಕಲಿಕೆ ನಿರಂತರ, ಜೀವನದ ಕೊನೆಯವರೆಗೂ ಕಲಿಯುವುದು ಇರುತ್ತದೆ. ಕಲಿತಷ್ಟು ಜ್ಞಾನ ಭಂಡಾರ ಹೆಚ್ಚಾಗುತ್ತದೆ. ಸಹಕಾರ ಕಾನೂನು, ನಿಯಮ ಬದಲಾವಣೆ, ತಿದ್ದುಪಡಿ ಆಗುತ್ತಿರುತ್ತವೆ. ಇದರಿಂದ ಸಹಕಾರಿ ಸಿಬ್ಬಂದಿಗೆ ಕಾರ್ಯಾಗಾರದ ಮೂಲಕ ಹೆಚ್ಚಿನ ಮಾಹಿತಿ ನೀಡುವುದರೊಂದಿಗೆ ಆಡಳಿತಕ್ಕೆ ಸಂಬಂಧಿಸಿದಂತೆ ಸಜ್ಜುಗೊಳಿಸಬೇಕು. ಆದಕ್ಕಾಗಿ ತರಬೇತಿ ಕಾರ್ಯಾಗಾರಗಳು ಮಹತ್ವ ಪಡೆದಿವೆ. ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ಎಲ್ಲರೂ ಹೆಚ್ಚಿನ ಮಾಹಿತಿ ಪಡೆದುಕೊಂಡು ಸುಗಮ ಹಾಗೂ ದಕ್ಷ ಆಡಳಿತ ನೀಡಬೇಕು ಎಂದು ಸಲಹೆ ನೀಡಿದರು.

ಸಹಕಾರಿ ಕ್ಷೇತ್ರ ಉಳಿಸಬೇಕು

“ಪ್ರಸ್ತುತ ಸಂದರ್ಭದಲ್ಲಿ ಸಹಕಾರ ಕ್ಷೇತ್ರಕ್ಕೆ ಜಾತಿ, ಭ್ರಷ್ಟಾಚಾರ ಪ್ರವೇಶಿಸಿದೆ. ಅಲ್ಲದೆ, ಸರ್ಕಾರ ಮತ್ತು ರಾಜಕೀಯದ ಹಸ್ತಕ್ಷೇಪವೂ ಹೆಚ್ಚಾಗುತ್ತಿದೆ. ಸದಸ್ಯರಿಗೆ ಮತ ಚಲಾಯಿಸಲು ಹಣ ಕೊಡುವ ಸನ್ನಿವೇಶ ನಿರ್ಮಾಣವಾಗಿದೆ. ಸಹಕಾರ ಕ್ಷೇತ್ರದಲ್ಲಿ ಹಣ, ಉಡುಗೊರೆ ನೀಡಿದರೆ ಭ್ರಷ್ಟಾಚಾರರಹಿತ ಆಡಳಿತ ಮಾಡಲು ಸಾಧ್ಯವಿಲ್ಲ. ನಾವು ಇದರಿಂದ ದೂರವಿದ್ದು ಸಹಕಾರ ಕ್ಷೇತ್ರ ಉಳಿಸಬೇಕು. –ಜಿ.ಟಿ.ದೇವೇಗೌಡ

ಜನರ ಸೇವೆಯೇ ಧ್ಯೇಯ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಹಲವು ದಶಕಗಳಿಂದಲೂ ಸಹಕಾರ ಕ್ಷೇತ್ರ ತನ್ನದೇ ಪ್ರಾಮುಖ್ಯತೆ ಪಡೆದುಕೊಂಡು, ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಸಹಕಾರಿ ಕ್ಷೇತ್ರದ ಸೇವೆ ಜನರ ಸೇವೆಯೇ ಆಗಿದೆ. ಸದಸ್ಯರ ಹಿತಚಿಂತನೆ, ಠೇವಣಿದಾರರ ಹಿತ ಕಾಪಾಡುವುದು ಮುಖ್ಯ. ವರ್ಕಿಂಗ್ ಕ್ಯಾಪಿಟಲ್, ಸಾಲ ಮತ್ತು ಸದಸ್ಯರ ಸಂಖ್ಯೆ ಹೆಚ್ಚು ಮಾಡಿಕೊಂಡು ಗುಣಾತ್ಮಕ ಕೆಲಸ ಮಾಡುತ್ತಿದ್ದಾರೆ. ಬದಲಾದ ಕಾಲಕ್ಕೆ ತಕ್ಕಂತೆ ನಾವು ಅಂತರ್ಜಾಲದ ಬಳಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದರು.

ಸಹಕಾರ ಕ್ಷೇತ್ರವು ಸೇವಾ ಕ್ಷೇತ್ರವಾಗಿರುವುದರಿಂದ ಇದು ಸಹಕಾರ ಚಳವಳಿ ಎನಿಸಿದೆ. ಸರ್ಕಾರ ಜಾರಿಗೆ ತರುವ ಹೊಸ ಕಾನೂನುಗಳನ್ನು ತಿಳಿಸುವ ಕೆಲಸ ಆಗಬೇಕು. ಪ್ರತಿಯೊಂದು ಮಾಹಿತಿಯನ್ನು ಪರಿಗಣಿಸಿ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಯಾವುದೇ ಸಮಸ್ಯೆ, ಗೊಂದಲ ಇಲ್ಲದೆ ಬ್ಯಾಂಕ್ ವಹಿವಾಟು ನಡೆಸಬಹುದಾಗಿದೆ. ಹೊಸ ರೂಪದಲ್ಲಿ ಸಮಾಜವನ್ನು ಕಾಡುವ ಸೈಬರ್ ಕ್ರೈಮ್‌ನಲ್ಲಿ ಕ್ಷಣಾರ್ಧದಲ್ಲಿ ಗ್ರಾಹಕನ ಹಣ ಕಳೆದುಕೊಳ್ಳುವ ಕೆಲಸ ನಡೆಯುತ್ತಿದೆ. ಹಾಗಾಗಿ, ಗ್ರಾಹಕರು ಮೋಸದ ಜಾಲಕ್ಕೆ ಸಿಲುಕದಂತೆ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ನಿರ್ದೇಶಕರಾದ ಬಿ.ಸಿ.ಲೋಕಪ್ಪಗೌಡ, ಬಿ.ಜಯಶಂಕರ ಶೆಟ್ಟಿ ಇಂದ್ರಾಳಿ, ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಪ್ರಶಾಂತ್ ತಾತಾಚಾರ್, ಈರೇಗೌಡ, ಭೈರಪ್ಪ, ಮಹದೇವಸ್ವಾಮಿ, ಸಿದ್ದೇಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಂ.ವಿಶ್ವೇಶ್ವರಯ್ಯ, ಬ್ಯಾಂಕಿಂಗ್ ತರಬೇತುದಾರ ಆರ್.ಕೆ.ಬಾಲಚಂದ್ರ, ವೈಜ್ಞಾನಿಕ ಸಂಶೋಧಕ ಎ.ಹೆಚ್.ಸಾಗರ್, ಕೆಐಸಿಎಂ ಪ್ರಾಂಶುಪಾಲ ಪುಟ್ಟಸ್ವಾಮಿ, ಸಹಕಾರ ಸಂಘಗಳ ಸಹಾಯಕ ನಿಬಂಧಕ ಮನೋಜ್, ವ್ಯವಸ್ಥಾಪಕ ಹರೀಶ್ ಮತ್ತಿತರರು ಹಾಜರಿದ್ದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ನಾಳೆ 156 ಜೋಡಿ ಸಾಮೂಹಿಕ ವಿವಾಹ

ರವಿಶಂಕರ್ ಗುರೂಜಿ, ಶ್ರೀ ವೀರೇಶ್ವರ ಪುಣ್ಯಾಶ್ರಮದ ಶ್ರೀಗಳ ಸಾನ್ನಿಧ್ಯ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರಿಂದ ಉದ್ಘಾಟನೆ


ಮೈಸೂರು,ಜ.25(ಜಿಎ)–ಶ್ರೀ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಜ.27ರಂದು ನಡೆಯುವ ಸಾಮೂಹಿಕ ವಿವಾಹಕ್ಕೆ ಉತ್ತಮ ಸ್ಪಂದನೆ ದೊರೆತಿದ್ದು, 156 ಜೋಡಿಗಳು ನವ ಜೀವನಕ್ಕೆ ಕಾಲಿಡಲಿದ್ದಾರೆ ಎಂದು ಸಾಮೂಹಿಕ ವಿವಾಹ ಸಮಿತಿಯ ಅಧ್ಯಕ್ಷ ಉಡಿಗಾಲ ಆರ್.ಕುಮಾರಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.27ರಂದು ಬೆಳಗ್ಗೆ 10 ಗಂಟೆಗೆ ಸಾಮೂಹಿಕ ವಿವಾಹ ನೆರವೇರಲಿದ್ದು, ತಮಿಳುನಾಡಿನ ಜೋಡಿಗಳು, ವಿಶೇಷ ಚೇತನರು, ವಿಧುವೆ–ವಿಧುರ, ಅಂತರ ಜಾತಿ ಮತ್ತು ಅಂತರ ಧರ್ಮದ ಜೋಡಿಗಳು ಸೇರಿದಂತೆ 156 ಜೋಡಿಗಳು ನೋಂದಣಿ ಮಾಡಿಕೊಂಡಿದ್ದು, ಆರ್ಟ್ ಆಫ್ ಲಿವಿಂಗ್ ಸ್ಥಾಪಕ ರವಿಶಂಕರ್ ಗುರೂಜಿ, ಶ್ರೀ ವೀರೇಶ್ವರ ಪುಣ್ಯಾಶ್ರಮದ ಡಾ.ಶ್ರೀ ಕಲ್ಲಯ್ಯಜ್ಜ ಅವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ್ ವಿ.ಜೋಶಿ ಉದ್ಘಾಟಿಸಲಿದ್ದಾರೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾಂಗಲ್ಯ ವಿತರಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್.ತಂಗಡಗಿ ಪ್ರಮಾಣ ಪತ್ರ ವಿತರಿಸಲಿದ್ದಾರೆ. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರತಿಜ್ಞಾವಿಧಿ ಬೋಧನೆ ಮಾಡಲಿದ್ದಾರೆ. ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಶ್ರೀ ಸುತ್ತೂರು ಕ್ಷೇತ್ರದ ಜಾತ್ರಾ ಮಹೋತ್ಸವದಲ್ಲಿ ಪ್ರಸಕ್ತ ವರ್ಷದ ಸಾಮೂಹಿಕ ವಿವಾಹದಲ್ಲಿ 156 ಜೋಡಿಗಳು ಸತಿ–ಪತಿಗಳಾಗಲಿದ್ದು, ವೀರಶೈವ ಲಿಂಗಾಯತ ಸಮುದಾಯ–3 ಜೋಡಿ, ಪರಿಶಿಷ್ಟ ಜಾತಿ–84 ಜೋಡಿ, ಪರಿಶಿಷ್ಟ ಪಂಗಡ–22 ಜೋಡಿ, ಹಿಂದುಳಿದ ವರ್ಗ–22 ಜೋಡಿ, ಅಂತರ್ಜಾತಿ–23 ಜೋಡಿ, ಅಂತರಧರ್ಮ–1 ಜೋಡಿ, ತಮಿಳು ನಾಡು–17 ಜೋಡಿ, ವಿಶೇಷ ಚೇತನರು–3 ಜೋಡಿ, ಮರು ವಿವಾಹ–1.ಇದರಲ್ಲಿ ಮೈಸೂರು ಜಿಲ್ಲೆಯ 79 ಜೋಡಿಗಳು ಹಾಗೂ ಚಾಮರಾಜನಗರ ಜಿಲ್ಲೆಯ 43 ಜೋಡಿಗಳು ಸೇರಿವೆ ಎಂದು ಅವರು ವಿವರಿಸಿದರು.

ಮುಡಾ ಹಗರಣದಲ್ಲಿ ಸಿದ್ದರಾಮಯ್ಯಗೆ ಕ್ಲೀನ್‌ಚಿಟ್ ನೀಡಲು ಲೋಕಾಯುಕ್ತ ಯಾರು?

ಎಂಎಲ್‌ಸಿ ವಿಶ್ವನಾಥ್ ಪ್ರಶ್ನೆ



ಮೈಸೂರು, ಜ.25– ಮುಡಾ ಹಗರಣದಲ್ಲಿ ಸಿದ್ದರಾಮಯ್ಯಗೆ ಕ್ಲೀನ್‌ಚಿಟ್ ನೀಡಲು ಲೋಕಾಯುಕ್ತ ಯಾರು ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪ್ರಶ್ನಿಸಿದ್ದಾರೆ.

ಮೈಸೂರಿನಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಡಾ 50:50 ಅನುಪಾತದಡಿ ನಿವೇಶನ ಮಂಜೂರು ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬಕ್ಕೆ ಕ್ಲೀನ್‌ಚಿಟ್ ನೀಡಲು ಲೋಕಾಯುಕ್ತ ಯಾರು? ಲೋಕಾಯುಕ್ತ ಡಿಜಿ ಹಾಗೂ ಪೊಲೀಸರನ್ನು ನೇಮಕ ಮಾಡುವುದು ಸರ್ಕಾರಗಳು. ಹೀಗೆ ಅಧಿಕಾರಕ್ಕೆ ಬಂದ ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡುತ್ತಾರೆ. 5 ಸಾವಿರ ಕೋಟಿಗೂ ಮೀರಿ ಮುಡಾದಲ್ಲಿ ಅಕ್ರಮ ನಡೆದಿದೆ. ಲೋಕಾಯುಕ್ತ ಪಾರದರ್ಶಕವಾಗಿ ತನಿಖೆ ಮಾಡಿಲ್ಲ. ಸಿದ್ದರಾಮಯ್ಯ ಪತ್ರಿಕಾಗೋಷ್ಠಿ ನಡೆಸುವಾಗ ಹಿಂದಿನಿಂದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ 62 ಕೋಟಿ ಬರಬೇಕು ಎಂದು ಹೇಳಿಕೊಟ್ಟರು. ಅದನ್ನು ಲೋಕಾಯುಕ್ತ ಯಾಕೆ ಗಮನಿಸುತ್ತಿಲ್ಲ. ಇದೆಲ್ಲದರ ಹಿಂದೆ ಸಿದ್ದರಾಮಯ್ಯ ಪಾತ್ರವಿದೆ ಎಂದು ಹೇಳಿದರು.

ಸಿದ್ದರಾಮಯ್ಯ ಮೈಸೂರು ಅರಮನೆ ಬಗ್ಗೆ ಚೇಷ್ಟೆ ಮಾಡುವುದು, ಕಿರುಕುಳ ಕೊಡುವುದು ಮಾಡ್ತಾನೆ ಇರುತ್ತಾರೆ. ರಸ್ತೆಗೆ ಸಿದ್ದರಾಮಯ್ಯ ಹೆಸರಿಡುವ ಕೆಲಸಕ್ಕೂ ಮುಂದಾಗಿದ್ದರು. ಇದು ಹುಚ್ಚಾಟ. ಯದುವಂಶದ ರಾಜರೆಂದರೆ ಪ್ರಪಂಚದಲ್ಲಿ ಹೆಸರುವಾಸಿ. ಬಹಳ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿದ್ದು ಮೈಸೂರು ಮಹಾರಾಜರು ಮಾತ್ರ. ಅಂತಹ ಮಹಾರಾಜರ ಬಗ್ಗೆ ಹಗುರವಾಗಿ ಮಾತನಾಡುವುದು ಒಳ್ಳೆಯದಲ್ಲ. ನಾನು ಡೆಮಾಕ್ರೆಟಿಕ್ ಅನ್ನುವುದು ತೋರಿಕೆಯಷ್ಟೇ. ಬೆಂಗಳೂರು ಅರಮನೆ ವಿಚಾರದಲ್ಲಿ ಜನರಲ್ಲಿ ಗೊಂದಲ ಹಾಗೂ ಅಪನಂಬಿಕೆ ಮೂಡಿಸುತ್ತಿದ್ದಾರೆ. ಕೋರ್ಟ್ ತೀರ್ಮಾನದ ಬಗ್ಗೆ ಗೌರವವಿಲ್ವಾ? ಯದುವಂಶದವರ ಕೂರಿಸಿ ಒಂದು ಸೆಟ್ಲ್‌ಮೆಂಟ್ ಮಾಡಿಕೊಳ್ಳಬಹುದು ಎಂದರು.

ದರೋಡೆಗಳು, ಮೈಕ್ರೋ ಫೈನಾನ್ಸ್ ಹಾವಳಿ ನೋಡಿದರೆ ರಾಜ್ಯದಲ್ಲಿ ಸರ್ಕಾರ ಇಲ್ಲ ಅನಿಸುತ್ತದೆ. ಪೊಲೀಸ್ ಇಲಾಖೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಸರ್ಕಾರದ ಅಧಿಕಾರಿಗಳಾಗಿ ಕೆಲಸ ಮಾಡಬೇಕೇ ಹೊರತು ಶಾಸಕರ ಅಧಿಕಾರಿಗಳಾಗಬಾರದು. ಬೆಂಗಳೂರಿನಲ್ಲಿ ಎಸಿಪಿ ಪೋಸ್ಟಿಂಗ್‌ಗೆ 2 ಕೋಟಿ ನೀಡಬೇಕು. ಹಾಗಾಗಿ ಪೊಲೀಸ್ ಇಲಾಖೆ ಹಾಳಾಗಿ ಹೋಗಿದೆ. ಪರಮೇಶ್ವರ್‌ಗೆ ಸಬ್‌ಇನ್‌ಸ್ಪೆಕ್ಟರ್ ವರ್ಗಾವಣೆ ಮಾಡುವ ಅಧಿಕಾರ ಮಾತ್ರ ಇದೆ. ಉಳಿದ ಅಧಿಕಾರ ಮುಖ್ಯಮಂತ್ರಿ ನಿಭಾಯಿಸುತ್ತಾರೆ. ಇದರಿಂದ ಗೃಹಮಂತ್ರಿ ಡಮ್ಮಿ ಅಂತ ಅನ್ನಿಸುತ್ತದೆ ಎಂದು ವ್ಯಂಗ್ಯವಾಡಿದರು.

ಕುಮಾರಸ್ವಾಮಿ ನಿನ್ನೆ ಕೆ.ಆರ್.ನಗರದಲ್ಲಿ ಸತ್ಯ ಹೇಳಿದ್ದಾರೆ. ಸಿದ್ದರಾಮಯ್ಯನವರನ್ನು ಕಾಂಗ್ರೆಸ್‌ಗೆ ಕರೆತಂದಿದ್ದು ಯಾರು? ಸಿಎಂ ಮಾಡಿದ್ದು ಯಾರು? ಎಲ್ಲವನ್ನು ಜನರಿಗೆ ತಿಳಿಸಿ ಹೋಗಿದ್ದಾರೆ ವಿಜಯೇಂದ್ರ ಯಾರು, ಯಡಿಯೂರಪ್ಪ ಯಾರು ಎನ್ನುವುದು ಜನರಿಗೆ ಗೊತ್ತಿಲ್ವಾ? ಪ್ರಜಾಪ್ರಭುತ್ವದಲ್ಲಿ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಯಬೇಕು. ಮೊನ್ನೆ ಬೆಂಗಳೂರಿನಲ್ಲಿ ನಡೆದ ಬಿಜೆಪಿ ಮೀಟಿಂಗ್‌ಗೆ ನಮ್ಮನ್ನು ಕರೆದಿಲ್ಲ. ಮೈಸೂರಿನವರೂ ಯಾವ ಮೀಟಿಂಗ್‌ಗೂ ಕರೆಯುವುದಿಲ್ಲ. ಯಾರನ್ನು ಹೇಗೆ ಬಳಸಿಕೊಳ್ಳಬೇಕು ಎನ್ನುವ ಸಾಮಾನ್ಯ ಪ್ರಜ್ಞೆಯೂ ಬಿಜೆಪಿಗಿಲ್ಲ ಎಂದು ಚಾಟಿ ಬೀಸಿದರು.

ಮೆಚ್ಚಿಸುವ ಮಾತು: ಜಿ.ಟಿ.ದೇವೇಗೌಡರು ಮುಡಾ ಹಗರಣದಿಂದ ತಪ್ಪಿಸಿಕೊಳ್ಳಲು ಶಾಸಕ ಜಿ.ಟಿ.ದೇವೇಗೌಡ ಸಿದ್ದರಾಮಯ್ಯನ ಮೆಚ್ಚಿಸೋಕೆ ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ಎಲ್ಲರಿಗೂ ಬೈಯ್ಯುತ್ತಿದ್ದಾರೆ. ಯಾರು ಯಾವ ಪಕ್ಷ ಬಿಟ್ಟರೂ ಏನೂ ಆಗಲ್ಲ. ಎಲ್ಲಾ ಪಕ್ಷಗಳೂ ಜನರದ್ದೇ. ಜಿ.ಟಿ.ದೇವೇಗೌಡ ಬಂದು ಎಲ್ಲರನ್ನು ಗೆಲ್ಲಿಸಿಬಿಡ್ತಾರಾ ಎಂದು ಪ್ರಶ್ನಿಸಿದರು.

ಹುಟ್ಟುಹಬ್ಬದ ಶುಭಾಶಯ



ನಿಖಿಲ್ ಕುಮಾರಸ್ವಾಮಿ ಅವರಿಗೆ ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ವರುಣ ಜೆಡಿಎಸ್ ಅಧ್ಯಕ್ಷ ಎಂ.ಬಾಲಕೃಷ್ಣ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಶುಭಾಶಯ ಕೋರಿಕೆ...



76ನೇ ಗಣರಾಜ್ಯೋತ್ಸವ ದಿನದಂದು ಮಹಾರಾಷ್ಟ್ರದ ಚೈತ್ಯ ಭೂಮಿಗೆ (ಅಂಬೇಡ್ಕರ್ ಅವರ ಸಮಾಧಿಗೆ) ತೆರಳಿದ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅವರನ್ನು ಅಭಿನಂದಿಸಿ ಶುಭಾಶಯ ಕೋರಲಾಯಿತು. ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ವಿ.ಆರ್.ವಿಜಯಕುಮಾರ್, ಕಾಂಗ್ರೆಸ್ ಮುಖಂಡರಾದ ಸತ್ಯನಾರಾಯಣ, ಬಂಡಳ್ಳಿ ಕುಮಾರ, ವಿ.ಸಿ.ಶ್ರೀನಿವಾಸ ಮೂರ್ತಿ, ಡಿ.ಎಂ.ರಾಜು, ಮಳವಳ್ಳಿ ಜೀವನ್ ಮತ್ತಿತರರು ಹಾಜರಿದ್ದರು.

ರಾಜ್ಯದ 21 ಪೊಲೀಸ್ ಅಧಿಕಾರಿಗಳಿಗೆ ರಾಷ್ಟ್ರಪತಿ ಪದಕ

ನವದೆಹಲಿ, ಜ.25– 2025ರ ಗಣರಾಜ್ಯೋತ್ಸವ ದಿನಾಚರಣೆ ಪ್ರಯುಕ್ತ ರಾಷ್ಟ್ರಪತಿ ಪದಕ ಘೋಷಣೆ ಮಾಡಲಾಗಿದ್ದು, ಕರ್ನಾಟಕದ 21 ಪೊಲೀಸ್ ಅಧಿಕಾರಿಗಳು ರಾಷ್ಟ್ರಪತಿ ಪದಕಕ್ಕೆ ಭಾಜನರಾಗಿದ್ದಾರೆ.

ಶುಕ್ರವಾರ 76ನೇ ಗಣ ರಾಜ್ಯೋತ್ಸವ ಸಮಾರಂಭ ನಡೆಯಲಿದ್ದು, ಪದಕ ಪ್ರದಾನ ಮಾಡಲಾಗುತ್ತದೆ. ವಿಶಿಷ್ಟ ಸೇವೆಗಾಗಿ ಕೆಎಸ್‌ಆರ್‌ಪಿ ಡಿಐಜಿ ಬಸವರಾಜ್ ಶರಣಪ್ಪ ಜಿಳ್ಳೆ, ಮತ್ತು ಕೆಎಸ್‌ಆರ್‌ಪಿ ತುಮಕೂರಿನ ಕಮಾಂಡೆಂಟ್ ಹಂಜಾ ಹುಸೇನ್ ಅವರಿಗೆ ರಾಷ್ಟ್ರಪತಿ ಪದಕ ಘೋಷಣೆಯಾಗಿದೆ.

ಬೆಂಗಳೂರಿನ ಡಿಸಿಆರ್‌ಐ ಡಿಐಜಿ ರೇಣುಕಾ ಕೆ.ಸುಕುಮಾರ, ಪೊಲೀಸ್ ಪ್ರಧಾನ ಕಚೇರಿಯ ಎಐಜಿಪಿ ಸಂಜೀವ ಎಂ.ಪಾಟೀಲ್ ಅವರ ಗಮನಾರ್ಹ ಸೇವೆ ಗುರುತಿಸಿ ರಾಷ್ಟ್ರಪತಿ ಪದಕ ಘೋಷಣೆ ಮಾಡಲಾಗಿದೆ. ಕೊಪ್ಪಳದ ಮುನಿರಾಬಾದ್‌ನ ಕೆಎಸ್‌ಆರ್‌ಪಿ ಕಮಾಂಡೆಂಟ್ ಬಿ.ಎಂ.ಪ್ರಸಾದ್, ಕೆಎಸ್‌ಆರ್‌ಪಿ ಹಾಸನ ಡೆಪ್ಯೂಟಿ ಕಮಾಂಡೆಂಟ್ ವೀರೇಂದ್ರ ನಾಯಕ್, ಬೆಂಗಳೂರು ಸಿಸಿಬಿಯ ಗೋಪಾಲ ಡಿ ಜೋಗಿನ, ಚಿಕ್ಕೋಡಿ ಉಪ ವಿಭಾಗದ ಡಿವೈಎಸ್‌ಪಿ ಗೋಪಾಲಕೃಷ್ಣ ಬಿ ಗೌಡರ್, ಚಿತ್ರದುರ್ಗದ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಗುರು ಬಸವ ರಾಜ, ಬೆಂಗಳೂರಿನ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಜಯರಾಜ್, ಹಾಸನದ ಸರ್ಕಲ್ ಇನ್ಸ್‌ಪೆಕ್ಟರ್ ಪ್ರದೀಪ್, ಬೆಂಗಳೂರು ನಗರ ಸಿಸಿಬಿ ಪೊಲೀಸ್ ಇನ್ಸ್‌ಪೆಕ್ಟರ್ ಮೊಹಮ್ಮದ್ ಮುಕರಮ್, ಬ್ಯೂರೋ ಆಫ್ ಇಮಿಗ್ರೇಷನ್ ಪೊಲೀಸ್ ಇನ್ಸ್‌ಪೆಕ್ಟರ್ ಎಂ.ಎ.ವಸಂತ್ ಕುಮಾರ್, ಸಿಐಡಿ ಎಎಸ್‌ಐ ಮಂಜುನಾಥ ಅವರು ಶ್ಲಾಘನೀಯ ಸೇವಾ ಪದಕ ಪುರಸ್ಕೃತರಾಗಿದ್ದಾರೆ.

ಬೆಂಗಳೂರಿನ ವಿಲ್ಸನ್ ಗಾರ್ಡನ್ ಎಎಸ್‌ಐ ಅಲ್ತಾಫ್ ಹುಸೇನ್, ಕೆಎಸ್ ಆರ್‌ಪಿ ಬಲೇಂದ್ರನ್, ಕಲಬುರಗಿ ಡಿಐಜಿಪಿ ಅರುಣ ಕುಮಾರ, ಚಿಕ್ಕಮಗಳೂರಿನ ನಯಾಜ್ ಅಂಜುಮ್, ಡಿಸಿಪಿ ಶ್ರೀನಿವಾಸ, ರಾಜ್ಯ ಗುಪ್ತ ವಾರ್ತೆಯ ಅಶ್ರಫ್, ಕುಂದಾಪುರ ಠಾಣೆಯ ಸಿಹೆಚ್ ಸಿ ಬಿ. ಶಿವಾನಂದ ಅವರು ರಾಷ್ಟ್ರಪತಿ ಪದಕಕ್ಕೆ ಭಾಜನರಾಗಿದ್ದಾರೆ.

‘ಏಕಥಾರಿ ಆನ್ ಆಟೋಬಯೋಗ್ರಫಿ ಆಫ್ ನೊಮ್ಯಾಡ್’ ಕೃತಿ ಬಿಡುಗಡೆ

ಮೈಸೂರು, ಜ.25(ಜಿಎ)– ಒಡಲು ಟ್ರಸ್ಟ್, ಕರ್ನಾಟಕ ರಾಜ್ಯ ದೊಂಬಿದಾಸರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಜ.26ರಂದು ಬೆಳಿಗ್ಗೆ 11.30ಕ್ಕೆ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಕುಪ್ಪೆ ನಾಗರಾಜ ಅವರು ಬರೆದಿರುವ ‘ಅಲೆಮಾರಿಯ ಅಂತರಂಗ’ ಕೃತಿಯ ಇಂಗ್ಲೀಷ್ ಅನುವಾದಿತ ‘ಏಕಥಾರಿ ಆನ್ ಆಟೋಬಯೋಗ್ರಫಿ ಆಫ್ ನೊಮ್ಯಾಡ್’ ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಒಡಲು ಟ್ರಸ್ಟ್‌ನ ಕಾರ್ಯದರ್ಶಿ ಕೆ.ಎನ್.ಶಿವಲಿಂಗಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗಡೆ ಕೃತಿ ಬಿಡುಗಡೆ ಮಾಡಲಿದ್ದಾರೆ. ಮುಖ್ಯ ಅತಿಥಿಯಾಗಿ ಹಂಪಿ ಕನ್ನಡ ವಿವಿಯ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಕೆ.ಎಂ.ಮೇತ್ರಿ, ಇಂಗ್ಲೀಷ್ ಪ್ರಾಧ್ಯಾಪಕ ಪ್ರೊ.ಆರ್.ಸದಾನಂದ, ಕೃತಿಯ ಲೇಖಕ ಕುಪ್ಪೆನಾಗರಾಜ ಪಾಲ್ಗೊಳ್ಳಲಿದ್ದು, ಒಡಲು ಟ್ರಸ್ಟ್‌ನ ಅಧ್ಯಕ್ಷ ಆರ್.ಎಸ್.ದೊಡ್ಡಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಒಡಲು ಟ್ರಸ್ಟ್‌ನ ಖಜಾಂಚಿ ಹೆಚ್.ಎಂ.ಪುಟ್ಟಮಾದಯ್ಯ, ಧರ್ಮದರ್ಶಿಗಳಾದ ವರದಯ್ಯ, ಕರ್ನಾಟಕ ರಾಜ್ಯ ದೊಂಬಿದಾಸರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರೇವಣ್ಣ ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ಎಸ್.ಜಾನಕಿ ಗಾನೋತ್ಸವ



ಮೈಸೂರು,ಜ.25(ಜಿಎ)–ಎಸ್.ಜಾನಕಿ ಮೆಲೋಡೀಸ್ ವತಿಯಿಂದ ಜ.27ರಂದು ಸಂಜೆ 4 ಗಂಟೆಗೆ ನಗರದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಗಾನ ಕೋಗಿಲೆ ಗಾನಾಮೃತ ಎಸ್.ಜಾನಕಿ ಗಾನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಎಸ್.ಜಾನಕಿ ಅವರ ಅಭಿಮಾನಿ ಗಾಯಕಿ ಲಕ್ಷ್ಮೀ ದಿನೇಶ್ ಈ ವಿಷಯ ತಿಳಿಸಿ, ಗಾನೋತ್ಸವದಲ್ಲಿ ಡಾ.ಕೆ.ಆರ್.ಮಂಜುನಾಥ್, ಶೀಲ, ಗುರುದತ್, ಮುರಳೀಧರ್, ಜ್ಯೋತಿ, ಸುರೇಶ್, ವಿಜಯ್ ಆನಂದ್, ರಮೇಶ್ ಹಾಗೂ ಪ್ರಮಥ ಮಂಜುನಾಥ್ ಧ್ವನಿಗೂಡಿಸಲಿದ್ದಾರೆ. ಹಳೆಯ ಕನ್ನಡ ಚಿತ್ರಗಳಲ್ಲಿ ಆಯ್ದ ಎಸ್.ಜಾನಕಿ, ವಾಣಿ ಜಯರಾಂ, ಪಿ.ಸುಶೀಲ, ಡಾ.ರಾಜ್‌ಕುಮಾರ್, ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಸುಪ್ರಸಿದ್ಧ ಸುಮಧುರ ಸುಮಾರು 50 ಗೀತೆಗಳನ್ನು ಈ ವೇಳೆ ಹಾಡಲಾಗುವುದು. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಮಥ ಮಂಜುನಾಥ್, ಗುರುದತ್ ಉಪಸ್ಥಿತರಿದ್ದರು.

ಇಂದು ಕಟ್ಟಡ ಕಾರ್ಮಿಕರಿಗೆ ಕಿಟ್ ವಿತರಣೆ

ಮೈಸೂರು, ಜ. 25– ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘವು ಕಾರ್ಮಿಕ ಇಲಾಖೆ ಸಹಯೋಗದೊಂದಿಗೆ ಕಟ್ಟಡ ಕಾರ್ಮಿಕರಿಗೆ ಕಿಟ್ ವಿತರಣೆ, ಆರೋಗ್ಯ ತಪಾಸಣೆ ಹಾಗೂ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ.

ಮೈಸೂರಿನ ನಂಜಬಹದ್ದೂರ್ ಛತ್ರದಲ್ಲಿ ನಾಳೆ (ಭಾನುವಾರ) ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಕಾರ್ಯಕ್ರಮವನ್ನು ಮೈಸೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತೆ ಶ್ರೀಮತಿ ಎಸ್.ಆರ್. ವೀಣಾ ಉದ್ಘಾಟಿಸಲಿದ್ದಾರೆ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ ಆದ ನ್ಯಾಯಾಧೀಶ ದಿನೇಶ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ನಗರ ವಾಹನ ದುರಸ್ತಿಗಾರರ ಕಾರ್ಮಿಕರ ಒಕ್ಕೂಟದ ಅಧ್ಯಕ್ಷ ಮೋಹನ್‌ರಾಜ್ ಅರಸ್, ಪರಿಸರ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷೆ ಶ್ರೀಮತಿ ಭಾನು ಮೋಹನ್, ಮೈಸೂರಿನ 1ನೇ ವೃತ್ತದ ಹಿರಿಯ ಕಾರ್ಮಿಕ ನಿರೀಕ್ಷಕರಾದ ಶ್ರೀಮತಿ ಬಿ. ಮಂಗಳಾಗೌರಿ, 2ನೇ ವೃತ್ತದ ಹಿರಿಯ ಕಾರ್ಮಿಕ ನಿರೀಕ್ಷಕ ಎಂ.ಸಿ. ಮಾದಪ್ಪ 3ನೇ ವೃತ್ತದ ಹಿರಿಯ ಕಾರ್ಮಿಕ ನಿರೀಕ್ಷಕ ಹೆಚ್.ಪಿ. ಜಯಣ್ಣ, 4ನೇ ವೃತ್ತದ ಹಿರಿಯ ಕಾರ್ಮಿಕ ನಿರೀಕ್ಷಕಿ ಶ್ರೀಮತಿ ವೀಣಾ, ಹುಣಸೂರು ವೃತ್ತದ ಕಾರ್ಮಿಕ ನಿರೀಕ್ಷಕ ಟಿ.ವಿ. ಲಕ್ಷ್ಮೀಶ, ಟಿ.ನರಸೀಪುರ ಹಾಗೂ ಪಿರಿಯಾಪಟ್ಟಣ ವೃತ್ತದ ಕಾರ್ಮಿಕ ನಿರೀಕ್ಷಕ ಎನ್. ಮಂಜುನಾಥ್, ಹೆಚ್.ಡಿ.ಕೋಟೆ ವೃತ್ತದ ಕಾರ್ಮಿಕ ನಿರೀಕ್ಷಕಿ ಕುಮಾರಿ ಪಿ. ಅರ್ಪಿತಾ, ಕೆ.ಆರ್.ನಗರ ವೃತ್ತದ ಕಾರ್ಮಿಕ ನಿರೀಕ್ಷಕ ಗೋವಿಂದ ರಾಜು, ನಂಜನಗೂಡು ವೃತ್ತದ ಕಾರ್ಮಿಕ ನಿರೀಕ್ಷಕಿ ಶ್ರೀಮತಿ ಅಂಬಿಕಾ, ಕಲಾವಿದ ಎಂ.ಎ. ಯೋಗೇಶ್, ವಿಶಾಲ ಮೈಸೂರು ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಶಿವಣ್ಣ, ಶ್ರೀ ಸಿದ್ದರಾಮೇಶ್ವರ ಸ್ವಾಮಿ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಚಂದ್ರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಹೆಚ್.ಜಿ.ಲೋಕೇಶ್ ತಿಳಿಸಿದ್ದಾರೆ.

ಇಂದು 76ನೇ ಗಣರಾಜ್ಯೋತ್ಸವ; ಮೈಸೂರಲ್ಲಿ ಸರ್ವ ಸಿದ್ಧತೆ

ಮೈಸೂರು, ಜ.25(ಆರ್‌ಕೆ)– ನಾಳೆ (ಜ.26) ನಡೆಯಲಿರುವ 76ನೇ ಗಣರಾಜ್ಯೋತ್ಸವಕ್ಕೆ ಮೈಸೂರು ನಗರದಲ್ಲಿ ಸರ್ವ ಸಿದ್ಧತೆ ಮಾಡಲಾಗಿದೆ.

ಮೈಸೂರು ಜಿಲ್ಲಾಡಳಿತದಿಂದ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಬೆಳಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪೊಲೀಸರ ಪರೇಡ್ ವಂದನೆ ಸ್ವೀಕರಿಸಿದ ಬಳಿಕ ಧ್ವಜಾರೋಹಣ ನೆರವೇರಿಸಲಿದ್ದಾರೆ. ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಚಾಮರಾಜನಗರ ಸಂಸದ ಸುನಿಲ್ ಬೋಸ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷ ಸಿ.ಅನಿಲ್ ಕುಮಾರ್ (ಅನಿಲ್ ಚಿಕ್ಕಮಾದು), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್ ಅತಿಥಿಗಳಾಗಿ ಭಾಗವಹಿಸುವರು.



ಭಾನುವಾರ ನಡೆಯಲಿರುವ ಗಣರಾಜ್ಯೋತ್ಸವಕ್ಕೆ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಪೊಲೀಸರಿಂದ ತಾಲೀಮು ನಡೆಸಲಾಯಿತು.

ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಡಿ.ರವಿಶಂಕರ್, ವಿಧಾನಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಡಾ.ಯತೀಂದ್ರ ಸಿದ್ದರಾಮಯ್ಯ, ಮಧು ಮಾದೇಗೌಡ, ಎಸ್.ವಿವೇಕಾನಂದ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ದಕ್ಷಿಣ ವಲಯ ಡಿಐಜಿ ಡಾ.ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಸ್‌ಪಿ ಎನ್.ವಿಷ್ಣುವರ್ಧನ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಗಣರಾಜ್ಯೋತ್ಸವದ ಪ್ರಯುಕ್ತ ಗುರುವಾರ ಮತ್ತು ಶುಕ್ರವಾರ ಮೈಸೂರು ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜು ಮತ್ತು ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್) ಡಿಸಿಪಿ ಎ.ಮಾರುತಿ ಅವರ ನೇತೃತ್ವದಲ್ಲಿ ಗಣರಾಜ್ಯೋತ್ಸವದ ಪರೇಡ್ ತಾಲೀಮು ನಡೆಸಲಾಯಿತು. ಕೆಎಸ್‌ಆರ್‌ಪಿ 2 ತುಕಡಿಗಳು, ಹೋಂ ಗಾರ್ಡ್ಸ್‌ನ 2, ಸೇವಾದಳದ 2, ಪೊಲೀಸ್ ಪಬ್ಲಿಕ್ ಶಾಲೆಯ 2, ಜವಾಹರ್ ನೆಹರು ನವೋದಯ ಶಾಲೆಯ 2, ಸಿಎಆರ್, ಕೆ.ಆರ್.ಉಪವಿಭಾಗ, ಎನ್.ಆರ್.ಉಪವಿಭಾಗ, ದೇವರಾಜ ಉಪ ವಿಭಾಗ, ವಿಜಯನಗರ ಉಪವಿಭಾಗ, ಸಂಚಾರ ಉಪವಿಭಾಗದ ತುಕಡಿಗಳು, ಮಹಿಳಾ ಪೊಲೀಸ್, ಅಶ್ವಾರೋಹಿ ದಳ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಅಬಕಾರಿ, ಸ್ಕೌಟ್ಸ್ ಅಂಡ್ ಗೈಡ್ಸ್, ಎನ್‌ಸಿಸಿ ತುಕಡಿಗಳು ಪರೇಡ್‌ನಲ್ಲಿ ಪಾಲ್ಗೊಂಡು ಕವಾಯತು ಪ್ರದರ್ಶನ ಮಾಡಲಿವೆ ಸಿಎಆರ್ ಪೊಲೀಸ್ ಇನ್ಸ್‌ಪೆಕ್ಟರ್ ಶರಣ ಬಸಪ್ಪ ಸಾಸನೂರು ಅವರು ಕಮಾಂಡೆಂಟ್ ಕರ್ತವ್ಯ ನಿರ್ವಹಿಸಲಿದ್ದು, ನಂತರ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. 76ನೇ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಎಲ್ಲಾ ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿ ಕಡ್ಡಾಯವಾಗಿ ಹಾಜರಾಗಬೇಕೆಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸೂಚನೆ ನೀಡಿದ್ದಾರೆ.

ಮಂಡ್ಯದಲ್ಲಿ ವಂಚನೆ ಪ್ರಕರಣ: ಐದು ಗಂಟೆಗಳ ಕಾಲ ಐಶ್ವರ್ಯಗೌಡ ವಿಚಾರಣೆ

ಸಂಬಂಧಪಡದವರೆಲ್ಲ ನನ್ನ ವಿರುದ್ಧ ದೂರುಕೊಟ್ಟು, ಆರೋಪ ಮಾಡುತ್ತಿದ್ದಾರೆ


ಐಶ್ವರ್ಯಗೌಡ

ಮಂಡ್ಯ: ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಡ್ಯ ನಗರದ ಪೂರ್ವ ಹಾಗೂ ಪಶ್ಚಿಮ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿ ಐಶ್ವರ್ಯಗೌಡರ ವಿಚಾರಣೆ ಶನಿವಾರ ನಡೆಯಿತು.

ಮಧ್ಯಾಹ್ನ 1.30ಕ್ಕೆ ನಗರದ ಸಿಇಎನ್ ಅಪರಾಧ ವಿಭಾಗದ ಉಪಾಧೀಕ್ಷಕ ಕಚೇರಿಗೆ ಆಗಮಿಸಿದ ಆರೋಪಿಗಳಾದ ಐಶ್ವರ್ಯಗೌಡ ಹಾಗೂ ಪತಿ ಹರೀಶ್ ಅವರನ್ನು ಉಪಾಧೀಕ್ಷಕ ಶಿವಮೂರ್ತಿ ಅವರು ಸತತವಾಗಿ ಐದು ಗಂಟೆಗಳ ಕಾಲ ವಿಚಾರಣೆ ನಡೆಸಿದರು. ನಂತರ 6.30ಕ್ಕೆ ಐಶ್ವರ್ಯಗೌಡ, ಪತಿ ಹರೀಶ್ ಹೊರ ಬಂದರು.

ವಿಚಾರಣೆ ಮುಗಿಸಿ ವಕೀಲರೊಂದಿಗೆ ಹೊರಬಂದ ಐಶ್ವರ್ಯಗೌಡ, ನಾನು ಯಾರಿಗೂ ಅನ್ಯಾಯ, ಮೋಸ ಮಾಡಿಲ್ಲ. ನನಗೆ ಸಂಬಂಧಪಡದವರೆಲ್ಲ ನನ್ನ ವಿರುದ್ಧ ಆರೋಪ, ದೂರು ಕೊಡುತ್ತಿದ್ದಾರೆ. ನನ್ನ ವಿರುದ್ಧದ ಪ್ರಕರಣದ ತನಿಖಾಧಿಕಾರಿಗಳೆಲ್ಲ ಒಳ್ಳೆಯವರಾಗಿದ್ದು, ಪ್ರಕರಣದಲ್ಲಿ ನನಗೆ ನ್ಯಾಯ ಸಿಗುವ ವಿಶ್ವಾಸವಿದೆ ಎಂದರು.

ನಗರದ ಪಶ್ಚಿಮ ಪೊಲೀಸ್ ಠಾಣೆಗೆ ಚಾಮುಂಡೇಶ್ವರಿ ನಗರದ ಸೌಭಾಗ್ಯ ಎಂಬುವರು 33 ಲಕ್ಷ ರೂ. ವಂಚನೆ ಮಾಡಿದ್ದಾರೆ ಎಂದು ದೂರು ನೀಡಿದ್ದರು. ಅದರಂತೆ ಪೂರ್ವ ಪೊಲೀಸ್ ಠಾಣೆಯಲ್ಲಿ ಗುತ್ತಲು ನಿವಾಸಿ ರವಿಕುಮಾರ್ ಎಂಬುವರು 52 ಲಕ್ಷ ರೂ. ನಗದು, ಚಿನ್ನಾಭರಣ ವಂಚನೆ ಮಾಡಿದ್ದಾರೆ ಎಂದು ಆರೋಪಿಸಿ ಐಶ್ವರ್ಯಗೌಡ, ಪತಿ ಹರೀಶ್, ಸಹೋದರ ಹಳ್ಳಿ ಮಂಜುನಾಥ್ ವಿರುದ್ಧ ದೂರು ನೀಡಿದ್ದರು. ಅದರಂತೆ ದೂರಿಗೆ ಸಂಬಂಧಿಸಿದಂತೆ ಸಿಇಎನ್ ಅಪರಾಧ ವಿಭಾಗದ ಪೊಲೀಸರು ಶನಿವಾರ ವಿಚಾರಣೆ ನಡೆಸಿದರು.

ವನಿತಾ ಐತಾಳ್ ಹಿಂದೆ ಸೆಂಟ್ರಲ್ ಮಿನಿಸ್ಟರ್?: ಐಶ್ವರ್ಯಗೌಡ ಆರೋಪ

ನನ್ನ ಮೇಲೆ ಸುಳ್ಳು ದೂರು ಯಾಕೆ ಬರ್ತಾ ಇವೆ ಎಂದು ವನಿತಾ ಐತಾಳ್ ಅವರನ್ನು ಕೇಳಬೇಕು. ಎಲ್ಲ ದೂರುಗಳ ಹಿಂದೆ ವನಿತಾ ಐತಾಳ್ ಇದ್ದಾರೆ ಎಂದು ಚಿನ್ನ ವಂಚನೆ ಪ್ರಕರಣದ ಆರೋಪಿ ಐಶ್ವರ್ಯಗೌಡ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲು ವನಿತಾ, ನಾನು ಆಪ್ತರು. ಈಗ ಇದ್ದಿದ್ರೆ ಅದನ್ನು ಮುಂದುವರಿಸ ಬೇಕಿತ್ತು. ನನ್ನ ಮೇಲೆ ದೂರು ಕೊಡು ವವರಿಗೆ ವನಿತಾ ಐತಾಳ್ ಫುಡ್, ವೆಹಿಕಲ್, ಏರ್ ಟಿಕೆಟ್, ವಾಸ್ತವ್ಯ ಎಲ್ಲ ಮಾಡಿ ಕೊಡ್ತಾ ಇದ್ದಾಳೆ. ವನಿತಾನೇ ಹೋಗಿ ದೂರು ಕೊಡಿ ಎಂದು ಹೇಳ್ತಿದ್ದಾರೆ. ವನಿತಾ ಹಿಂದೆ ಯಾರೋ ಒಬ್ಬರು ಇದ್ದಾರೆ. ಯಾರದು ಎಂದು ಮುಂದೆ ಗೊತ್ತಾಗುತ್ತೆ. ಸೆಂಟ್ರಲ್ ಮಿನಿಸ್ಟರ್ ಕೈವಾಡ ಏನು ಎಂದು ಮುಂದೆ ಗೊತ್ತಾಗುತ್ತೆ. ಈಗ ಕೇಸ್ ಕೋರ್ಟ್ ನಲ್ಲಿ ಇದೆ. ಅದರ ಬಗ್ಗೆ ಮಾತಾಡಲ್ಲ. ಮುಂದೆ ಗೊತ್ತಾಗುತ್ತೆ ಎಂದರು.

ನನ್ನ ಮೇಲೆ ಸುಳ್ಳು ಕಂಪ್ಲೇಂಟ್ ಆಗಿದೆ. ಅದಕ್ಕೆ ನನ್ನ ವಿಚಾರಣೆಗೆ ಕರೆದಿದ್ದರು. ನಾನು ತನಿಖೆಗೆ ಸಹಕಾರ ನೀಡಿರ್ದೇನೆ. ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಮತ್ತೊಂದು ದಿನ ನೋಟಿಸ್ ಕೊಟ್ಟರೂ ಬರ್ತೀನಿ. ನನ್ನ ವಿರುದ್ಧ ದೂರು ಕೊಟ್ಟವರಲ್ಲಿ ಕೆಲವರು ನನಗೆ ಗೊತ್ತೆ ಇಲ್ಲ. ಕೆಲವರ ಹೆಸರನ್ನೂ ಕೇಳಿಲ್ಲ. ಕೆಲವರ ಮುಖ ಸಹ ನೋಡಿಲ್ಲ. ಇದರ ಬಗ್ಗೆ ನಾನು ಮುಂದೆ ಕೋರ್ಟ್‌ನಲ್ಲಿ ಉತ್ತರ ಕೊಡ್ತೇನೆ ಎಂದು ಹೇಳಿದರು.

ದೂರು ನೀಡಿರುವ ರವಿಕುಮಾರ್, ಪೂರ್ಣಿಮಾ ಪರಿಚಯ ಇದ್ದಾರೆ. ಆದರೆ ನನ್ನ ಅವರ ಮಧ್ಯೆ ಯಾವುದೇ ವ್ಯವಹಾರ ನಡೆದಿಲ್ಲ. ಅದಕ್ಕೆ ಸಂಬಂಧಿಸಿದ ದಾಖಲೆಗ ಳನ್ನು ನಾನು ಕೊಡ್ತೇನೆ ಎಂದರು.

ನನಗೆ ರಕ್ಷಣೆಯೇ ಇಲ್ಲ

ನನ್ನ ವಿರುದ್ಧ ದೂರು ಕೊಡುವವರಿಗೆ ರಕ್ಷಣೆ ಇದೆ. ಆದರೆ ನನಗೆ ಯಾವುದೇ ರಕ್ಷಣೆ ಇಲ್ಲ. ನಾನು ದೂರನ್ನು ನೀಡಿದರೂ ಎಫ್‌ಐಆರ್ ಮಾಡಿಕೊಂಡಿಲ್ಲ ಎಂದು ಐಶ್ವರ್ಯಗೌಡ ಹೇಳಿದರು. ಮುಂದಿನ ದಿನಗಳಲ್ಲಿ ಎಲ್ಲ ಗೊತ್ತಾಗುತ್ತೆ. ನಾನು ಯಾರು ಅಂತಾ ಗೊತ್ತಿಲ್ಲದ್ದವರು ದೂರು ಕೊಟ್ಟರೆ ಎಫ್‌ಐಆರ್ ಆಗುತ್ತೆ. ವನಿತಾ ಐತಾಳ್ ಇದೆಲ್ಲ ಮಾಡ್ತಾ ಇದ್ದಾಳೆ. ವನಿತಾ ಮೇಲೆ ಈಗಾಗಲೇ ಇಡಿ ರೈಡ್ ಆಗಿದೆ. ಮತ್ತೆ ಇಡಿ ರೈಡ್ ಆಗುವ ಸಾಧ್ಯತೆ ಇತ್ತು ಎಂದರು. ವನಿತಾ ಒಂದಷ್ಟು ಸಾಲ ಮಾಡಿಕೊಂಡಿದ್ದಾರೆ. ಸಾಲಗಾರರು, ಇಡಿಯಿಂದ ತಪ್ಪಿಸಿ ಕೊಳ್ಳಲು ಹೀಗೆ ವನಿತಾ ಮಾಡ್ತಾ ಇದ್ದಾರೆ. ವನಿತಾ ಜೊತೆಗೆ ಬೇರೆಯವರ ಕೈವಾಡ ಇದೆ. ಸೋನು ಲಂಬಾಣಿ ಎಂಬ ವ್ಯಕ್ತಿಯನ್ನೇ ನಾನು ನೋಡಿಲ್ಲ. ಆದರೂ ನಾನು ದುಡ್ಡು ಕೊಡಬೇಕು ಎಂದು ಧೈರ್ಯವಾಗಿ ಮಾತನಾಡುತ್ತಾರೆ. ಅವರು ಬಂದು ನನ್ನ ಮೇಲೆ ದೂರು ಕೊಡಲಿ. ಸೋನು ಲಂಬಾಣಿಯನ್ನು ನಾನು ನನ್ನ ಕುಟುಂಬ ದವರು ಯಾರೂ ನೋಡಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನನ್ನ, ಅನ್ನದಾನಿ ಮಧ್ಯೆ ವ್ಯವಹಾರ ನಡೆದಿದೆ


ಶಾಸಕ ಪಿ.ಎಂ.ನರೇಂದ್ರಸ್ವಾಮಿ ಚುನಾವಣೆಗೆ ಐಶ್ವರ್ಯಗೌಡ ಫಂಡಿಂಗ್ ಮಾಡಿದ್ದಾರೆಂಬ ಮಾಜಿ ಶಾಸಕ ಕೆ.ಅನ್ನದಾನಿ ಆರೋಪಕ್ಕೆ ಪ್ರತಿಕ್ರಿಯಿಸಿದ ಐಶ್ವರ್ಯಗೌಡ, ನರೇಂದ್ರಸ್ವಾಮಿ ಈ ಬಾರಿ ಎಂಎಲ್‌ಎ ಆದ ಮೇಲೆ ನಮ್ಮ ಮನೆಗೆ ನಮ್ಮಣ್ಣ ಕರೆದಿದ್ದರು. ಆಗ ಫಂಕ್ಷನ್ ಇತ್ತು. ಅದ್ಕೆ ನರೇಂದ್ರಸ್ವಾಮಿ ಬಂದಿದ್ದರು. ನಾನು ಫಂಡ್ ಮಾಡುವಷ್ಟು ದುಡ್ಡು ಇದ್ದಿದ್ರೆ, ನಾನೇ ಚುನಾವಣೆಗೆ ನಿಲ್ತಿದ್ದೆ ಎಂದು ಹೇಳಿದರು.

ಮಾಜಿ ಶಾಸಕ ಕೆ.ಅನ್ನದಾನಿ ಅವರು ಯಾಕೆ ಈ ರೀತಿ ಹೇಳಿದ್ದಾರೆ ಗೊತ್ತಿಲ್ಲ. ನನಗೂ ನರೇಂದ್ರಸ್ವಾಮಿಗೂ ಯಾವುದೇ ಸಂಬಂಧ ಇಲ್ಲ. ಅನ್ನದಾನಿ ನನಗೆ 2012ರಿಂದಲೂ ಪರಿಚಯ. ನಮ್ಮ ಮನೆಯ ಫಂಕ್ಷನ್‌ಗೆ ಕಾಂಗ್ರೆಸ್‌ನವರು ಬಂದಿದ್ದಾರೆ ಅಂತಾ ಅಷ್ಟೇ ಹೇಳ್ತಾರೆ. ಜೆಡಿಎಸ್, ಬಿಜೆಪಿಯವರೂ ಸಹ ಬಂದಿದ್ದರು. ಅನ್ನದಾನಿ ಅವರು 2012ರಲ್ಲಿ ನನ್ನ ಮದುವೆಗೂ ಬಂದಿದ್ದಾರೆ. ಅವಾಗಿನಿಂದ ಅನ್ನದಾನಿ ಪರಿಚಯವಾಗಿದ್ದಾರೆ. ನನಗೂ ನರೇಂದ್ರಸ್ವಾಮಿ ಅವರಿಗೂ ವ್ಯವಹಾರಿಕ ಸಂಬಂಧವಿಲ್ಲ. ಆದರೆ ಮಾಜಿ ಶಾಸಕ ಕೆ.ಅನ್ನದಾನಿ ಅವರಿಗೂ ನನಗೂ ವ್ಯವಹಾರಿಕ ಸಂಬಂಧ ಇದೆ ಎಂದು ಅನ್ನದಾನಿ ಹೇಳಿಕೆಗೆ ತಿರುಗೇಟು ನೀಡಿದರು.

ನಮ್ಮ ಫಂಕ್ಷನ್‌ಗೆ ನರೇಂದ್ರಸ್ವಾಮಿ ಬಂದು ಹೋಗಿದ್ದಾರೆ. ನಮಗೆ ಪರಿಚಯ ಇಲ್ಲ. ಆದರೆ ನನ್ನ, ಅನ್ನದಾನಿ ಅವರ ಮಧ್ಯ ವ್ಯವಹಾರಿಕ ಸಂಬಂಧ ಇದೆ. ನನ್ನ, ಅನ್ನದಾನಿ ಅವರು ನೋಡಿಯೇ ಇಲ್ಲ ಅಂತಾರೆ. ಅವರಿಗೇನು 60 ವರ್ಷ ಆಗಿದ್ಯಾ?. 60 ವರ್ಷ ಆದ ಮೇಲೆ ಬರುವ ಅರಳು ಮರಳು ಎನ್ನುವ ಹಾಗೆ ಅನ್ನದಾನಿ ಅವರಿಗೆ ಈಗಲೇ ಬಂದಿರಬೇಕು. ನಾನು ಯಾರ ಚುನಾವಣೆಗೂ ಫಂಡ್ ಮಾಡಿಲ್ಲ. ಅನ್ನದಾನಿ ಮತ್ತು ನನ್ನ ಮಧ್ಯ ಒಂದು ಬಾರಿ ವ್ಯವಹಾರಿಕ ಸಂಬಂಧ ಆಗಿದೆ. ಆದರೆ ಈಗ ಅನ್ನದಾನಿ ಅವರು ನಾನು ಯಾರು ಅಂತ ಮರೆತಿದ್ದಾರೆ. ಅನ್ನದಾನಿ ಅವರು ಸಹಚರರನ್ನು ಒಳ್ಳೆಯವರನ್ನು ಇಟ್ಟುಕೊಳ್ಳಲಿ. ಎಲ್ಲ ಕ್ರಿಮಿನಲ್, 420ಗಳನ್ನೇ ಇಟ್ಟುಕೊಂಡರೆ ತಪ್ಪು ಮಾಹಿತಿ ಕೊಡ್ತಾರೆ ಎಂದು ಕಿಡಿಕಾರಿದರು.

ಅನ್ನದಾನಿ ಅವರ ನಡುವೆ ಹಣದ ವ್ಯವಹಾರ ನಡೆದಿಲ್ಲ. ಸಣ್ಣಪುಟ್ಟ ವ್ಯವಹಾರಿಕ ಸಂಬಂಧ ನಡೆದಿದೆ. ಅನ್ನದಾನಿ ಅವರು ಚುನಾವಣೆಯಲ್ಲಿ ಸೋತು ಡಿಪ್ರೆಶನ್‌ನಲ್ಲಿ ನನ್ನ ಮರೆತು ಹೋಗಿರಬೇಕು. ಅನ್ನದಾನಿ ಅವರಿಗೆ ಸಮಯ ಇದ್ದಾಗ ನಾನು ಯಾರು, ನಾನು ಹೇಗೆ ಪರಿಚಯ, ನನ್ನ, ಅವರ ಮಧ್ಯೆ ಯಾವಾಗ ವ್ಯವಹಾರ ಸಂಬಂಧ ನಡೆದಿತ್ತು ಅಂತಾ ನಾನೇ ಹೇಳ್ತೀನಿ. ನನ್ನ ಮೇಲೆ ಅನ್ನದಾನಿ ಅವರು ಯಾವ ತನಿಖೆ ಆದರೂ ಮಾಡಿಸಲಿ. ನಾನು ಎದುರಿಸಲು ರೆಡಿ ಇದ್ದೀನಿ. ನಾನು ತೆಂಗು, ಅಡಿಕೆ, ಕಬ್ಬು ಮಾರಿ ದುಡ್ಡು ಕೊಟ್ಟಿದ್ದೇನೋ ಎಂದು ಅನ್ನದಾನಿ ಅವರೇ ಹೇಳಲಿ, ನಾನೂ ಹೇಳ್ತೀನಿ. ನನ್ನ ಹಾಗೂ ಅನ್ನದಾನಿ ಅವರ ನಡುವೆ ಇರುವ ಸಂಬಂಧನಾ?, ಬೇರೆ ಅವರಿಗೆ ಯಾಕೆ ಕಟ್ಟುತ್ತಾ ಇದ್ದಾರೆ. ನಾನು ನರೇಂದ್ರಮೋದಿ ಜೊತೆ ಫೋಟೋ ತೆಗೆಸಿಕೊಂಡರೆ ಅವರ ಮಧ್ಯೆ ವ್ಯವಹಾರ ಸಂಬಂಧ ಇದೆ ಅಂತಾನಾ? ಎಂದು ಪ್ರಶ್ನಿಸಿದರು.

ಕೆಡಿಪಿ ಸದಸ್ಯರಿಗೆ ಸನ್ಮಾನ


ಕೆ.ಆರ್.ಪೇಟೆ ತಾಲೂಕು ಮಟ್ಟದ ಕೆಡಿಪಿ ಸಮಿತಿಯ ನೂತನ ಸದಸ್ಯರಾಗಿ ಕರ್ನಾಟಕ ಸರ್ಕಾರದಿಂದ ನೇಮಕಗೊಂಡಿರುವ ಇಲ್ಯಾಸ್ ಪಾಷಾ ಹಾಗೂ ತಾಲೂಕು ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಬಳ್ಳೇಕೆರೆ ಗಣೇಶ್ ಅವರನ್ನು ಕ್ಷೇತ್ರದ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸನ್ಮಾನಿಸಿದರು.

ಲಕ್ಷ್ಮಮ್ಮ ನಿಧನ



ಪಾಂಡವಪುರ: ತಾಲೂಕಿನ ಕೆನ್ನಾಳು ಗ್ರಾಮದ ನಿವಾಸಿ ಲೇ. ಕುಳ್ಳ ಹೊಂಬೆಗೌಡರ ಪತ್ನಿ ಲಕ್ಷ್ಮಮ್ಮ(85) ಶನಿವಾರ ಬೆಳಗ್ಗೆ ನಿಧನ ಹೊಂದಿದರು. ಮೃತರಿಗೆ ಇಬ್ಬರು ಪುತ್ರರಿದ್ದಾರೆ. ಶನಿವಾರ ಸಂಜೆ ಕೆನ್ನಾಳು ಗ್ರಾಮದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಅಲೆಮಾರಿಗಳಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸಿ

ಮಂಡ್ಯ,ಜ.25– ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಲೆಮಾರಿಗಳಿಗೆ ಸರ್ಕಾರ ರೂಪಿಸಿರುವ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ತಲುಪಿಸಿ ಎಂದು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿಗಾಗಿ ವಸತಿ ಯೋಜನೆಯಡಿ 2021–22 ಹಾಗೂ 2022–23ನೇ ಸಾಲಿನಲ್ಲಿ ನಿಗದಿಯಾಗಿರುವ ಗುರಿಗಳಲ್ಲಿ ತಾಂತ್ರಿಕ ಸಮಸ್ಯೆಯಿಂದ 6 ಮತ್ತು 14 ಅರ್ಜಿಗಳು ತಾಂತ್ರಿಕವಾಗಿ ವಿಲೇವಾರಿಯಾಗಿಲ್ಲ. ಇದನ್ನು ಕೂಡಲೇ ಸರಿಪಡಿಸುವಂತೆ ತಿಳಿಸಿದರು.

ನೇರ ಸಾಲ, ಉದ್ಯಮಶೀಲತೆ ಹಾಗೂ ಸ್ವಾವಲಂಬಿ ಯೋಜನೆಯಡಿ ಕೆಲವು ಪ್ರಕರಣಗಳಲ್ಲಿ ಸಾಲ ಒದಗಿಸಲು ಬ್ಯಾಂಕ್‌ಗಳು ಸಿಬಿಲ್ ಸ್ಕೋರ್ ಇಲ್ಲವೆಂದು ಹಿಂದೇಟು ಹಾಕುತ್ತಿದ್ದಾರೆ ಎಂಬ ವಿಷಯದ ಬಗ್ಗೆ ಅಧ್ಯಕ್ಷರು ಗಂಭೀರವಾಗಿ ಪರಿಗಣಿಸಿ ಅಲೆಮಾರಿ ಜನಾಂಗದವರಿಗೆ ಸಾಲ ಒದಗಿಸದಿದ್ದಲ್ಲಿ ಅವರು ಮುಖ್ಯವಾಹಿನಿಗೆ ಬರಲು ಸಾಧ್ಯವಾಗುವುದಿಲ್ಲ ತಾಲೂಕು ಮಟ್ಟದ ಸಮಾಜ ಕಲ್ಯಾಣಾಧಿಕಾರಿಗಳು ಅವರಿಗೆ ತಕ್ಷಣ ಸಾಲ ಒದಗಿಸಲು ಬ್ಯಾಂಕ್‌ನೊಂದಿಗೆ ಚರ್ಚೆ ನಡೆಸಬೇಕು ಎಂದು ಸೂಚನೆ ನೀಡಿದರು.


ಸಭೆ ನಡೆಸುತ್ತಿರುವ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ.

ಟೆಂಟ್‌ಮುಕ್ತ ಕರ್ನಾಟಕ ನಮ್ಮ ಗುರಿ: ಪಲ್ಲವಿ

ಮಂಡ್ಯ: ಸ್ವಾತಂತ್ರ್ಯ ಬಂದು 78 ವರ್ಷಗಳಾದರೂ, ರಾಜ್ಯದಲ್ಲಿ ಅಲೆಮಾರಿ ಜನಾಂಗ ಇಂದಿಗೂ ನೆಲೆ ಮತ್ತು ಮೂಲಸೌಕರ್ಯವಿಲ್ಲದೆ ಪರದಾಡುತ್ತಿದೆ. ಅವರಿಗೆ ನಿವೇಶನ ಮತ್ತು ಮನೆ ಸೌಲಭ್ಯ ಕಲ್ಪಿಸುವ ಮೂಲಕ 'ಟೆಂಟ್‌ಮುಕ್ತ ಕರ್ನಾಟಕ ನಮ್ಮ ಗುರಿ' ಎಂದು ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ನಂತರ ಅವರು ಮಾಧ್ಯಮದವರೊಂದಿಗೆ ಮಾತನಾಡಿ, ಈಗಾಗಲೇ ರಾಜ್ಯದ 14 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಅಲೆಮಾರಿ ಜನಾಂಗದ ಕುಂದುಕೊರತೆಗಳನ್ನು ಆಲಿಸಿದ್ದೇನೆ. ಉಳಿದ ಜಿಲ್ಲೆಗಳಲ್ಲೂ ಪ್ರವಾಸ ಮಾಡಿ ಮಾರ್ಚ್ 12ರೊಳಗೆ ಅಲೆಮಾರಿ ಜನಾಂಗದ ಸ್ಥಿತಿಗತಿ ಕುರಿತು ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇನೆ ಎಂದು ಹೇಳಿದರು.

ತಾಲೂಕುವಾರು ನಿವೇಶನ ಹಾಗೂ ವಸತಿ ರಹಿತ ಅಲೆಮಾರಿಗಳ ಮಾಹಿತಿ ಪಡೆದ ಅಧ್ಯಕ್ಷರು ಇದನ್ನು ಮರುಪರಿಶೀಲಿಸಿ ಮನೆ–ಮನೆ ಸಮೀಕ್ಷೆ ನಡೆಸಿ ಅಲೆಮಾರಿಗಳನ್ನು ಗುರುತಿಸಿ ನಿವೇಶನರಹಿತರಿಗೆ ಆದ್ಯತೆಯ ಮೇಲೆ ನಿವೇಶನ ಒದಗಿಸಿ ಎಂದು ಗ್ರಾಮ ಪಂಚಾಯಿತಿಗಳಿಗೆ ಪತ್ರ ಬರೆಯಿರಿ. ವಸತಿ ರಹಿತರಿಗೆ ಮನೆ ನಿರ್ಮಾಣಕ್ಕಾಗಿ ರಾಜೀವ ಗಾಂಧಿ ನಿಗಮಕ್ಕೆ ಪತ್ರ ಬರೆಯುವಂತೆ ತಿಳಿಸಿದರು.

ಅಲೆಮಾರಿಗಳಿಗೆ ನೆಲೆ ಹಾಗೂ ವಿದ್ಯೆ ನೀಡಿ: ಅಲೆಮಾರಿ ಜನಾಂಗದವರು ಬಹಳ ಹಿಂದುಳಿದಿದ್ದು, ಶೋಚನೀಯ ಸ್ಥಿತಿಯಲ್ಲಿದ್ದಾರೆ ಅವರನ್ನು ಮುಖ್ಯವಾಹಿನಿಗೆ ತರಲು ಅವರಿಗೆ ವಿದ್ಯಾಭ್ಯಾಸ ನೀಡಬೇಕು ಎಂದರು.

ಒಂದನೇ ಪುಟದಿಂದ

ಹೊಸ ಕಾನೂನು ಜಾರಿ

ಕೊಟ್ಟವರ ವಿರುದ್ಧ ಕ್ರಮಕೈಗೊಳ್ಳಿ ಎಂದು ಸಭೆಯಲ್ಲಿದ್ದ ಹಿರಿಯ ಪೋಲಿಸ್ ಅಧಿಕಾರಿಗಳಿಗೆ ಕಟ್ಟಾದೇಶ ಮಾಡಲಾಗಿದೆ.

ಸಹಾಯವಾಣಿ ವ್ಯವಸ್ಥೆ: ಪ್ರತಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಹಾಯವಾಣಿ ಆರಂಭಿಸಲು ಸೂಚಿಸಿದ್ದು, ದೂರು ನೀಡಬಹುದಾಗಿದೆ, ಅಲ್ಲದೆ, ಕಿರುಕುಳ ಪ್ರಕರಣಗಳು ಬೆಳಕಿಗೆ ಬಂದರೆ ಸ್ವಯಂಪ್ರೇರಿತರಾಗಿ ದೂರು ದಾಖಲಿಸಲು ತಿಳಿಸಲಾಗಿದೆ.

ಕ್ರಿಮಿನಲ್ ಕೇಸ್‌ಗೆ ಅವಕಾಶ: ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಲವಂತದ ಸಾಲ ವಸೂಲಾತಿ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ಮಾಡಲಾಗುವುದು ಎಂದರು. ಈಗಿರುವ ಕಾನೂನು ಇನ್ನಷ್ಟು ಬಲಪಡಿಸಿ ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡುವ ಹಾಗೂ ನೋಂದಣಿಯಾಗದ ಲೇವಾದೇವಿಗಾರರ ಮೇಲೆ ನಿಯಂತ್ರಣಕ್ಕೆ ಹೊಸ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗುವುದು.

ಒಂದು ಕುಟುಂಬಕ್ಕೆ ಎಷ್ಟು ಸಾಲ ನೀಡಬಹುದು ಎಂಬ ಬಗ್ಗೆ ಆರ್‌ಬಿಐ ಮಾರ್ಗಸೂಚಿ ಪಾಲಿಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಲಾಗುವುದು, ಅಲ್ಲದೆ, ಇದರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು. ಅಕ್ರಮ ಲೇವಾದೇವಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಕರಡು ಸಿದ್ಧಪಡಿಸಿದ್ದು, ಈ ಕುರಿತು ಸಮಗ್ರ ಸಮಾಲೋಚನೆ ನಡೆಸಿ, ಸಾಲದ ಸುಳಿಯಲ್ಲಿ ಸಿಲುಕಿದವರ ಹಿತ ಕಾಪಾಡಲು ಹಾಗೂ ಕಿರುಕುಳ ತಪ್ಪಿಸಲು ಸೂಕ್ತ ಕಾನೂನು ರಚಿಸಲು ಕೇಂದ್ರವನ್ನು ಒತ್ತಾಯಿಸಲಾಗುವುದು.

ಕಿರುಕುಳ ಮುಂದುವರೆದರೆ ದೂರು ಸಲ್ಲಿಸಿ: ಸರ್ಕಾರದ ಎಚ್ಚರಿಕೆ ನೀಡಿದ ನಂತರವೂ ಕಂಪನಿಗಳು ಸಾಲ ಪಡೆದವರಿಗೆ ಶೋಷಣೆ ಮಾಡಲು ಮುಂದಾದರೆ ಅಂತಹವರು ಸ್ಥಳೀಯ ಪೋಲಿಸ್ ಠಾಣೆ ಇಲ್ಲವೇ ಜಿಲ್ಲಾಧಿಕಾರಿಗಳಿಗೆ ದೂರು ನೀಡುವಂತೆ ಸಲಹೆ ಮಾಡಿದ್ದಾರೆ. ಶೋಷಣೆ ನಡೆಸಿದ ಕುರಿತು ಮಾಹಿತಿ ದೊರೆತರೆ ಪೋಲಿಸರೇ ಸ್ವಯಂ ಪ್ರೇರಿತವಾಗಿ ಅಂತಹ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದಾರೆ.

ಆರ್‌ಬಿಐ ನಿಯಮಾವಳಿ ಪಾಲಿಸಿ: ಆರ್‌ಬಿಐ ನಿಯಮಾವಳಿಯಂತೆ ಶೇಕಡ 17.07ಕ್ಕಿಂತ ಹೆಚ್ಚು ಬಡ್ಡಿ ವಸೂಲಿ ಮಾಡುವಂತಿಲ್ಲ, ಆದರೆ, ಪ್ರಸ್ತುತ ಶೇ.28ರಿಂದ ಶೇ.29ರಷ್ಟು ವಸೂಲಿ ಮಾಡುತ್ತಿರುವ ಮಾಹಿತಿಗಳಿವೆ. ಇನ್ನು ಮುಂದೆ ಇಂತಹ ಕೃತ್ಯಗಳನ್ನು ಸಹಿಸುವುದಿಲ್ಲ, ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ, ಅನಧಿಕೃತ ವ್ಯವಹಾರ ನಡೆಸುತ್ತಿರುವ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಕಾನೂನು, ಗೃಹ, ಹಣಕಾಸು, ಕಂದಾಯ ಇಲಾಖೆ ಸೇರಿ ಮಾರ್ಗಸೂಚಿ ರೂಪಿಸಲಾಗುವುದು, ಅಲ್ಲದೆ, ನೆರೆ ರಾಜ್ಯಗಳಲ್ಲಿ ಸಾಲಗಾರರ ಕಿರುಕುಳ ತಪ್ಪಿಸುವ ಕುರಿತು ಇರುವ ಕಾನೂನುಗಳನ್ನು ಪರಿಶೀಲಿಸಿ ಹೊಸ ಕಾನೂನು ಜಾರಿಗೆ ತರಲಾಗುವುದು.

ಮೈಕ್ರೋಫೈನಾನ್ಸ್ ಅಸೋಸಿಯೇಷನ್ ಹಾಗೂ ಆರ್‌ಬಿಐ ಅಧಿಕಾರಿಗಳ ಅಭಿಪ್ರಾಯ ಕೇಳಲಾಗಿದೆ, ಯಾರಿಗೂ ಸಾಲ ಕೊಡಬೇಡಿ ಎಂಬುದಾಗಿ ನಾವು ಹೇಳುವುದಿಲ್ಲ, ಆದರೆ ವಸೂಲಿ ವೇಳೆ ಕಿರುಕುಳ ಕೊಡಲೇಬಾರದು, ಆರ್‌ಬಿಐ ನಿಯಮದಂತೆ ನಡೆದುಕೊಳ್ಳಬೇಕೆಂದು ಮುಖ್ಯಮಂತ್ರಿ ಸೂಚಿಸಿದರು.

ದ್ವೇಷದಿಂದಲ್ಲ

ಕೈಗೆತ್ತಿಕೊಳ್ಳಲಾಗಿದೆ. ಆದರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಟಿಡಿಆರ್ ನೀಡಿ ಅಭಿವೃದ್ಧಿ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರು. ಅರಮನೆ ಜಾಗ ಸ್ವಾಧೀನಕ್ಕೆ 1996ರಲ್ಲೇ ಕಾಯಿದೆ ರೂಪಿಸಲಾಗಿದೆ, ಇದರ ಬಗ್ಗೆ ರಾಜಮನೆತನದವರು ನ್ಯಾಯಾಲಯದ ಮೆಟ್ಟಿಲು ಹತ್ತಿದ್ದಾರೆ. ಪ್ರಕರಣದ ವಿಚಾರಣೆ ನಡೆಸುತ್ತಿರುವ ಸುಪ್ರೀಂಕೋರ್ಟ್ ರಾಜ್ಯ ಸರ್ಕಾರದ ಸುಗ್ರೀವಾಜ್ಞೆಗೆ ತಡೆಯಾಜ್ಞೆ ನೀಡಿಲ್ಲ. ನಮಗೆ ಇರುವ ಕಾನೂನಿನ ಮೂಲಕ ಅರಮನೆ ಜಾಗವನ್ನು ವಶಕ್ಕೆ ತೆಗೆದುಕೊಳ್ಳಲು ಸುಗ್ರೀವಾಜ್ಞೆ ತರುತ್ತಿದ್ದೇವೆ. ಇದರಲ್ಲಿ ಯಾವುದೇ ದ್ವೇಷದ ವಿಚಾರ ಬರುವುದಿಲ್ಲ ಎಂದರು.

ಮಹಿಳೆ ದುರಂತ ಸಾವು

ನಂಜುಂಡಸ್ವಾಮಿ ಅವರ ಮನೆಯಲ್ಲಿ ಉಳಿದುಕೊಂಡಿದ್ದರು. ಶನಿವಾರ ಬೆಳಗ್ಗೆ ಮೈಸೂರಿನಿಂದ ಬೇಗೂರಿಗೆ ಕೆಎಸ್ ಆರ್‌ಟಿಸಿ(ಕಚೆಎ.10, ಎಫ್.0187) ಬಸ್‌ನಲ್ಲಿ ತೆರಳುತ್ತಿದ್ದರು. ಬಸ್‌ನ ಬಲಭಾಗದ ಆಸನದಲ್ಲಿ ಕುಳಿತು ಪ್ರಯಾಣಿಸುತ್ತಿದ್ದು, 11.15ರಲ್ಲಿ ಮುದ್ದಹಳ್ಳಿ ಗೇಟ್ ಬಳಿ ಬಸ್ ಮುಂದೆ ಹೋಗುತ್ತಿದ್ದ ವಾಹನವನ್ನು ಓವರ್‌ಟೇಕ್ ಮಾಡುವ ವೇಳೆ ಶಿವಲಿಂಗಮ್ಮ ಅವರು ಉಗಿಯಲೆಂದು ಕಿಟಕಿಯಿಂದ ತಲೆ ಹೊರಗೆ ಹಾಕಿದ್ದಾರೆ. ಈ ವೇಳೆ ಗುಂಡ್ಲುಪೇಟೆ ಕಡೆಯಿಂದ ವೇಗವಾಗಿ ಬಂದ ಟಿಪ್ಪರ್ (ಕೆಎ.16, ಎಎ.9264) ಉಜ್ಜಿಕೊಂಡು ಹೋಗಿದ್ದರಿಂದ ತಲೆ ನಜ್ಜುಗುಜ್ಜಾಗಿದೆ. ಅಲ್ಲದೇ ಕೈ ತುಂಡಾಗಿ ಬಿದ್ದಿದ್ದು, ಆಕೆ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇದೇ ವೇಳೆ ಹಿಂಬದಿ ಸೀಟಿನಲ್ಲಿದ್ದ ಲತಾಮಣಿ ಹಾಗೂ ನಾಗರತ್ನ ಎಂಬುವರಿಗೂ ಪೆಟ್ಟಾಗಿದ್ದು, ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಸಂಚಾರ ಠಾಣೆ ಎಸ್‌ಐ ಸಿದ್ದರಾಜು ಮೃತದೇಹವನ್ನು ನಂಜನಗೂಡಿನ ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ರವಾನಿಸಿ ಮರಣೋತ್ತರ ಪರೀಕ್ಷೆಗೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು.

ಈ ಸಂಬಂಧ ಮೃತ ಮಹಿಳೆ ಪುತ್ರ ರಮಾಕಾಂತ್ ನೀಡಿದ ದೂರಿನ ಮೇರೆಗೆ ನಂಜನಗೂಡಿನ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಲ್ಲದೇ ಘಟನೆಗೆ ಕಾರಣವಾದ ಕೆಎಸ್ ಆರ್‌ಟಿಸಿ ಬಸ್ ಹಾಗೂ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ಬೊಲೆರೋ ಸರಕು ಸಾಗಾಣೆ ವಾಹನ ವಶಕ್ಕೆ ಪಡೆದಿದ್ದು, ಘಟನೆ ಬಳಿಕ ಸ್ಥಳದಿಂದ ಚಾಲಕ ಪರಾರಿಯಾಗಿದ್ದು, ಆತನ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಅಭಿನಂದನೆ, ಹೂ ಸುರಿಮಳೆ

ತರಬೇತಿ ಪಡೆದಿದ್ದೇನೆ. ಎಲ್ಲರೂ ನನಗೆ ಪ್ರೀತಿ, ಬೆಂಬಲ, ಆಶೀರ್ವಾದ ಮಾಡಿದ್ದಾರೆ. ಮುಂದೆ ನಾನು ಏಷ್ಯನ್ ಗೇಮ್ಸ್, ಒಲಂಪಿಕ್ಸ್‌ನಲ್ಲಿ ಆಡುವ ಕನಸ್ಸಿದೆ ಎಂದರು.

ತಂದೆ–ತಾಯಿ ಕೋಚ್ ಮಂಜುನಾಥ್‌ಗೆ ಸಾಧನೆ ಅರ್ಪಣೆ: ನನ್ನ ಸಾಧನೆಗೆ ನನ್ನ ತಂದೆ–ತಾಯಿ ಕಾರಣ. ಅವರ ಬೆಂಬಲದಿಂದಲೇ ನಾನು ಈ ಮಟ್ಟದ ಸಾಧನೆ ಮಾಡಲು ಸಾಧ್ಯವಾಯಿತು. ಹಾಗೆಯೇ ನನ್ನ ಕೋಚ್ ಮಂಜುನಾಥ್ ಇಲ್ಲದಿದ್ದರೆ ನಾನು ಯಾವುದೇ ಸಾಧನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಈ ಗೆಲುವನ್ನು ತಂದೆ–ತಾಯಿ ಹಾಗೂ ಕೋಚ್ ಮಂಜುನಾಥ್ ಅವರಿಗೆ ಅರ್ಪಿಸುತ್ತೇನೆ ಎಂದು ಗದ್ಗದಿತರಾದರು.

ಚೈತ್ರಾ ಅವರಿಗೆ ಚಿನ್ನದ ಸರ ಹಾಕುವ ಮೂಲಕ ಅಭಿನಂದಿಸಿ ಮಾತನಾಡಿದ ಸಂಸದ ಸುನೀಲ್ ಬೋಸ್, ಯುವಕರಿಗೆ ಉತ್ತಮ ಕ್ರೀಡಾಂಗಣ ನಿರ್ಮಿಸಿ ಕೊಡುವ ನಿಟ್ಟಿನಲ್ಲಿ ಸರ್ಕಾರ ಚಿಂತಿಸಿದ್ದು, ಸಿಎಂ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರಿಗೆ ಮನವಿ ಮಾಡಿ ಶೀಘ್ರದಲ್ಲೇ ಕಾರ್ಯರೂಪಕ್ಕೆ ಬರುವಂತೆ ಕೆಲಸ ಮಾಡುತ್ತೇನೆ ಎಂದರು. ಇದೇ ವೇಳೆ ಖೋ ಖೋ ವಿಶ್ವಕಪ್‌ನಲ್ಲಿ ಉತ್ತಮ ಸಾಧನೆ ಮಾಡಿದ ಬಿ.ಚೈತ್ರಾ, ತಾಂತ್ರಿಕ ಅಧಿಕಾರಿ ಕೆ.ಎಸ್.ಅಮೂಲ್ಯ, ಕುಮಾರಿ ವೀಣಾ ಹಾಗೂ ತರಬೇತುದಾರ ಮಂಜುನಾಥ್ ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ವಿದ್ಯಾ ದರ್ಶಿನಿ ಕಾನ್ವೆಂಟ್‌ನ ಸಂಸ್ಥಾಪಕ ಅಧ್ಯಕ್ಷ ಕು.ಶಿ.ಭೃಂಗೀಶ್, ರೈತ ಮುಖಂಡ ಕುರುಬೂರು ಶಾಂತ ಕುಮಾರ್, ಅತ್ತಹಳ್ಳಿ ದೇವರಾಜ್, ಮುಖಂಡ ಗೌರಿಶಂಕರ್, ಕುರುಬೂರು ಶಿವು, ಸಿದ್ದೇಶ್, ಶಾಂತರಾಜು, ಗುರುಮೂರ್ತಿ, ಶಂಕರ್ ಗುರು, ಖೋಖೋ ಪಂದ್ಯಾವಳಿಯಲ್ಲಿ ತಾಂತ್ರಿಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಕೆ.ಎಸ್.ಅಮೂಲ್ಯ, ಬಿಇಓ ಶಿವಮೂರ್ತಿ, ಕಿರಗಸೂರು ಶಂಕರ್, ಗೋಪಿನಾಥ್, ಡಾ.ರೇವಣ್ಣ, ಹಲಸಹಳ್ಳಿ ಮಹದೇವ ಸ್ವಾಮಿ, ಅಂಗಡಿ ಶೇಖರ್ ಮತ್ತಿತರಿದ್ದರು.

ಚೈತ್ರಾಗೆ ಅದ್ದೂರಿ ಸ್ವಾಗತ

ತಿ.ನರಸೀಪುರ: ಖೋ ಖೋ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಉತ್ತಮ ಸಾಧನೆ ಮೆರೆದ ತಾಲೂಕಿನ ಹೆಮ್ಮೆಯ ಆಟಗಾರ್ತಿ ಬಿ.ಚೈತ್ರಾ ಅವರಿಗೆ ತವರು ಗ್ರಾಮದಲ್ಲಿ ಅದ್ದೂರಿ ಸ್ವಾಗತ ದೊರೆಯಿತು. ನವದೆಹಲಿಯಲ್ಲಿ ಇತ್ತೀಚಿಗೆ ನಡೆದ ಮಹಿಳಾ ಖೋ ಖೋ ವಿಶ್ವಕಪ್ ಪಂದ್ಯಾವಳಿಯಲ್ಲಿ ದಕ್ಷಿಣ ಭಾರತದ ಏಕೈಕ ಆಟಗಾರ್ತಿಯಾಗಿ ಆಯ್ಕೆಯಾಗಿ ಪಂದ್ಯಾವಳಿಯಲ್ಲಿ ನಿರೀಕ್ಷೆಗೂ ಮೀರಿದ ಸಾಹಸ ಪ್ರದರ್ಶಿಸಿ ಗ್ರಾಮದ ಹೆಸರನ್ನು ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಗ್ರಾಮೀಣ ಯುವ ಪ್ರತಿಭೆ ಬಿ.ಚೈತ್ರಾ ಶನಿವಾರ ಸಂಜೆ ಕುರುಬೂರು ಗ್ರಾಮದ ತಾನು ವಿದ್ಯಾಭ್ಯಾಸ ಮಾಡಿದ್ದ ಶ್ರೀನಿರ್ವಾಣಸ್ವಾಮಿ ಗ್ರಾಮಾಂತರ ಪ್ರೌಢಶಾಲೆಗೆ ಬರುತ್ತಿದ್ದಂತೆ ಶಾಲಾ ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿ–ವಿದ್ಯಾರ್ಥಿನಿಯರು ಅದ್ದೂರಿ ಸ್ವಾಗತ ಕೋರಿದರು. ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾಗವಹಿಸಿದ ಮೊದಲ ಪಂದ್ಯದಲ್ಲೇ ಉತ್ತಮ ಪ್ರದರ್ಶನ ನೀಡಿ ಉತ್ತಮ ಆಟಗಾರ್ತಿ ಪ್ರಶಸ್ತಿ ಮುಡಿಗೇರಿಸಿಕೊಂಡ ಗ್ರಾಮದ ಮನೆ ಮಗಳನ್ನು ಸ್ವಾಗತಿಸಲು ಇಡೀ ಗ್ರಾಮಕ್ಕೆ ಗ್ರಾಮವೇ ಶಾಲೆಯ ಬಳಿ ಜಮಾವಣೆಯಾಗಿತ್ತು. ಶಾಲೆ ಮುಂಭಾಗ ವಾದ್ಯ ಮೇಳಗಳೊಂದಿಗೆ ಶಾಲಾ ವಿದ್ಯಾರ್ಥಿಗಳು ಚೈತ್ರಾಳ ಮೇಲೆ ಹೂವಿನ ಮಳೆಗರೆದರು. ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು. ನೂರಾರು ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ಗ್ರಾಮಸ್ಥರು ಸಾರ್ವಜನಿಕರು ಶಾಲೆ ಎದುರು ಜಮಾಯಿಸಿ ಚೈತ್ರಾಳಿಗೆ ಜೈಕಾರ ಕೂಗಿದರು. ತವರು ಗ್ರಾಮದ ಅಭಿಮಾನ ಕಂಡು ಚೈತ್ರಾ ಪುಳಕಿತರಾದರು. ಭೂಮಿ ಪೂಜೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಂಸದ ಸುನೀಲ್ ಬೋಸ್ ಚೈತ್ರಾರನ್ನು ಅಭಿನಂದಿಸಿದರು.


ಬಿ.ಚೈತ್ರಾ ಅವರಿಗೆ ಸಂಸದ ಸುನೀಲ್ ಬೋಸ್‌ರಿಂದ ಅಭಿನಂದನೆ



ತಿ.ನರಸೀಪುರ ತಾಲೂಕು ಕುರುಬೂರು ಗ್ರಾಮದಲ್ಲಿ ಖೋ ಖೋ ವಿಶ್ವಕಪ್ ವಿಜೇತೆ ಬಿ.ಚೈತ್ರಾ (ಎಡತುದಿ) ಅವರಿಗೆ ಸಂಸದ ಸುನೀಲ್ ಬೋಸ್ ಚಿನ್ನದ ಸರ ಹಾಕಿ ಅಭಿನಂದಿಸಿದರು.

9 ಮಂದಿಗೆ ಪದ್ಮಭೂಷಣ ಪ್ರಶಸ್ತಿ


ಭೀಮವ್ವ


ಹಾಸನ್ ರಘು


ಪ್ರಶಾಂತ್


ಅಂಬಾಜಿ


ವಿಜಯಲಕ್ಷ್ಮಿ

ನಿರ್ದೇಶಕ ಹಾಸನ ರಘು, ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ, ಕೈಗಾರಿಕಾ ಕ್ಷೇತ್ರದಲ್ಲಿ ಪ್ರಶಾಂತ್ ಪ್ರಕಾಶ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ಘೋಷಣೆಯಾಗಿದ್ದು, ಇವರೆಲ್ಲರೂ ಕರ್ನಾಟಕದ ಸಾಧಕರು. ತೆಲುಗು ಚಿತ್ರರಂಗದ ಹಿರಿಯ ನಟ ನಂದಮೂರಿ ಬಾಲಕೃಷ್ಣ, ತಮಿಳು ನಟ ಎಸ್. ಅಜಿತ ಕುಮಾರ್ ಅವರಿಗೆ ಪದ್ಮಭೂಷಣ, ಕ್ರಿಕೆಟಿಗ ರವಿಚಂದ್ರನ್ ಅಶ್ವಿನ್ ಅವರು ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪದ್ಮವಿಭೂಷಣ: ದುವ್ವೂರ್ ನಾಗೇಶ್ವರ ರೆಡ್ಡಿ (ತೆಲಂಗಾಣ), ನಿವೃತ್ತ ನ್ಯಾಯಮೂರ್ತಿ ಜಗದೀಶ್ ಸಿಂಗ್ ಖೇಹರ್ (ಚಂಡೀಗಢ್), ಶ್ರೀಮತಿ ಕುಮುದಿನಿ ರಜನಿಕಾಂತ್ ಲಖಿಯಾ (ಗುಜರಾತ್), ಲಕ್ಷ್ಮೀನಾರಾಯಣ ಸುಬ್ರಹ್ಮಣ್ಯಂ (ಕರ್ನಾಟಕ), ಎಂ.ಟಿ. ವಾಸುದೇವನ್ ನಾಯರ್ (ಕೇರಳ, ಮರಣೋತ್ತರ), ಒಸಾಮು ಸುಜುಕಿ (ಜಪಾನ್, ಮರಣೋತ್ತರ), ಶಾರದಾ ಸಿನ್ಹಾ (ಬಿಹಾರ್, ಮರಣೋತ್ತರ).

ಪದ್ಮಭೂಷಣ: ಎ. ಸೂರ್ಯಪ್ರಕಾಶ್ (ಕರ್ನಾಟಕ), ಚಿತ್ರನಟ ಅನಂತನಾಗ್ (ಕರ್ನಾಟಕ), ಬಿಬೇಕ್ ದೆಬರಾಯ್ (ದೆಹಲಿ, ಮರಣೋತ್ತರ), ಜತಿನ್ ಗೋಸ್ವಾಮಿ (ಅಸ್ಸಾಂ), ಜೋಸ್ ಚಾಕೊ ಪೆರಿಯಪುರಂ (ಕೇರಳ), ಕೈಲಾಸ್‌ನಾಥ್ ದೀಕ್ಷಿತ್ (ದೆಹಲಿ), ಮನೋಹರ್ ಜೋಷಿ (ಮಹಾರಾಷ್ಟ್ರ, ಮರಣೋತ್ತರ), ನಲ್ಲಿ ಕುಪ್ಪುಸ್ವಾಮಿ ಶೆಟ್ಟಿ (ತಮಿಳುನಾಡು), ನಂದಮೂರಿ ಬಾಲಕೃಷ್ಣ (ಆಂಧ್ರಪ್ರದೇಶ), ಪಿ.ಆರ್. ಶ್ರೀಜೇಶ್ (ಕೇರಳ), ಪಂಕಜ್ ಪಟೇಲ್ (ಗುಜರಾತ್), ಪಂಕಜ್ ಉದಾಸ್ (ಮಹಾರಾಷ್ಟ್ರ, ಮರಣೋತ್ತರ), ರಾಮ್‌ಬಹದ್ದೂರ್ ರಾಯ್ (ಉತ್ತರ ಪ್ರದೇಶ), ಸಾಧ್ವಿ ರಿತಾಂಬರ (ಉತ್ತರ ಪ್ರದೇಶ), ಎಸ್. ಅಜಿತ್‌ಕುಮಾರ್ (ತಮಿಳುನಾಡು), ಶೇಖರ್ ಕಪೂರ್ (ಮಹಾರಾಷ್ಟ್ರ), ಶೋಭನಾ ಚಂದ್ರಶೇಖರ್ (ತಮಿಳುನಾಡು), ಸುಶೀಲ್‌ಕುಮಾರ್ ಮೋದಿ (ಬಿಹಾರ್, ಮರಣೋತ್ತರ), ವಿನೋದ್ ಧಾಮ್ (ಯುಎಸ್‌ಎ).

ಪದ್ಮಶ್ರೀ: ಅದ್ವೈತ ಚರಣ್ ಗಡ್ನಾಯಕ್ (ಒಡಿಸಾ), ಅಚ್ಯುತ್ ರಾಮಚಂದ್ರ ಪಲಾವ್ (ಮಹಾರಾಷ್ಟ್ರ), ಅಜಯ್ ವಿ. ಭಟ್ (ಯುಎಸ್‌ಎ), ಅನಿಲ್‌ಕುಮಾರ್ ಬೋರೊ (ಅಸ್ಸಾಂ), ಅರ್ಜಿತ್ ಸಿಂಗ್ (ಪಶ್ಚಿಮ ಬಂಗಾಳ), ಅರುಂಧತಿ ಭಟ್ಟಾಚಾರ್ಯ (ಮಹಾರಾಷ್ಟ್ರ), ಅರುಣೋದಯ್ ಸಹಾ (ತ್ರಿಪುರ), ಅರುಣ್ ಶರ್ಮಾ (ಕೆನಡಾ), ಅಶೋಕ್‌ಕುಮಾರ್ ಮಹಾಪಾತ್ರ (ಒಡಿಶಾ), ಅಶೋಕ್ ಲಕ್ಷ್ಮಣ್ ಸರಾಫ್ (ಮಹಾರಾಷ್ಟ್ರ), ಅಶುತೋಷ್ ಶರ್ಮಾ (ಉತ್ತರ ಪ್ರದೇಶ), ಅಶ್ವಿನಿ ಬಿಡೆ ದೇಶಪಾಂಡೆ (ಮಹಾರಾಷ್ಟ್ರ), ಬೈಜನಾಥ್ ಮಹಾರಾಜ್ (ರಾಜಸ್ಥಾನ), ಬ್ಯಾರಿ ಗಾಡ್‌ಫ್ರೇ ಜಾನ್ (ದೆಹಲಿ), ಬೇಗಂ ಪತುಲ್ (ರಾಜಸ್ಥಾನ್), ಭರತ್ ಗುಪ್ತಾ (ದೆಹಲಿ), ಭೆರು ಸಿಂಗ್ ಚೌಹಾಣ್ (ಮಧ್ಯಪ್ರದೇಶ), ಭೀಮ್ ಸಿಂಗ್ ಭವೇಶ್ (ಬಿಹಾರ್), ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ (ಕರ್ನಾಟಕ), ಬುದೇಂದ್ರಕುಮಾರ್ ಜೈನ್ (ಮಧ್ಯಪ್ರದೇಶ), ಸಿ.ಎಸ್. ವಿದ್ಯಾನಾಥನ್ (ದೆಹಲಿ), ಚೈತ್ರಂ ಡೆಕೋಚಂದ್ ಪವಾರ್ (ಮಹಾರಾಷ್ಟ್ರ), ಚಂದ್ರಕಾಂತ್ ಸೇತ್ (ಗುಜರಾತ್, ಮರಣೋತ್ತರ), ಚಂದ್ರಕಾಂತ್ ಸೋಂಪುರ (ಗುಜರಾತ್), ಚೇತನ್ ಇ. ಚಿಟ್ನಿಸ್ (ಫ್ರಾನ್ಸ್), ಡೇವಿಡ್ ಆರ್. ಸೈಮೀಲಿಯಾ (ಮೇಘಾಲಯ), ದುರ್ಗಾಚರಣ್ ರಣಬೀರ್ (ಒಡಿಶಾ), ಫಾರೂಖ್ ಅಹಮದ್ ಮಿರ್ (ಜಮ್ಮು–ಕಾಶ್ಮೀರ್), ಜ್ಞಾನೇಶ್ವರ್ ಶಾಸ್ತ್ರಿ ದ್ರಾವಿಡ್ (ಉತ್ತರ ಪ್ರದೇಶ), ಗೀತಾ ಉಪಾಧ್ಯಾಯ (ಅಸ್ಸಾಂ), ಗೋಕುಲ್ ಚಂದ್ರದಾಸ್ (ಪಶ್ಚಿಮ ಬಂಗಾಳ), ಗುರುವಾಯೂರ್ ದೊರೈ (ತಮಿಳುನಾಡು), ಹರ್‌ಚಂದನ್ ಸಿಂಗ್ ಭಟ್ಟಿ (ಮಧ್ಯಪ್ರದೇಶ), ಹರಿಮಾನ್ ಶರ್ಮಾ (ಹಿಮಾಚಲ ಪ್ರದೇಶ), ಹರೀಂದರ್ ಸಿಂಗ್ ಶ್ರೀನಗರ್ ವಾಲೆ (ಪಂಜಾಬ್), ಹರ್ವಿಂದರ್ ಸಿಂಗ್ (ಹರಿಯಾಣ), ಹಾಸನ್ ರಘು (ಕರ್ನಾಟಕ), ಹೇಮಂತ್‌ಕುಮಾರ್ (ಬಿಹಾರ್), ಹೃದಯ್ ನಾರಾಯಣ್ ದೀಕ್ಷಿತ್ (ಉತ್ತರ ಪ್ರದೇಶ), ಹಗ್ ಅಂಡ್ ಕೊಲ್ಲೀನ್ ಗ್ಯಾಡ್ನರ್ (ಉತ್ತರಖಂಡ್, ಮರಣೋತ್ತರ), ಇನಿವಳಪ್ಪಿಲ್ ಮಣಿ ವಿಜಯನ್ (ಕೇರಳ), ಜಗದೀಶ್ ಜೋಶಿಲ (ಮಧ್ಯಪ್ರದೇಶ), ಜೋಸ್ಪಿಂದರ್ ನರೂಲ (ಮಹಾರಾಷ್ಟ್ರ), ಜೋನ್ಸ್ ಮೇಥಿ (ಬ್ರೆಜಿಲ್), ಜೋಯಿನಾ ಚರಣ್ ಬತಾರಿ (ಅಸ್ಸಾಂ), ಜುಮ್ಡೆ ಯೋಮ್‌ಗಮ್ ಗಮ್ಲಿನ್ (ಅರುಣಾಚಲ ಪ್ರದೇಶ), ಕೆ. ದಾಮೋದರನ್ (ತಮಿಳುನಾಡು), ಕೆ.ಎಲ್.ಕೃಷ್ಣ (ಆಂಧ್ರ ಪ್ರದೇಶ), ಕೆ. ಓಮನಕುಟ್ಟಿ ಅಮ್ಮ (ಕೇರಳ), ಕಿಶೋರ್ ಕುನಾಲ್ (ಬಿಹಾರ್, ಮರಣೋತ್ತರ), ಎಲ್. ಹ್ಯಾಂಗ್‌ಥಿಂಗ್ (ನಾಗಾಲ್ಯಾಂಡ್), ಲಕ್ಷ್ಮೀಪತಿ ರಾಮಸುಬ್ಬಯ್ಯರ್ (ತಮಿಳುನಾಡು), ಲಲಿತಕುಮಾರ್ ಮಲ್ಹೋತ್ರ (ಜಮ್ಮು–ಕಾಶ್ಮೀರ), ಲಾಮಾ ಲೋಬ್ಜಾಂಗ್ (ಲಡಾಖ್), ಲಿಬಿಯಾ ಲೋಬೊ ಸರ್‌ದೇಸಾಯಿ (ಗೋವಾ) ಎಂ.ಡಿ. ಶ್ರೀನಿವಾಸ್ (ತಮಿಳುನಾಡು), ಮುಡುಗುಳ ನಾಗಪಣಿ ಶರ್ಮಾ (ಆಂಧ್ರ ಪ್ರದೇಶ), ಮಹಾಬೀರ್ ನಾಯಕ್ (ಜಾರ್ಖಂಡ್), ಮಮಹಾ ಶಂಕರ್ (ಪಶ್ಚಿಮ ಬಂಗಾಳ), ಮಂಡ ಕೃಷ್ಣ ಮಾದಿಗ (ತೆಲಂಗಾಣ), ಮಾರುತಿ ಭುಜಂಗರಾವ್ ಚಿತಂಪಲ್ಲಿ (ಮಹಾರಾಷ್ಟ್ರ), ಮಿರಿಯಾಲಾ ಅಪ್ಪಾರಾವ್ (ಆಂಧ್ರಪ್ರದೇಶ, ಮರಣೋತ್ತರ), ನಾಗೇಂದ್ರನಾಥ್ ರಾಯ್ (ಪಶ್ಚಿಮ ಬಂಗಾಳ), ನಾರಾಯಣ್ (ಉತ್ತರ ಪ್ರದೇಶ, ಮರಣೋತ್ತರ), ನರೇನ್ ಗ್ರುಂಗ್ (ಸಿಕ್ಕಿಂ), ನೀರಜ್ ಭಟ್ಲ (ದೆಹಲಿ), ನಿರ್ಮಲಾದೇವಿ (ಬಿಹಾರ್), ನಿತಿನ್ ನಹೋರಿಯಾ (ಯುಎಸ್‌ಎ), ಓಂಕಾರ್ ಸಿಂಗ್ ಪಾಹ್ವ (ಪಂಜಾಬ್), ಪಿ. ದಕ್ಷಿಣಮೂರ್ತಿ (ಪುದುಚೇರಿ), ಪಾಂಡಿರಾವ್ ಮಾಂಡವಿ (ಛತ್ತೀಸ್‌ಗಢ್), ಪಾರ್ಮರ್ ಲವ್‌ಜೀ ಬೈಯ್ಯಾ ನಾಗ್‌ಜೀ ಭೈಯ್ (ಗುಜರಾತ್), ಪವನ್ ಗೋಂಕಾ (ಪಶ್ಚಿಮ ಬಂಗಾಳ), ಪ್ರಶಾಂತ್ ಪ್ರಕಾಶ್ (ಕರ್ನಾಟಕ), ಪ್ರತಿಭಾ ಸತ್ಪತಿ (ಒಡಿಸ್ಸಾ), ಪುರಿಸಾಯ್ ಕಣ್ಣಪ್ಪ ಸಂಬಂಧನ್ (ತಮಿಳುನಾಡು), ಆರ್. ಅಶ್ವಿನ್ (ತಮಿಳುನಾಡು), ಆರ್.ಜಿ. ಚಂದ್ರಮೋಗನ್ (ತಮಿಳುನಾಡು), ರಾಧಾ ಬಹಿನ್ ಭಟ್ (ಉತ್ತರಾಖಂಡ್), ರಾಧಾಕೃಷ್ಣ ದೇವಸೇನಾಪತಿ (ತಮಿಳುನಾಡು) ರಾಮ್‌ದರ್ಶ ಮಿಶ್ರಾ (ದೆಹಲಿ), ರಣೇಂದ್ರ ಭಾನು ಮಜಂದಾರ್ (ಮಹಾರಾಷ್ಟ್ರ), ರತನ್‌ಕುಮಾರ್ ಪರಿಮೋ (ಗುಜರಾತ್), ರೆಬಾಕಾಂತ್ ಮಹಂತಾ (ಅಸ್ಸಾಂ), ಲೆನ್‌ಥೀ ಲಾರ್ವಾನಾ (ಮಿಜೋರಾಂ), ರಿಕ್ಕಿ ಕೇಜ್ (ಕರ್ನಾಟಕ), ಸಜ್ಜನ್ ಭುಜಂಕ (ಪಶ್ಚಿಮ ಬಂಗಾಳ), ಸಾಲಿ ಹೋಲ್ಕರ್ (ಮಧ್ಯಪ್ರದೇಶ), ಸಂತ್ ರಾಮ್ ದೇಸ್ವಾಲ್ (ಹರಿಯಾಣ), ಸತ್ಯಪಾಲ್ ಸಿಂಗ್ (ಉತ್ತರ ಪ್ರದೇಶ), ಸೀನೀ ವಿಶ್ವನಾಥನ್ (ತಮಿಳುನಾಡು), ಸೀತಾರಾಮನ್ ಪಂಚನಾಥನ್ (ಯುಎಸ್‌ಎ), ಶೀಖಾ ಶೈಖಾ ಅಲಿ ಅಲ್–ಜಬರ್ ಅಲ್–ಸಬಾ (ಕುವೈತ್).

ಮೈಸೂರು ಮಿತ್ರ

ಪ್ರಮಾಣ ಪತ್ರ ವಿತರಣೆ...



ಬೆಂಗಳೂರಿನ ರಾಜಭವನದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಮತದಾರರ ದಿನ ಕಾರ್ಯಕ್ರಮದಲ್ಲಿ ಉತ್ತಮ ಚುನಾವಣಾಧಿಕಾರಿ ಪ್ರಶಸ್ತಿಗೆ ಆಯ್ಕೆಯಾಗಿರುವ ಮೈಸೂರು ನಗರಪಾಲಿಕೆ ಆಯುಕ್ತ ಅಷಾದ್ ಉರ್ ರೆಹಮಾನ್ ಷರೀಫ್ ಅವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಪ್ರಮಾಣ ಪತ್ರ ನೀಡಿ, ಗೌರವಿಸಿದರು.

ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕ್ ಚುನಾವಣೆಯಲ್ಲಿ ಅಕ್ರಮ ಆರೋಪ

ಮತದಾರರ ಪಟ್ಟಿಯ ಅಕ್ರಮ ಸರಿಪಡಿಸಿದ ನಂತರ ಚುನಾವಣೆ ನಡೆಸಿ

ಮೈಸೂರು, ಜ.25(ಜಿಎ)-ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕ್‌ಗೆ ಫೆ.16 ರಂದು ಚುನಾವಣೆ ನಿಗದಿ ಮಾಡಲಾಗಿದೆ. ಆದರೆ ಈಗಿನ ಆಡಳಿತ ಮಂಡಳಿಯು ಚುನಾವಣಾಧಿಕಾರಿಗಳೊಡನೆ ಶಾಮೀಲಾಗಿ ಮತದಾರರ ಪಟ್ಟಿಯಲ್ಲಿ ಅಕ್ರಮ ಎಸಗಿದೆ. ಹೀಗಾಗಿ ಚುನಾವಣೆ ಮುಂದೂಡಿ, ಅಕ್ರಮ ಸರಿಪಡಿಸಿ ನಂತರವಷ್ಟೇ ಚುನಾವಣೆ ನಡೆಸಬೇಕು ಎಂದು ಸದಸ್ಯ ಟಿ.ಗೋಪಾಲ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಡಳಿತ ಮಂಡಳಿ ಹಾಗೂ ಸಹಕಾರಿ ಇಲಾಖೆ ಸಮರ್ಪಕವಾಗಿ ಚುನಾವಣೆ ನಡೆಸುತ್ತಿಲ್ಲ ಎಂಬ ಅನುಮಾನ ಕಾಡಿದೆ. ಅಧಿಕಾರಿಗಳು ಆಡಳಿತ ಮಂಡಳಿಯೊಡನೆ ಶಾಮೀಲಾಗಿದ್ದಾರೆ ಎಂದು ಆಪಾದಿಸಿದರು.

ಈ ಹಿಂದೆ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡಿದ್ದರೂ ಸಹಾ ಗೈರು ಹಾಜರಿ ತೋರಿಸಿ, ಮತದಾರರ ಪಟ್ಟಿಯಿಂದ ಹೊರಗಿಡಲಾಗಿದೆ. ನಾನು ಸತತವಾಗಿ ವಾರ್ಷಿಕ ಮಹಾಸಭೆಗಳಲ್ಲಿ ಪಾಲ್ಗೊಂಡಿದ್ದರೂ ಮತದಾರರ ಪಟ್ಟಿಯಿಂದ ನನ್ನ ಹೆಸರು ಕೈಬಿಡಲಾಗಿದೆ. ಸಭೆಗೆ ಹಾಜರಾಗಿದ್ದಕ್ಕೆ ತಮ್ಮಲ್ಲಿ ದಾಖಲೆ ಇದೆ. ಒಟ್ಟಾರೆ ಸುಮಾರು 10 ಸಾವಿರ ಸದಸ್ಯರಿದ್ದರೂ ಸಾವಿರಕ್ಕೂ ಹೆಚ್ಚು ಮಂದಿಯನ್ನು ಪಟ್ಟಿಯಿಂದ ಹೊರಗಿಡಲಾಗಿದೆ. ಹೀಗಾಗಿ ಸದ್ಯಕ್ಕೆ ಚುನಾವಣೆ ಮುಂದೂಡಿ, ಅಕ್ರಮ ಸರಿಪಡಿಸಿದ ನಂತರವಷ್ಟೇ ಚುನಾವಣೆ ನಡೆಸಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸದಸ್ಯರಾದ ವಿಜಯ ಕುಮಾರ್, ರಾಘವೇಂದ್ರ ಸುಭಾಷ್ ಇದ್ದರು.

ಮಂಜೂರಾತಿ ಪತ್ರ ವಿತರಣೆ, ಅಭಿನಂದನೆ



76ನೇ ಗಣರಾಜ್ಯೋತ್ಸವ ಪ್ರಯುಕ್ತ ವೃದ್ಧಾಪ್ಯ ವೇತನ, ವಿಧವಾವೇತನದ ಮಂಜೂರಾತಿ ಪತ್ರವನ್ನು ಶಾಸಕ ಹರೀಶ್‌ಗೌಡರ ಪತ್ನಿ ಶ್ರೀಮತಿ ಗೌರಿ ಹರೀಶ್‌ಗೌಡ ವಿತರಿಸಿದರು. ಇದೇ ವೇಳೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಜಯಗಳಿಸಿದ ಎಂ.ಕುಸುಮಾ ಅವರನ್ನು ಅಭಿನಂದಿಸಲಾಯಿತು. ಬಡವರ ಬಂಧು ಸಂಘದ ಅಧ್ಯಕ್ಷ ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಕೃಷ್ಣ, ಕೇಶವ್, ಪ್ರದೀಪ್, ದೇವೇಗೌಡ, ಬಸವಹಳ್ಳಿ ಗುರುಸ್ವಾಮಿ, ಮಹದೇವು, ಸತ್ಯನಾರಾಯಣ ಇನ್ನಿತರರಿದ್ದರು.

ನಾಮಪತ್ರ ಸಲ್ಲಿಕೆ...



ಮೈಸೂರು ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಮೈಸೂರು ತಾಲೂಕು ಮತ್ತು ಮೈಸೂರು ನಗರ ಸಾಲಗಾರರಲ್ಲದವರ ಕ್ಷೇತ್ರ 1ರ ನಿರ್ದೇಶಕರ ಚುನಾವಣೆಗೆ ಗುರೂರು ಮಹೇಶ್ ನಾಮಪತ್ರ ಸಲ್ಲಿಸಿದರು. ಈ ವೇಳೆ ಕೆ.ಜಿ.ಕೊಪ್ಪಲು ಶ್ರೀನಿವಾಸ್, ಗೆಜ್ಜಗಳ್ಳಿ ಲೋಕೇಶ್, ಗುರೂರು ಶ್ರೀಕಂಠ ಮೂರ್ತಿ, ಮುರಡಗಳ್ಳಿ ನಾಗರಾಜು, ದೊಡ್ಡಕಾಟೂರು ಮೂರ್ತಿ, ಶಿವನಾಗು ಇದ್ದರು.

ಶ್ರೀರಾಮ ಮೂರ್ತಿ ಉತ್ಸವದ ಮೆರವಣಿಗೆ



ತಿ.ನರಸೀಪುರ ತಾಲೂಕಿನ ಗಾಣಿಗನಕೊಪ್ಪಲು ಗ್ರಾಮದಲ್ಲಿ ಶ್ರೀರಾಮ ಮೂರ್ತಿ ಉತ್ಸವದ ಮೆರವಣಿಗೆ ನಡೆಯಿತು. ಈ ವೇಳೆ ಮುಖಂಡರಾದ ರಾಮಣ್ಣ, ವಿಶ್ವೇಗೌಡ, ಉಮೇಶ್, ಜಗ್ಗ, ಹರಿ, ನರಸಿಂಹಯ್ಯ, ಮಹದೇವ, ನಿಂಗೇಗೌಡ, ಅರ್ಚಕ ಗೋಪಾಲಕೃಷ್ಣ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಸಾಕ್ಷರತೆ ಪ್ರಮಾಣ ಹೆಚ್ಚಾದರೂ ಮತದಾನದ ಪ್ರಮಾಣ ಕಡಿಮೆ


ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ನ್ಯಾಯಮೂರ್ತಿ ಬಿ.ಜಿ.ದಿನೇಶ್ ವಿಷಾದ

ಮೈಸೂರು, ಜ.25(ಜಿಎಲ್‌ಯು)- ಶಿಕ್ಷಣ ಕ್ಷೇತ್ರ ಬೆಳವಣಿಗೆಯಾಗಿ ಅಕ್ಷರಸ್ಥರ ಸಂಖ್ಯೆ ಹೆಚ್ಚಾದರೂ ಶೇಕಡವಾರು ಮತದಾನದ ಪ್ರಮಾಣ ಮಾತ್ರ ಕಡಿಮೆ ಯಾಗುತ್ತಿದೆ ಎಂದು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರು ನಗರಪಾಲಿಕೆಯ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ಇಂದು ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಾಗಿ ಜನರ ಹಕ್ಕು ಮತ್ತು ಜವಾಬ್ದಾರಿಗಳ ಬಗ್ಗೆ ಪರಿಣಾಮಕಾರಿಯಾಗಿ ಅರಿವು ಮೂಡಿಸಲಾಗುತ್ತಿದೆ. ಆದರೂ ಮತದಾನ ಪರಿಪೂರ್ಣವಾಗಿ ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಚುನಾವಣೆ ಸಂದರ್ಭದಲ್ಲಿ ವಿನೂತನ ಜಾಗೃತಿ ಕಾರ್ಯಕ್ರಮಗಳ ಮೂಲಕ ಮತದಾರರಲ್ಲಿ ಪರಿಣಾಮಕಾರಿ ಅರಿವು ಮೂಡಿಸಿದರೂ ಮತದಾನದ ಪ್ರಮಾಣ ಹೆಚ್ಚಾಗುತ್ತಿಲ್ಲ ಎಂದು ಹೇಳಿದರು.

ಈ ಮೊದಲು ಚುನಾವಣೆಯಲ್ಲಿ ಸ್ಪರ್ಧೆ ಮಾಡುವ ಅಭ್ಯರ್ಥಿಗೆ ಜನರೆ ಹಣ ಕೊಟ್ಟು ಸ್ವಯಂಪ್ರೇರಣೆಯಿಂದ ಮತದಾನ ಮಾಡುತ್ತಿದ್ದರು. ಆದರೆ ಈಗಿನ ಪರಿಸ್ಥಿತಿ ಬದಲಾಗಿದೆ. ಮತದಾರ ಜಾತಿ, ಧರ್ಮ, ಉಪ ಜಾತಿ, ಪಂಗಡ, ಹೊರಗಿನ ವ್ಯಕ್ತಿ, ಸ್ಥಳೀಯ ವ್ಯಕ್ತಿ ಎಂದು ವಿಂಗಡಿಸಿ ಲೆಕ್ಕಾಚಾರ ಮಾಡಿ ಮತದಾನ ಮಾಡುತ್ತಾನೆ. ಮತದಾನ ಮಾಡುವ ವ್ಯಕ್ತಿ ಯಾವುದೇ ವಿಂಗಡಣೆ ಮಾಡದೆ ಅರ್ಹ ಅಭ್ಯರ್ಥಿಯನ್ನು ಗೆಲ್ಲಿಸಬೇಕು. ಈ ಮೂಲಕ ಮತದಾರ ತಾನು ಚಲಾಯಿಸಿದ ಹಕ್ಕಿನ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ದಿನೇಶ್ ಸಲಹೆ ನೀಡಿದರು.



ಮೈಸೂರು ನಗರಪಾಲಿಕೆಯ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ಇದೇ ಮೊದಲ ಬಾರಿಗೆ ಮತದಾನ ಮಾಡುತ್ತಿರುವ ಯುವ ಮತದಾರರಿಗೆ ಗುರುತಿನ ಚೀಟಿ ವಿತರಿಸಲಾಯಿತು.

ಇತ್ತೀಚೆಗೆ ಮಕ್ಕಳು ಮಾದಕ ವಸ್ತುಗಳ ಚಟಕ್ಕೆ ಬಲಿಯಾಗುತ್ತಿದ್ದಾರೆ. ತಮ್ಮಲ್ಲಿರುವ ಹಣಕ್ಕೆ ತಕ್ಕಂತೆ ಡ್ರಗ್ಸ್ ಖರೀದಿ ಮಾಡುತ್ತಿದ್ದಾರೆ. ಈ ಹಿನ್ನೆಲೆ ಪೋಷಕರು ಮಕ್ಕಳ ಚಟುವಟಿಕೆಗಳ ಬಗ್ಗೆ ಗಮನ ಇಡಬೇಕು ಎಂದು ಕಿವಿಮಾತು ಹೇಳಿದರು.

ತಮ್ಮ ಮಕ್ಕಳು ಹೆಚ್ಚಿನ ಅಂಕ ಪಡೆಯುತ್ತಿರುವ ಬಗ್ಗೆ ಮಾತ್ರ ಪೋಷಕರು ಗಮನ ನೀಡುತ್ತಾರೆ. ಇದರ ಜೊತೆಗೆ ಮಕ್ಕಳ ಚಲನವಲನಗಳ ಬಗ್ಗೆ ಕೂಡ ನಿಗಾ ಇಡಬೇಕು ಎಂದರು. ಮೊಬೈಲ್ ಬಂದ ನಂತರ ಮಕ್ಕಳು ಟಿವಿ ಕೂಡ ನೋಡುತ್ತಿಲ್ಲ. ಫೇಸ್‌ಬುಕ್, ಯುಟ್ಯೂಬ್ ಸೇರಿದಂತೆ ಸಾಮಾಜಿಕ ಮಾಧ್ಯಮಗಳ ಗೀಳು ಹೆಚ್ಚಿಸಿಕೊಂಡಿದ್ದಾರೆ. ಈ ಹಿನ್ನೆಲೆ ಪೋಷಕರು ತಮ್ಮ ಮಕ್ಕಳನ್ನು ಈ ಪಿಡುಗಿನಿಂದ ಹೊರ ತರಬೇಕು ಎಂದು ದಿನೇಶ್ ಸಲಹೆ ನೀಡಿದರು.

ಈ ವೇಳೆ ಮತದಾನದ ಮಹತ್ವ ಸಾರುವ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ನಂತರ ಇದೇ ಮೊದಲ ಬಾರಿಗೆ ಮತದಾನ ಮಾಡುತ್ತಿರುವ ಯುವ ಮತದಾರರಿಗೆ ಗುರುತಿನ ಚೀಟಿ ನೀಡಲಾಯಿತು. ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸವಿತಾ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ಕಾರ್ಯದರ್ಶಿ ರಂಗೇಗೌಡ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಮತದಾನಕ್ಕೆ ಸರ್ಕಾರ ರಜೆ ಕೊಟ್ಟರೆ ಪ್ಯಾಕೇಜ್ ಟೂರ್‌ಗೆ ಹೋಗುತ್ತಾರೆ

ಮತದಾನ ಮಾಡಲು ಸರ್ಕಾರಿ ರಜೆ ನೀಡಲಾಗುತ್ತದೆ. ಈ ವೇಳೆ ಸರ್ಕಾರದ ಅಧಿಕಾರಿಗಳು ಹಾಗೂ ನೌಕರರು ಹಿಂದಿನ ಹಾಗೂ ಮುಂದಿನ ದಿನ ರಜಾ ಹಾಕಿ ಪ್ಯಾಕೇಜ್ ಟೂರ್ ಹೋಗುತ್ತಾರೆ ಎಂದು ಅಪರ ಜಿಲ್ಲಾಧಿಕಾರಿ ಶಿವರಾಜು ಆರೋಪಿಸಿದರು. ಸರ್ಕಾರಿ ನೌಕರರು ಮಾತ್ರವಲ್ಲದೆ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರು ಕೂಡ ಇದೇ ಹಾದಿಯಲ್ಲಿ ಸಾಗುತ್ತಿದ್ದಾರೆ. ತಮ್ಮ ಜವಾಬ್ದಾರಿ ನಿರ್ವಹಿಸದ ಇಂತಹವರು ವ್ಯವಸ್ಥೆ ಬಗ್ಗೆ ಆರೋಪ ಮಾಡುತ್ತಾರೆ. ಇದು ಬಿಟ್ಟು ಸರ್ಕಾರ ಯಾವ ಕಾರಣಕ್ಕೆ ರಜೆ ನೀಡಿರುತ್ತದೆಯೊ ಅದನ್ನು ಮೊದಲು ಮಾಡಬೇಕು ಎಂದು ಸಲಹೆ ನೀಡಿದರು.

ಬಹಳಷ್ಟು ಜನರು ವ್ಯವಸ್ಥೆಯನ್ನು ದೂಷಿಸಿ ತಾವು ಮತದಾನ ಮಾಡುವ ಜವಾಬ್ದಾರಿಯಿಂದ ವಿಮುಖರಾಗುತ್ತಾರೆ. ರಾಜಕೀಯ ವ್ಯವಸ್ಥೆ, ಸರ್ಕಾರ, ಶಾಸಕಾಂಗ ಸೇರಿದಂತೆ ಇತರೆ ವಿಚಾರಗಳ ಬಗ್ಗೆ ಟೀಕೆ ಮಾಡುತ್ತಾರೆ. ಆದರೆ ಮತದಾನದ ಮೂಲಕ ಅರ್ಹ ಅಭ್ಯರ್ಥಿ ಆಯ್ಕೆ ಮಾಡುವ ಗುರುತರ ಜವಾಬ್ದಾರಿ ನಿರ್ವಹಿಸುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇನ್ನು ಮುಂದಾದರೂ ಪ್ರತಿಯೊಬ್ಬರು ಪ್ರಜಾಪ್ರಭುತ್ವದ ಹಬ್ಬ ಮತದಾನವನ್ನು ಸಂಭ್ರಮಿಸಬೇಕು. ಕಡ್ಡಾಯ ಮತದಾನ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸಬೇಕು ಎಂದು ಡಾ.ಶಿವರಾಜ್ ಸಲಹೆ ನೀಡಿದರು.

ಕರ್ನಾಟಕ ಕೇಂದ್ರೀಯ ವಿವಿಯ ಸ್ನಾತಕೋತ್ತರ ಪದವಿಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜ.25(ಜಿಎ)-ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯವು ಪ್ರಸಕ್ತ ಸಾಲಿನ ಎಂ.ಎ, ಎಂ.ಕಾಂ, ಎಂಬಿಎ, ಎಂಎಸ್‌ಸಿ, ಎಂಸಿಎ ಇತ್ಯಾದಿ ಸ್ನಾತಕೋತ್ತರ ಪದವಿಗಳಿಗೆ ಅರ್ಜಿ ಆಹ್ವಾನಿಸಿದೆ ಎಂದು ವಿವಿಯ ಅಧ್ಯಯನಾಂಗದ ನಿರ್ದೇಶಕ ಪ್ರೊ.ಬಸವರಾಜ ಪಿ.ಡೋಣೂರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಮತ್ತು ಅಂತಿಮ ಸೆಮಿಸ್ಟರ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಫೆಬ್ರವರಿ 1ರಂದು ರಾತ್ರಿ 11.50ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿಯಲ್ಲಿ ಲೋಪದೋಷಗಳು ಕಂಡು ಬಂದರೆ ತಿದ್ದುಪಡಿ ಮಾಡುವುದಕ್ಕೆ ಫೆಬ್ರವರಿ 3ರಿಂದ 5ರವರೆಗೆ ಕಾಲಾವಕಾಶವನ್ನೂ ಸಹ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಸಂಪೂರ್ಣ ಪ್ರವೇಶ ಪ್ರಕ್ರಿಯೆ ಆನ್‌ಲೈನ್ ಮೂಲಕ ನಡೆಯಲಿರುವ ಕಾರಣ ವಿದ್ಯಾರ್ಥಿಗಳು ಅರ್ಜಿಯಲ್ಲಿ ತಮ್ಮ ಇಮೇಲ್ ಮತ್ತು ದೂರವಾಣಿ ಸಂಖ್ಯೆಯನ್ನು ತಪ್ಪದೇ ನಮೂದಿಸಬೇಕು. ಪ್ರವೇಶ ಪರೀಕ್ಷೆಯನ್ನು ಭಾರತ ಮತ್ತು 27 ಹೊರದೇಶಗಳು ಸೇರಿದಂತೆ 312 ನಗರಗಳಲ್ಲಿ ನಡೆಸಲಾಗುತ್ತದೆ. ಕರ್ನಾಟಕದಲ್ಲಿ ಕಲ್ಬುರ್ಗಿ, ಬಳ್ಳಾರಿ, ಬೆಳಗಾವಿ, ಬೆಂಗಳೂರು, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಾವಣಗೆರೆ, ಧಾರವಾಡ, ಹಾಸನ, ಹುಬ್ಬಳ್ಳಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು ಮತ್ತು ಉಡುಪಿಯಲ್ಲಿ ನಡೆಯಲಿದೆ ಎಂದರು. ದೇಶ ವಿದೇಶಗಳ ವಿವಿಧ ಭಾಗಗಳಿಂದ ಬರುವ ವಿದ್ಯಾರ್ಥಿಗಳು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆಯುತ್ತಿದ್ದು, ಸುಮಾರು 2000 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. 200 ಬೋಧಕ ವರ್ಗವಿದ್ದು, ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ಎಲ್ಲಾ ರೀತಿಯ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಫೋನ್ ಮೂಲಕ 2ನೇ ಪತ್ನಿಗೆ ತ್ರಿವಳಿ ತಲಾಖ್ ಹೇಳಿದ ಪತಿ ಬಂಧನ

ಕೊಲ್ಲಂ: ದೂರವಾಣಿ ಮೂಲಕವೇ ಪತ್ನಿಗೆ ತ್ರಿವಳಿ ತಲಾಖ್ ನೀಡಿದ್ದಕ್ಕಾಗಿ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಕೊಲ್ಲಂ ಜಿಲ್ಲೆಯ ಮೈನಾಗಪಲ್ಲಿ ಮೂಲದ ಅಬ್ದುಲ್ ಬಸಿತ್ ಎಂಬಾತನನ್ನು ಎರಡು ದಿನಗಳ ಹಿಂದೆ ಬಂಧಿಸಲಾಗಿದ್ದು, 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಬಸಿತ್ ವಿರುದ್ಧ ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ರಕ್ಷಣೆ) ಕಾಯ್ದೆಯ ಸಂಬಂಧಿತ ವಿಭಾಗಗಳು ಮತ್ತು ಭಾರತೀಯ ನ್ಯಾಯಸಂಹಿತೆಯ ವಿವಿಧ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಕೊಲ್ಲಂ ಜಿಲ್ಲೆಯ ಚವಾರ ನಿವಾಸಿಯಾದ ಆತನ 20 ವರ್ಷದ ಪತ್ನಿ ನೀಡಿದ ದೂರಿನ ಮೇರೆಗೆ ಆತನನ್ನು ಬಂಧಿಸಲಾಗಿದೆ. ದೂರಿನ ಪ್ರಕಾರ ಬಸಿತ್ ತನ್ನ ಮೊದಲ ಮದುವೆಯನ್ನು ಬಹಿರಂಗಪಡಿಸದೆ 2ನೇ ಮದುವೆಯಾಗಿದ್ದಾನೆ. ಆತನ ಮೊದಲ ಮದುವೆ ಬಗ್ಗೆ ತಿಳಿದು ಅದನ್ನು ಪ್ರಶ್ನಿಸಿದ್ದಕ್ಕೆ ಕೋಪಗೊಂಡ ಆತ ಮಾನಸಿಕ, ದೈಹಿಕ ಹಿಂಸೆ ನೀಡಿದ್ದಾನೆ. ಅಲ್ಲದೆ, ಬೇರೊಬ್ಬ ಜಗಳದ ನಂತರ ಮಹಿಳೆ ತನ್ನ ಪೋಷಕರ ಮನೆಗೆ ಮರಳಿದ್ದಾರೆ. ಜ.19ರಂದು ಬಸಿತ್ ಆಕೆಗೆ ಕರೆ ಮಾಡಿ ತ್ರಿವಳಿ ತಲಾಖ್ ನೀಡಿದ್ದು, ತಮ್ಮ ಸಂಬಂಧ ಮುಗಿದಿದೆ ಎಂದು ಘೋಷಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಇಂದು ಹಾರ್ಟ್ ಸಂಸ್ಥೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಜ.25-ಮೈಸೂರಿನ ಹಾರ್ಟ್ ಸಂಸ್ಥೆಯು ರೋಟರಿ ಕ್ಲಬ್ ಆಫ್ ಮೈಸೂರ್ ವೆಸ್ಟ್, ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ನಾರಾಯಣ ಹೆಲ್ತ್ ಹಾಗೂ ಎಎಸ್‌ಜಿ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಜ.26ರ ಬೆಳಗ್ಗೆ 10:30 ರಿಂದ 2 ಗಂಟೆವರೆಗೆ ರಾಮಕೃಷ್ಣ ಶಾಲೆಯ ಆವರಣದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ ಮೊ.ನಂ.: 9353630903, 9945360830 ಅನ್ನು ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಚಾಲಕನ ನಿಯಂತ್ರಣ ಕಳೆದುಕೊಂಡ ಲಾರಿ; ದಿವಾನ್ಸ್ ರಸ್ತೆಯ ವಿಭಜಕವನ್ನೇರಿ ಕೆಲಕಾಲ ಆತಂಕ

ಚಾಲಕನ ಮೂರ್ಛೆ ರೋಗದಿಂದ ಭಾರಿ ಅವಾಂತರ!

ಮೈಸೂರು, ಜ.25(ಆರ್‌ಕೆ)-ಚಾಲಕನ ನಿಯಂತ್ರಣ ಕಳೆದುಕೊಂಡು, ಲಾರಿಯೊಂದು ಡಿವೈಡರ್ ಮೇಲೆ ಏರಿ ನಿಂತ ಪರಿಣಾಮ ಸುಮಾರು ಅರ್ಧ ಗಂಟೆ ಈ ಮಾರ್ಗ ಸಂಚಾರಕ್ಕೆ ಅಡಚಣೆಯಾಯಿತು. ಈ ಘಟನೆ ಮೈಸೂರಿನ ಶ್ರೀ ಅಮೃತೇಶ್ವರ ದೇವಸ್ಥಾನದ ಎದುರು ದಿವಾನ್ಸ್ ರಸ್ತೆಯಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.

ಇಂದು ಬೆಳಗ್ಗೆ ಗಾಯತ್ರಿ ಭವನ ಕಡೆಯಿಂದ ಡಿ.ದೇವರಾಜ ಅರಸು ರಸ್ತೆ ಕಡೆಗೆ ಹೋಗುತ್ತಿದ್ದ ಲಾರಿ ಚಾಲಕನ ನಿಯಂತ್ರಣ ಕಳೆದುಕೊಂಡು ಬಲಬದಿಯ ರಸ್ತೆ ವಿಭಜಕವನ್ನೇರಿ, ಅಲ್ಲಿದ್ದ ಬೀದಿದೀಪದ ಕಂಬಕ್ಕೆ ಡಿಕ್ಕಿ ಹೊಡೆದು ನಿಂತಿತು. ಈ ವೇಳೆ ಬಲ ಪಥದಲ್ಲಿ ಎದುರಿನಿಂದ ಬರುತ್ತಿದ್ದ ವಾಹನ ಸವಾರರು ಕಂಗಾಲಾದರು. ಒಂದು ವೇಳೆ ಲಾರಿ ರಸ್ತೆ ವಿಭಜಕ ಹಾರಿ ಬಲಬದಿ ಪಥಕ್ಕೆ ನುಗ್ಗಿದ್ದರೆ, ಎದುರಿನಿಂದ ಬರುತ್ತಿದ್ದ ವಾಹನಗಳಿಗೆ ಡಿಕ್ಕಿ ಹೊಡೆದು ಅಪಾಯ ಸಂಭವಿಸುತ್ತಿತ್ತು. ಲಾರಿ ಬೀದಿದೀಪದ ಕಂಬಕ್ಕೆ ಡಿಕ್ಕಿ ಹೊಡೆದು ರಸ್ತೆ ವಿಭಜಕದ ಮೇಲೆಯೇ ನಿಂತಿದ್ದರಿಂದ ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಲಿಲ್ಲ. ವಾಹನ ಚಾಲನೆ ಮಾಡುತ್ತಿದ್ದ ಪಿರಿಯಾಪಟ್ಟಣದ ರಾಘವೇಂದ್ರ ಮೂರ್ಛೆ ಹೋದ ಕಾರಣ ಲಾರಿ ಅಡ್ಡಾದಿಡ್ಡಿ ಚಲಿಸಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ದೇವರಾಜ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಮಮತಾ ಹಾಗೂ ಸಿಬ್ಬಂದಿ, ರಸ್ತೆ ವಿಭಜಕದ ಮೇಲೆ ನಿಂತಿದ್ದ ಲಾರಿಯನ್ನು ತೆರವುಗೊಳಿಸುವ ಕ್ರಮ ಕೈಗೊಂಡ ನಂತರ ವಾಹನ ಸಂಚಾರ ದಿವಾನ್ಸ್ ರಸ್ತೆಯಲ್ಲಿ ಸುಗಮಗೊಂಡಿತು. ಈ ಸಂದರ್ಭ ಸ್ಥಳಕ್ಕೆ ಧಾವಿಸಿದ ಮಾಜಿ ಮೇಯರ್ ರವಿಕುಮಾರ್, ದಿವಾನ್ಸ್ ರಸ್ತೆಯಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಲ್ಲದೆ, ಮುರಿದು ಬಿದ್ದ ಪಾರಂಪರಿಕ ಶೈಲಿಯ ವಿದ್ಯುತ್ ಕಂಬದ ದುರಸ್ತಿ ಸಾಧ್ಯವಾಗದು. ಹಾಗಾಗಿ ಲಾರಿ ಮಾಲೀಕರಿಂದ ಹೊಸ ಕಂಬವನ್ನು ಅಳವಡಿಸಬೇಕೆಂದು ಒತ್ತಾಯಿಸಿದರು. ಸ್ಥಳಕ್ಕೆ ಧಾವಿಸಿದ ಕಾಂಗ್ರೆಸ್ ಮುಖಂಡರಾದ ರಾಣಿ ಸಹ ದಿವಾನ್ಸ್ ರಸ್ತೆಯಲ್ಲಿನ ವಾಹನ ಸಂಚಾರ ಸುಗಮಗೊಳಿಸಲು ಪೊಲೀಸರು ಕ್ರಮವಹಿಸಬೇಕೆಂದು ಆಗ್ರಹಿಸಿದರು. ಸ್ಥಳದಿಂದ ಲಾರಿಯನ್ನು ತೆರವುಗೊಳಿಸಿದ ಪೊಲೀಸರು ವಾಹನ ಮಾಲೀಕರ ದೂರವಾಣಿ ಮೂಲಕ ಸಂಪರ್ಕಿಸಿ ಸಾರ್ವಜನಿಕ ಸ್ವತ್ತು ಜಖಂಗೊಳಿಸಿರುವುದರಿಂದ ಅದನ್ನು ಸರಿಪಡಿಸಿಕೊಡಬೇಕೆಂದು ಸಲಹೆ ನೀಡಿದರು. ಅಲ್ಲಿಯವರೆಗೂ ಲಾರಿ ದೇವರಾಜ ಸಂಚಾರ ಪೊಲೀಸರ ವಶದಲ್ಲಿರುತ್ತದೆ. ವಿದ್ಯುತ್ ದೀಪದ ಕಂಬ ಅಳವಡಿಸಿದ ನಂತರ ವಾಹನವನ್ನು ತೆಗೆದುಕೊಂಡು ಹೋಗಬಹುದು ಎಂದು ಮಾಲೀಕರಿಗೆ ಸೂಚಿಸಿದ್ದಾರೆ.



ಮೈಸೂರಿನ ಶ್ರೀ ಅಮೃತೇಶ್ವರ ದೇವಸ್ಥಾನದ ಎದುರು ದಿವಾನ್ಸ್ ರಸ್ತೆಯಲ್ಲಿ ಶನಿವಾರ ಚಾಲಕನ ನಿಯಂತ್ರಣ ಕಳೆದುಕೊಂಡ ಲಾರಿಯೊಂದು ಡಿವೈಡರ್ ಮೇಲೆ ಏರಿ ನಿಂತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಇಂದು ಶ್ರೀ ಛಾಯಾದೇವಿ ಅಮ್ಮನವರ ವಾರ್ಷಿಕೋತ್ಸವ, ಹಾಲರವಿ ಮಹೋತ್ಸವ

ಮೈಸೂರು, ಜ. 25-ನಂಜನಗೂಡು ತಾಲೂಕು ತಾಯೂರು ಗ್ರಾಮದ ಶ್ರೀ ಛಾಯಾದೇವಿ ಅಮ್ಮನವರ ದೇವಸ್ಥಾನದ 49ನೇ ವಾರ್ಷಿಕೋತ್ಸವ ಮತ್ತು ಹಾಲರವಿ ಮಹೋತ್ಸವ ನಾಳೆ (ಜ.26) ನಡೆಯಲಿದೆ. ಇದರ ಅಂಗವಾಗಿ ಬೆಳಗ್ಗೆ 5 ಗಂಟೆಗೆ ಕಪಿಲಾ ನದಿಯಿಂದ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರ ಸ್ವಾಮಿ ಅರ್ಚಕ ನಾಗೇಂದ್ರ ಅವರಿಂದ ವೀರಗಾಸೆ ನರ್ತನ, ಶ್ರೀ ಮಂಟೇಸ್ವಾಮಿ, ಶ್ರೀ ಸಿದ್ದಪ್ಪಾಜಿ ಕಂಡಾಯ ಹಾಗೂ ಬಸಪ್ಪನವರ ಮೆರವಣಿಗೆಯೊಂದಿಗೆ ಶ್ರೀ ಛಾಯಾದೇವಿ ಅಮ್ಮನವರ ಹಾಲರವಿ ಮೂಲಕ ದೇವಾಲಯ ಪ್ರವೇಶಿಸುವುದು.

ನಂತರ ಅಮ್ಮನವರಿಗೆ ಮತ್ತು ಶ್ರೀ ಶನೇಶ್ವರಸ್ವಾಮಿಗೆ ಪಂಚಾಮೃತ ಅಭಿಷೇಕ, ಮಹಾಭಿಷೇಕ, ಅಲಂಕಾರ, ಅಷ್ಟಾವಧಾನ ಸೇವೆ, ಮಹಾನಿವೇದನೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 6.30ಕ್ಕೆ ಬದನವಾಳು ಶ್ರೀ ಶಿವಕುಮಾರ ಶಾಸ್ತ್ರಿಯವರ ವೃಂದದವರಿಂದ ಶನಿ ಪ್ರಭಾವ ಅಥವಾ ರಾಜಾವಿಕ್ರಮ ಹರಿಕಥೆ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದೇಶ - ವಿದೇಶ

ಗಾಜಾ ಯುದ್ಧ ಅಂತ್ಯ: ಹಮಾಸ್‌ನಿಂದ ನಾಲ್ವರು ಇಸ್ರೇಲಿ ಮಹಿಳಾ ಸೈನಿಕರ ಬಿಡುಗಡೆ



ಟೆಲ್ ಅವೀವ್: ಪಶ್ಚಿಮ ಏಷ್ಯಾದಲ್ಲಿ ಹಮಾಸ್ ಬಂಡುಕೋರ ಪ್ರಾಬಲ್ಯದ ರಾಷ್ಟ್ರಗಳು ಹಾಗೂ ಇಸ್ರೇಲ್ ನಡುವೆ ಕಳೆದ 15 ತಿಂಗಳಿನಿಂದ ನಡೆಯುತ್ತಿದ್ದ ಗಾಜಾ ಯುದ್ಧ ಅಂತ್ಯಗೊಳಿಸುವ ಗುರಿಯೊಂದಿಗೆ ಹಮಾಸ್ ಶನಿವಾರ ಕದನ ವಿರಾಮ ಒಪ್ಪಂದದಡಿ ನಾಲ್ವರು ಇಸ್ರೇಲಿ ಮಹಿಳಾ ಸೈನಿಕರನ್ನು ಬಿಡುಗಡೆ ಮಾಡಿದೆ. ನಾಲ್ವರು ಸೈನಿಕರಾದ ಕರೀನಾ ಅರಿವ್, ಡೇನಿಯೆಲಾ ಗಿಲ್ಬೋವಾ, ನಾಮಾ ಲೆವಿ ಮತ್ತು ಲಿರಿ ಅಲ್ಬಾಗ್ ಅವರನ್ನು ಗಾಜಾದಲ್ಲಿ ರೆಡ್‌ಕ್ರಾಸ್‌ಗೆ ಹಸ್ತಾಂತರಿಸಲಾಗಿದೆ ಎಂದು ಎಎಫ್‌ಪಿ ವರದಿ ಮಾಡಿದೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಇಸ್ರೇಲ್ ರಕ್ಷಣಾ ಪಡೆಗಳು, ನಾಲ್ವರು ಇಸ್ರೇಲಿ ಒತ್ತೆಯಾಳುಗಳನ್ನು ವರ್ಗಾಯಿಸಲಾಗಿದೆ. ಗಾಜಾ ಪಟ್ಟಿಯಲ್ಲಿರುವ IDF ಮತ್ತು ISA ಪಡೆಗಳ ಕಡೆಗೆ ಅವರು ಹೋಗುತ್ತಿದ್ದಾರೆ ಎಂದು ರೆಡ್‌ಕ್ರಾಸ್ ಮಾಹಿತಿ ನೀಡಿರುವುದಾಗಿ ತಿಳಿಸಿದೆ. ಅ.7, 2023ರಿಂದ ಒತ್ತೆಯಾಳಾಗಿದ್ದ ನಾಲ್ವರು ಇಸ್ರೇಲಿ ಮಹಿಳಾ ಸೈನಿಕರನ್ನು ಬಿಡುಗಡೆ ಮಾಡುವುದಾಗಿ ಹಮಾಸ್ ಶುಕ್ರವಾರ ಘೋಷಿಸಿತ್ತು. ಇಸ್ರೇಲ್ ಮತ್ತು ಗಾಜಾ ನಡುವಿನ ಕದನ ವಿರಾಮ ಒಪ್ಪಂದದ ಅಡಿಯಲ್ಲಿ ಇದು ಎರಡನೇ ವಿನಿಮಯವಾಗಿದೆ.

ಗಣರಾಜ್ಯೋತ್ಸವಕ್ಕೂ ಮುನ್ನ ಅಸ್ಸಾಂನಲ್ಲಿ ಭಾರಿ ಪ್ರಮಾಣದ ಸ್ಫೋಟಕ ವಶ



ಸೋನಿತ್‌ಪುರ: 76ನೇ ಗಣರಾಜ್ಯೋತ್ಸವ ಆಚರಣೆಗೆ ದೇಶಾದ್ಯಂತ ಅಂತಿಮ ಹಂತದ ಸಿದ್ಧತೆಗಳು ನಡೆಯುತ್ತಿರುವಂತೆಯೇ ಅಸ್ಸಾಂನಲ್ಲಿ ಭಾರಿ ಪ್ರಮಾಣದ ಸ್ಫೋಟಕ ಶನಿವಾರ ಪತ್ತೆಯಾಗಿದೆ. ಸೋನಿತ್‌ಪುರ ಜಿಲ್ಲೆಯಲ್ಲಿ ಕಾಡಿನಲ್ಲಿ ಅಡಗಿಸಿಟ್ಟಿದ್ದ ಸ್ಫೋಟಕಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಶೋಧ ಕಾರ್ಯಾಚರಣೆಯ ಸಮಯದಲ್ಲಿ ಐದು ಗ್ರೆನೇಡ್‌ಗಳು, ಮೂರು ಡಿಟೋನೇಟರ್‌ಗಳು ಸೇರಿದಂತೆ ಪಾಲಿಥಿನ್ ಬ್ಯಾಗ್‌ನಲ್ಲಿ ಸುತ್ತಿಟ್ಟಿದ್ದ ಸ್ಫೋಟಕವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಸೋನಿತ್‌ಪುರ ಪೊಲೀಸರು, ಇಂದು ಧೇಕಿಯಾಜುಲಿ ಪೊಲೀಸ್ ಠಾಣೆ ವ್ಯಾಪ್ತಿಯ ಬಟಾಶಿಪುರ್, ಖಪ್ರಾ ಬಳಿಯ ಅರಣ್ಯದ ನಿರ್ಜನ ಪ್ರದೇಶದಲ್ಲಿ ಅಕ್ರಮ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಹೂತಿಟ್ಟಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಆಧಾರದ ಮೇಲೆ ಶೋಧ ಕಾರ್ಯಾಚರಣೆ ನಡೆಸಲಾಯಿತು. ದೊರೆತ 1 ಗ್ರೇನೆಡ್ ಹಾನಿಯಾಗಿದ್ದು, ಸ್ಫೋಟಕ ನಿಷ್ಕ್ರಿಯಗೊಳಿಸಲು ಬಾಂಬ್ ನಿಷ್ಕ್ರಿಯ ದಳ ಸಂಪರ್ಕಿಸಲಾಗಿದೆ ಎಂದು ಹೇಳಿದ್ದಾರೆ.

ಭ್ರಷ್ಟಾಚಾರ ಆರೋಪದಡಿ ಶ್ರೀಲಂಕಾ ಮಾಜಿ ಅಧ್ಯಕ್ಷನ ಪುತ್ರ ಯೋಶಿತಾ ರಾಜಪಕ್ಸೆ ಬಂಧನ



ಕೊಲಂಬೊ: ಶ್ರೀಲಂಕಾದ ಮಾಜಿ ಅಧ್ಯಕ್ಷ ಮಹಿಂದಾ ರಾಜಪಕ್ಸೆ ಅವರ ಪುತ್ರ ಯೋಶಿತಾ ರಾಜಪಕ್ಸೆ ಅವರನ್ನು ಆಸ್ತಿ ಖರೀದಿ ಪ್ರಕರಣದಲ್ಲಿ ಭ್ರಷ್ಟಾಚಾರದ ಆರೋಪದ ಮೇಲೆ ಶನಿವಾರ ಪೊಲೀಸರು ಬಂಧಿಸಿದ್ದಾರೆ.

2015ರ ಮೊದಲು ತಮ್ಮ ತಂದೆಯ ಅಧ್ಯಕ್ಷತೆಯ ಅವಧಿಯಲ್ಲಿ ಆಸ್ತಿ ಖರೀದಿಯಲ್ಲಿ ನಡೆದ ದುಷ್ಕೃತ್ಯದ ತನಿಖೆಗೆ ಸಂಬಂಧಿಸಿದಂತೆ ಮಾಜಿ ನೌಕಾಪಡೆ ಅಧಿಕಾರಿ ಯೋಶಿತಾ ಅವರನ್ನು ಅವರ ಮನೆಯಾದ ಬೆಲಿಯಾಟ್ಟಾದಿಂದ ಬಂಧಿಸಲಾಗಿದೆ. ಮಹಿಂದಾ ರಾಜಪಕ್ಸೆ ಅವರ ಮೂವರು ಪುತ್ರರಲ್ಲಿ ಯೋಶಿತಾ ಎರಡನೇಯವರು. ಕಳೆದ ವರ್ಷ ನವೆಂಬರ್‌ನಲ್ಲಿ ಅಧ್ಯಕ್ಷ ಅನುರ ಕುಮಾರ ದಿಸಾನಾಯಕ ನೇತೃತ್ವದ ಹೊಸ ಸರ್ಕಾರ ರಚನೆಯಾದಾಗಿನಿಂದ ಮಹಿಂದಾ ರಾಜಪಕ್ಸೆ ಅವರ ಹಿರಿಯ ಮಗ ಮತ್ತು ಶಾಸಕ ನಮಲ್ ರಾಜಪಕ್ಸೆ ಅವರನ್ನು, ಮಹಿಂದಾ ರಾಜಪಕ್ಸೆ ಅವರ ಉದ್ಯೋಗಿಯೊಂದಿಗೆ ಮತ್ತೊಂದು ಆಸ್ತಿ ಪ್ರಕರಣದ ಕುರಿತು ಪೊಲೀಸರು ವಿಚಾರಣೆ ನಡೆಸಿದ್ದರು. 2005 ಮತ್ತು 2015ರ ನಡುವೆ ಮಹಿಂದಾ ರಾಜಪಕ್ಸೆ ಅಧ್ಯಕ್ಷರಾಗಿದ್ದಾಗ ತಪ್ಪು ಮಾಡಿದ ಆರೋಪ ಹೊತ್ತಿರುವ ಪ್ರತಿಯೊಬ್ಬರನ್ನು ಬಂಧಿಸುವುದಾಗಿ ಚುನಾವಣೆಗೆ ಮುನ್ನ ಹೊಸ ಸರ್ಕಾರ ಪ್ರತಿಜ್ಞೆ ಮಾಡಿತ್ತು.

ಕುಡಿತದ ಚಟಕ್ಕೆ ಬೇಸತ್ತು ಗಂಡಂದಿರ ತೊರೆದ ಗೃಹಿಣಿಯರು ವಿವಾಹ!



ಗೋರಖ್‌ಪುರ: ಗಂಡಂದಿರ ಕುಡಿತದ ಚಟಕ್ಕೆ ಬೇಸತ್ತ ಇಬ್ಬರು ಮಹಿಳೆಯರು ಮನೆ ತೊರೆದು ಪರಸ್ಪರ ಮದುವೆಯಾಗಿರುವ ವಿಚಿತ್ರ ಘಟನೆಯೊಂದು ಉತ್ತರ ಪ್ರದೇಶದ ಗೋರಖ್‌ಪುರದಲ್ಲಿ ನಡೆದಿದೆ. ಕವಿತಾ ಮತ್ತು ಗುಂಜಾ ಅಲಿಯಾಸ್ ಬಬ್ಲು ಡಿಯೋರಿಯಾದ ಚೋಟಿ ಕಾಶಿ ಎಂದೂ ಕರೆಯಲ್ಪಡುವ ಶಿವ ದೇವಾಲಯದಲ್ಲಿ ಸಂಪ್ರದಾಯದಂತೆ ವಿವಾಹವಾಗಿದ್ದಾರೆ.

ಇಬ್ಬರೂ ಮೊದಲು ಇನ್‌ಸ್ಟಾಗ್ರಾಮ್ ಮೂಲಕ ಪರಿಚಯವಾಗಿದ್ದು, ಇಬ್ಬರ ಗಂಡಂದಿರು ಕೂಡ ಮದ್ಯದ ಚಟಕ್ಕೆ ದಾಸರಾಗಿದ್ದಲ್ಲದೇ, ಕೌಟುಂಬಿಕ ದೌರ್ಜನ್ಯ ಎಸಗುತ್ತಿದ್ದರು. ಇಬ್ಬರದ್ದು ಬಹುತೇಕ ಒಂದೇ ರೀತಿಯ ಪರಿಸ್ಥಿತಿ ಇದ್ದ ಹಿನ್ನೆಲೆ ಅವರು ಆಪ್ತರಾಗಿದ್ದರು. ದೇಗುಲದಲ್ಲಿ ಮದುವೆ ಆಗುವಾಗ ಗುಂಜಾ ವರನ ಪಾತ್ರ ನಿರ್ವಹಿಸಿದ್ದು, ಕವಿತಾ ಹಣೆಗೆ ಸಿಂಧೂರ ಹಚ್ಚಿದ್ದಾರೆ. ಬಳಿಕ ಪರಸ್ಪರ ಹಾರ ಬದಲಾಯಿಸಿಕೊಂಡು, ಸಪ್ತಪದಿ ತುಳಿದಿದ್ದಾರೆ. ಇವರಿಬ್ಬರೂ ಮನೆಯೊಂದನ್ನು ಬಾಡಿಗೆಗೆ ಪಡೆದು, ವಿವಾಹಿತ ಜೋಡಿಯಂತೆ ಒಟ್ಟಿಗೆ ಬಾಳುವ ಗುರಿಯನ್ನು ಹೊಂದಿದ್ದಾರೆ. ಅರ್ಚಕ ಉಮಾಶಂಕರ್ ಪಾಂಡೆ ಮಾತನಾಡಿ, ಸದ್ದಿಲ್ಲದೆ, ಧಾರ್ಮಿಕ ವಿಧಾನಗಳನ್ನು ಅನುಸರಿಸಿ, ವಿವಾಹವಾಗಿ ಹೊರಹೋದರು ಎಂದು ಹೇಳಿದ್ದಾರೆ.

ಮುಂಬೈ ದಾಳಿ ಸಂಚುಕೋರ ರಾಣಾ ಹಸ್ತಾಂತರಕ್ಕೆ ಅಮೆರಿಕ ಸುಪ್ರೀಂಕೋರ್ಟ್ ಸಮ್ಮತಿ



ವಾಷಿಂಗ್ಟನ್: 2008ರ ಮುಂಬೈ ದಾಳಿಯ ಸಂಚುಕೋರ ತಹಾವುರ್ ರಾಣಾ ಹಸ್ತಾಂತರಕ್ಕೆ ಅಮೆರಿಕದ ಸುಪ್ರೀಂಕೋರ್ಟ್ ಕೊನೆಗೂ ಸಮ್ಮತಿಸಿದ್ದು, ಭಾರತಕ್ಕೆ ಮಹತ್ವದ ರಾಜತಾಂತ್ರಿಕ ಜಯ ಸಿಕ್ಕಿದೆ. ಹೀಗಾಗಿ ಪಾಕಿಸ್ತಾನ ಮೂಲದ ಕೆನಡಾ ಉದ್ಯಮಿ ರಾಣಾನನ್ನು ಭಾರತಕ್ಕೆ ಕರೆತರುವ ಪ್ರಕ್ರಿಯೆ ಶೀಘ್ರದಲ್ಲೇ ಆರಂಭವಾಗಲಿದೆ. ಡೊನಾಲ್ಡ್ ಟ್ರಂಪ್ ಅಮೆರಿಕದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮರು ದಿನವೇ ಅಮೆರಿಕ ಸುಪ್ರೀಂಕೋರ್ಟ್‌ನಿಂದ ಈ ತೀರ್ಪು ಹೊರಬಿದ್ದಿದೆ. ರಾಣಾನನ್ನು ಭಾರತಕ್ಕೆ ಹಸ್ತಾಂತರ ಮಾಡುವುದರ ವಿರುದ್ಧ ಕಳೆದ ನವೆಂಬರ್‌ನಲ್ಲಿ ಅಮೆರಿಕ ಸುಪ್ರೀಂಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಲಾಗಿತ್ತು. ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಒಂದು ದಿನದ ನಂತರ ಅಮೆರಿಕ ಸುಪ್ರೀಂಕೋರ್ಟ್ ರಿಟ್ ಅರ್ಜಿಯನ್ನು ತಿರಸ್ಕರಿಸಿದೆ. ಮುಂಬೈ ದಾಳಿ ಅಪರಾಧಿಯನ್ನು ಭಾರತಕ್ಕೆ ಗಡಿಪಾರು ಮಾಡುವ ಮನವಿಗೆ ಅಮೆರಿಕ ಸರ್ಕಾರ ಬೆಂಬಲ ಸೂಚಿಸಿತ್ತು. ಭಾರತಕ್ಕೆ ಗಡಿಪಾರಾಗುವುದನ್ನು ತಪ್ಪಿಸಲು ತಹಾವುರ್ ರಾಣಾಗೆ ಇದು ಕೊನೆಯ ಅವಕಾಶವಾಗಿತ್ತು. ಈಗ ಸುಪ್ರೀಂ ಕೋರ್ಟ್ ಅರ್ಜಿ ತಿರಸ್ಕರಿಸಿರುವುದರಿಂದ ಆತನ ಮುಂದಿರುವ ಆಯ್ಕೆಗಳೆಲ್ಲ ಬಂದ್ ಆಗಿದ್ದು, ಭಾರತಕ್ಕೆ ಗಡಿಪಾರಾಗಲೇಬೇಕಿದೆ.

ಕೊಡಗಿನ ಅಳಿಯನಿಗೆ ರಾಜ್ಯ ಗಣರಾಜ್ಯೋತ್ಸವ ಪರೇಡ್ ನೇತೃತ್ವ

ಎರಡನೇ ಬಾರಿಗೆ ಸತತವಾಗಿ ಆಯ್ಕೆಯಾಗಿ ದಾಖಲೆ ನಿರ್ಮಿಸಿದ ಭಾರತೀಯ ಸೇನೆಯ ಅಧಿಕಾರಿ


ಕಳೆದ ಬಾರಿ ಕರ್ನಾಟಕ ರಾಜ್ಯ ಗಣರಾಜ್ಯೋತ್ಸವ ಪರೇಡ್‌ನ ಪಥಸಂಚಲನೆಯ ನಾಯಕತ್ವಕ್ಕೆ ಆಯ್ಕೆಯಾಗಿದ್ದ ಮೇಜರ್ ಸತೀಶ್.

ಕುಶಾಲನಗರ, ಜ.25– ಭಾರತೀಯ ಸೇನೆಯ ಕಮೀಷನ್ಡ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಕೊಡಗಿನ ಅಳಿಯ ಮೇಜರ್ ಸತೀಶ್ ಕರ್ನಾಟಕ ರಾಜ್ಯ ಗಣರಾಜ್ಯೋತ್ಸವ ಪರೇಡ್‌ನ ಪಥಸಂಚಲನೆಯ ನಾಯಕತ್ವ ವಹಿಸಲು ಎರಡನೇ ಬಾರಿಗೆ ಆಯ್ಕೆಯಾಗಿದ್ದಾರೆ.

ಇದೇ ಮೊದಲ ಬಾರಿ ಕನ್ನಡಿಗರೊಬ್ಬರು ಸತತ ಎರಡನೇ ಬಾರಿಗೂ ಗಣರಾಜ್ಯೋತ್ಸವದ ಪಥಸಂಚಲನೆಯ ನೇತೃತ್ವ ವಹಿಸುವ ಮೂಲಕ ಇತಿಹಾಸ ಬರೆದಿದ್ದಾರೆ. ಇದರಿಂದ ಅವರ ಶ್ರೇಷ್ಠ ನಾಯಕತ್ವ ಮತ್ತೊಮ್ಮೆ ಪ್ರಕಟವಾಗಿದೆ.

2025ರ ಜನವರಿ 26ರಂದು, ಬೆಂಗಳೂರಿನ ಮಾಣಿಕ್ ಶಾ ಪರೇಡ್ ಮೈದಾನದಲ್ಲಿ ಕರ್ನಾಟಕ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನಡೆಯುವ ಪರೇಡ್ ನೇತೃತ್ವ ವಹಿಸಲಿದ್ದಾರೆ. ಭಾರತೀಯ ಸೇನೆ ಮತ್ತು ಕರ್ನಾಟಕ ಸರ್ಕಾರದ ನೇತೃತ್ವದಲ್ಲಿ ನಡೆಯುವ ಈ ವಿಶೇಷ ಕಾರ್ಯಕ್ರಮದಲ್ಲಿ, ಮೇಜರ್ ಸತೀಶ್ ಅವರು ಸಂಪೂರ್ಣ ಪರೇಡ್ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ. ಇದರಲ್ಲಿ ಡ್ರಿಲ್‌ಗಳ ಶುದ್ಧತೆ, ಸಮನ್ವಯತೆ ಮತ್ತು ಕಾರ್ಯಕ್ರಮದ ಸುಗಮತೆ ಖಚಿತಪಡಿಸಿಕೊಳ್ಳುವುದು ಅವರ ಕರ್ತವ್ಯವಾಗಿದೆ.

ಈ ಬಾರಿಯ ಪರೇಡ್‌ನಲ್ಲಿ ಭಾರತೀಯ ಸೇನೆ, ವಾಯುಪಡೆ, ಅರೆಸೇನಾ ಪಡೆಗಳು, ಕರ್ನಾಟಕ ಮತ್ತು ಕೇರಳ ಪೊಲೀಸ್, ಎನ್‌ಸಿಸಿ ಮತ್ತು ವಿವಿಧ ಶೈಕ್ಷಣಿಕ ಸಂಸ್ಥೆಗಳ ಘಟಕಗಳು ಭಾಗವಹಿಸಲಿವೆ. ಈ ಸಾಧನೆಯ ಮೂಲಕ, ಮೇಜರ್ ಸತೀಶ್ ಅವರು ನಿಡಸಾಲೆ, ಮಠದ ದೊಡ್ಡಿ ಗ್ರಾಮ ಮತ್ತು ತುಮಕೂರು ಜಿಲ್ಲೆಗೆ ಗೌರವವನ್ನು ತಂದು ಕೊಟ್ಟಿದ್ದಾರೆ. ಹಿಂದಿನ 2024ರ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕೂಡ, ಮೇಜರ್ ಸತೀಶ್ ಪರೇಡ್ ಕಮಾಂಡರ್(2IC) ಆಗಿ ಸೇವೆ ಸಲ್ಲಿಸಿದ್ದರು, ಮತ್ತು ತಮ್ಮ ಯಶಸ್ವಿ ನಾಯಕತ್ವಕ್ಕಾಗಿ ಅವರು ರಾಜ್ಯಪಾಲರಿಂದ ಪ್ರಶಂಸೆ ಹಾಗೂ ವಿಶೇಷ ಪ್ರಶಸ್ತಿಗೆ ಭಾಜನರಾಗಿದ್ದರು.

ಮೇಜರ್ ಸತೀಶ್ ಅವರು 2015ರಲ್ಲಿ ಭಾರತೀಯ ಸೇನೆಯ ಕಠಿಣ ಪರೀಕ್ಷೆ ಮತ್ತು ಸಂದರ್ಶನವನ್ನು ಯಶಸ್ವಿಯಾಗಿ ಪೂರೈಸಿ ಲೆಫ್ಟಿನೆಂಟ್ ಹುದ್ದೆಗೆ ಆಯ್ಕೆಯಾಗಿದ್ದರು. ನಂತರ, ಕಾಶ್ಮೀರದಲ್ಲಿ ಭಯೋತ್ಪಾದನಾ ನಿಗ್ರಹ ದಳದಲ್ಲಿ ಸೇವೆ ಸಲ್ಲಿಸಿ, 2017ರಲ್ಲಿ ಕ್ಯಾಪ್ಟನ್ ಹುದ್ದೆಗೆ ಬಡ್ತಿ ಪಡೆದರು. ಅವರು ಅಮೃತಸರದಲ್ಲಿ ಆಡಳಿತ, ಶಿಕ್ಷಣ ಮತ್ತು ತರಬೇತಿ ವಿಭಾಗಗಳಲ್ಲಿ ಕಾರ್ಯನಿರ್ವಹಿಸಿದ



ನಂತರ, 2019ರಲ್ಲಿ Officers' Training Academy ನಲ್ಲಿ ಉನ್ನತ ಶ್ರೇಣಿಗೆ ನೇಮಕಗೊಂಡು ನೂರಾರು ಯುವ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದ ಅನುಭವ ಹೊಂದಿದ್ದಾರೆ.

2021ರಲ್ಲಿ ಮೇಜರ್ ಹುದ್ದೆಗೆ ಬಡ್ತಿ ಪಡೆದ ಮೇಜರ್ ಸತೀಶ್, ಬೆಂಗಳೂರಿನಲ್ಲಿ ಕೇಂದ್ರ ಸರ್ಕಾರದ 'ಅಗ್ನಿಪಥ ಯೋಜನೆ'ಯ ಪ್ರಥಮ ಬ್ಯಾಚ್‌ನ ನೇಮಕಾತಿ ಮತ್ತು ತರಬೇತಿಯನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಮೇಜರ್ ಸತೀಶ್ ಅವರು ಕೊಡಗಿನ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕಿ ಮತ್ತು ಕುಶಾಲನಗರ ಮೂಲದ ಶ್ರೀಮತಿ ಪಾವನಿ ಅವರೊಂದಿಗೆ ವಿವಾಹಿತರಾಗಿದ್ದು, ದಂಪತಿಗೆ ಆರ್ಯ ಸಿತಾರ ಎಂಬ ಮಗಳಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಾದ ನಿಡಸಾಲೆ ಗ್ರಾಮದಲ್ಲಿ ಮುಗಿಸಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್‌ನಲ್ಲಿ M.A. ಮತ್ತು M.Phil ಪದವೀಧರರಾಗಿರುವ ಅವರು, ತಮ್ಮ ಉನ್ನತ ಜವಾಬ್ದಾರಿಯನ್ನು ನಿಭಾಯಿಸುವುದರೊಂದಿಗೆ ಪಾಂಡಿಚೇರಿ ಕೇಂದ್ರ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಪಿಹೆಚ್.ಡಿ ವ್ಯಾಸಂಗ ಮಾಡುತ್ತಿದ್ದಾರೆ.

"Career in the Indian Defence Forces" ಮತ್ತು "Fearless in Service" ಎಂಬ ಪುಸ್ತಕಗಳ ಲೇಖಕರಾಗಿರುವ ಸತೀಶ್ ಅವರು, ಈ ಮೂಲಕ ಯುವಕರಲ್ಲಿ ಸೈನಿಕ ವೃತ್ತಿ ಮತ್ತು ದೇಶ ಸೇವೆಯ ಪ್ರೇರಣೆಯನ್ನು ಹುಟ್ಟುಹಾಕುತ್ತಿದ್ದಾರೆ. ನಿಡಸಾಲೆ (ಮಠದ ದೊಡ್ಡಿ) ಗ್ರಾಮದ ಮೇಜರ್ ಸತೀಶ್ ಅವರ ಸಾಧನೆಗಳು ಮತ್ತು ಯಶಸ್ಸು, ಗ್ರಾಮದಿಂದ ಆರಂಭವಾಗಿ ಇಂದು ರಾಜ್ಯ ಮತ್ತು ರಾಷ್ಟ್ರಕ್ಕೆ ಮಾದರಿಯಾಗಿದೆ. ಈ ಮಹತ್ವದ ಸಾಧನೆಗಾಗಿ ನಿಡಸಾಲೆ ಗ್ರಾಮಸ್ಥರು ಸಂತಸ ವ್ಯಕ್ತಪಡಿಸುತ್ತಾ, 'ಇದು ನಮ್ಮ ಗ್ರಾಮಕ್ಕೆ ಕೀರ್ತಿಯನ್ನು ತಂದುಕೊಟ್ಟ ಸಮಾನತೆಯ ಯುಗಚೇತನ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇಂದು ಡಿಸಿ ಕಚೇರಿ ಬಳಿ ಶಾಂತಿಯುತ ಪ್ರತಿಭಟನೆ

ಕೊಡವರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಹಕ್ಕೊತ್ತಾಯ ಮಂಡನೆ


ಎನ್.ಯು.ನಾಚಪ್ಪ

ಮಡಿಕೇರಿ,ಜ.25– ಕೊಡವರನ್ನು ಒಳಗೊಂಡ ಪರಿಪೂರ್ಣ ಮತ್ತು ಅರ್ಥಪೂರ್ಣ ಗಣರಾಜ್ಯಕ್ಕಾಗಿ ಒತ್ತಾಯಿಸಿ ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತೆ ಸೇರಿದಂತೆ ವಿವಿಧ ಬೇಡಿಕೆಗಳ ಹಕ್ಕೊತ್ತಾಯವನ್ನು 76ನೇ ಗಣರಾಜ್ಯೋತ್ಸವದ ದಿನವಾದ ಜ.26ರಂದು ಬೆಳಿಗ್ಗೆ 10.30 ಗಂಟೆಗೆ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಶಾಂತಿಯುತವಾಗಿ ಪ್ರತಿಭಟನೆ ಮೂಲಕ ಮಂಡಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ನಗಣ್ಯ ಸಂಖ್ಯೆಯ ಕೊಡವರ ಗೌರವಾನ್ವಿತ ಗುರಿಗಳು ಮತ್ತು ಶಾಸನ ಬದ್ಧ ಹಕ್ಕೊತ್ತಾಯಗಳ ಅನುಷ್ಠಾನಕ್ಕಾಗಿ ಜಿಲ್ಲಾಡಳಿತ ಮೂಲಕ ಸರಕಾರಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ದೇಶದ ಸಂವಿಧಾನದ ಆರ್ಟಿಕಲ್ 244 ಆರ್/ಡಬ್ಲ್ಯೂ 6ನೇ ಮತ್ತು 8ನೇ ಶೆಡ್ಯೂಲ್ ಅಡಿಯಲ್ಲಿ ಕೊಡವಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ, ವಿಶ್ವರಾಷ್ಟ್ರ ಸಂಸ್ಥೆಯ ಘೋಷಣೆ ಪ್ರಕಾರ ಅಂತಾರಾಷ್ಟ್ರೀಯ ಕಾನೂನಿನನ್ವಯ ಕೊಡವರಿಗೆ ಮಾನ್ಯತೆ ಮತ್ತು ಸೂಕ್ಷ್ಮಾತಿಸೂಕ್ಷ್ಮ ಕೊಡವ ಬುಡಕಟ್ಟು ಕುಲಕ್ಕೆ ಎಸ್‌ಟಿ ಟ್ಯಾಗ್ ಪರಿಗಣಿತೆಯೊಂದಿಗೆ ಸಿಎನ್‌ಸಿ ಪ್ರತಿಪಾದಿಸಿರುವ ಕೊಡವರ ಭೂಮಿ, ಭಾಷೆ, ಸಂಸ್ಕೃತಿ, ಜನಪದ ಇತ್ಯಾದಿ ಆಶೋತ್ತರಗಳಿಗೆ ರಾಜ್ಯಾಂಗ ಖಾತ್ರಿಯ ಕಾನೂನುಬದ್ಧ ಹಕ್ಕುಗಳನ್ನು ನೀಡಬೇಕೆಂದು ಒತ್ತಾಯಿಸಲಾಗುವುದು.

ಸಂವಿಧಾನದ ವಿಧಿ 32ರ ಅಡಿಯಲ್ಲಿ ಜನರ ಆಶೋತ್ತರಗಳಿಗೆ ಪರಿಹಾರ ಕಂಡುಕೊಳ್ಳುವುದು 6 ಮೂಲಭೂತ ಹಕ್ಕುಗಳಲ್ಲಿ ಒಂದಾಗಿದೆ ಅದರಂತೆ ಸಾಂವಿಧಾನಿಕ ಕಾರ್ಯವಿಧಾನದ ಮೂಲಕ ಕೊಡವರ ಪರಮೋಚ್ಚ ಆಕಾಂಕ್ಷೆಗಳು ಮತ್ತು ಗೌರವಾನ್ವಿತ ಗುರಿಗಳನ್ನು ಸಾಧಿಸಲು ಈ ಶಾಂತಿಯುತ ಕಾರ್ಯಕ್ರಮ ನಡೆಸಲಾಗುತ್ತಿದೆ. ಸಿಎನ್‌ಸಿ ಸ್ವಯಂ ಸೇವಕರು ಹಾಗೂ ಕೊಡವ, ಕೊಡವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಎನ್.ಯು.ನಾಚಪ್ಪ ಮನವಿ ಮಾಡಿದ್ದಾರೆ.

ಕಾಡಾನೆಗಳ ದಾಳಿ : ರೈತರ ಫಸಲು ನಾಶ


ಕಾಡಾನೆ ದಾಳಿಯಿಂದ ಫಸಲು ನಾಶ.

ಕುಶಾಲನಗರ, ಜ.25– ತಾಲೂಕಿನ ಜೇನುಕಲ್ಲು ಬೆಟ್ಟ ಮೀಸಲು ಅರಣ್ಯ ವ್ಯಾಪ್ತಿಯ ಸೀಗೆಹೊಸೂರು, ಜೇನುಕಲ್ಲು ಬೆಟ್ಟದ ವ್ಯಾಪ್ತಿಯಲ್ಲಿ ಕಳೆದ ಕೆಲವು ದಿನಗಳಿಂದ ಕಾಡಾನೆಗಳ ಹಾವಳಿ ತೀವ್ರಗೊಂಡಿದ್ದು, ರೈತರ ಕೃಷಿ ಫಸಲಿಗೆ ಹಾನಿಪಡಿಸಿವೆ.

ರೈತರ ಅಡಿಕೆ ತೋಟ, ಜೋಳದ ಬೆಳೆ ಸೇರಿದಂತೆ ಅಪಾರ ಪ್ರಮಾಣದ ಬೆಳೆಗಳನ್ನು ಕಾಡಾನೆಗಳು ತಿಂದು, ಮುರಿದು ಹಾನಿಪಡಿಸಿದ್ದು, ಅಪಾರ ಪ್ರಮಾಣದ ನಷ್ಟ ಉಂಟಾಗಿದೆ. ಸೀಗೆಹೊಸೂರು ಗ್ರಾಮದ ಕುಶಲ್, ನಾಗರಾಜ, ಪಾರ್ವತಮ್ಮ ಸೇರಿದಂತೆ ಹಲವು ರೈತರ ಜಮೀನಿಗೆ ಜೇನುಕಲ್ಲು ಬೆಟ್ಟದ ಕಾಡಂಚಿನಿಂದ ಬರುವ ಕಾಡಾನೆಗಳು ರೈತರ ತೋಟಗಳಿಗೆ ಲಗ್ಗೆ ಹಾಕಿ ಅಪಾರ ಪ್ರಮಾಣದ ಬೆಳೆಯನ್ನು ನಷ್ಟಪಡಿಸಿವೆ.

ಸ್ಥಳಕ್ಕೆ ಕೂಡಿಗೆ ಗ್ರಾಪಂ ಸದಸ್ಯ ಅನಂತ, ಚಂದ್ರು, ಹೆಬ್ಬಾಲೆ ಉಪ ವಲಯ ಅರಣ್ಯಾಧಿಕಾರಿ ಭರತ್ ಸೇರಿದಂತೆ ಸಿಬ್ಬಂದಿವರ್ಗ ಭೇಟಿ ನೀಡಿ ಪರಿಶೀಲನೆ ನಡೆಸಿದರು. ರೈತರಿಗೆ ಉಂಟಾಗಿರುವ ನಷ್ಟಕ್ಕೆ ಸೂಕ್ತ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕೊಡಗಿನ ವಿದ್ಯುತ್ ಸಮಸ್ಯೆ ನಿವಾರಣೆಗೆ 208 ಕೋಟಿ ಅನುದಾನ

ವಿರಾಜಪೇಟೆ ಬಳಿ ಕಾಮಗಾರಿಗೆ ಚಾಲನೆ ನೀಡಿದ ಉಸ್ತುವಾರಿ ಸಚಿವ ಬೋಸರಾಜು

ವಿರಾಜಪೇಟೆ, ಜ.25– ಕೊಡಗು ಜಿಲ್ಲೆಯ ವಿದ್ಯುತ್ ಸಮಸ್ಯೆ ನಿವಾರಣೆಗೆ 208 ಕೋಟಿ ರೂ. ಅನುದಾನ ನೀಡಲಾಗಿದ್ದು, ಕೊಡಗಿನ ಇತಿಹಾಸದಲ್ಲಿ ಇದು ಪ್ರಮುಖ ಅಂಶವಾಗಿದೆ ಎಂದು ಕೊಡಗು ಉಸ್ತುವಾರಿ ಸಚಿವ ಬೋಸರಾಜು ಹೇಳಿದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಅಡಚಣೆ ತಪ್ಪಿಸಲು 120 ಕೋಟಿ ರೂ. ಅನುದಾನದ ಕಾಮಗಾರಿಗೆ ಸಮೀಪದ ಬಿಟ್ಟಂಗಾಲದಲ್ಲಿ ಭೂಮಿ ಪೂಜೆ ನೆರವೇರಿಸಿ ಹೆಗ್ಗಡೆ ಸಮಾಜದ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರ ಜನಪರ ಕೆಲಸ ಮಾಡುತ್ತಿದೆ, ಆದರೆ ವಿರೋಧ ಪಕ್ಷದವರು ಜನರ ಹಾದಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಕೇಂದ್ರ ಸರ್ಕಾರ ನಿಗದಿತ ಅನುದಾನ ನೀಡದೆ ರಾಜಕೀಯ ಮಾಡುತ್ತಿದೆ. ಕಳೆದ ಮಳೆಗಾಲದಲ್ಲಿ ಕೊಡಗಿನ ಶಾಸಕರು ಅಧಿಕಾರಿಗಳ ಜೊತೆಗೂಡಿ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದೇನೆ. ಈ ಸಂದರ್ಭ ಕೊಡಗು ವಿದ್ಯುತ್ ಸಮಸ್ಯೆಯನ್ನು ನೀಗಿಸುವ ಬಗ್ಗೆ ಚರ್ಚಿಸಿ ಕಾಮಗಾರಿ ಕೈಗೊಳ್ಳಲಾಗಿದೆ ಎಂದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿದ್ಯುತ್ ಬಲವರ್ಧನೆಗಾಗಿ 120 ಕೋಟಿ ರೂ. ಮಂಜೂರಾಗಿದ್ದು, ವಿದ್ಯುತ್ ಹಳೆ ಕಬ್ಬಿಣದ ಕಂಬ ಬದಲಾವಣೆ, ತಂತಿಗಳ ಬದಲಾವಣೆ ಇತ್ಯಾದಿ ಕಾಮಗಾರಿ ನಡೆಯಲಿದ್ದು, 9 ತಿಂಗಳ ಗಡುವನ್ನು ಗುತ್ತಿಗೆದಾರರಿಗೆ ನೀಡಲಾಗಿದೆ. ಆರು ಕಡೆ ವಿದ್ಯುತ್ ವೋಲ್ಟೇಜ್ ಸಮಸ್ಯೆ ಸರಿದೂಗಿಸಲು 66/11 ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪನೆಯಾಗಲಿದೆ ಎಂದರು.


ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುತ್ತಿರುವ ಉಸ್ತುವಾರಿ ಸಚಿವ ಬೋಸರಾಜು.

ಕೊಡಗಿನ ರಸ್ತೆ ಅಭಿವೃದ್ಧಿಗೆ 60 ಕೋಟಿ ರೂ. ನೀಡಲಾಗಿದೆ. ರಾಜ್ಯ ಸರಕಾರ ಅಭಿವೃದ್ಧಿಯಲ್ಲಿ ತೊಡಗಿದ್ದರೆ ವಿಪಕ್ಷಗಳು ಅಭಿವೃದ್ಧಿ ಆಶಯ ಬಿಟ್ಟು ಅಧಿಕಾರದ ಕನಸು ಕಾಣುತ್ತ ಕಾಲ ಕಳೆಯುತ್ತಿದೆ. ಕೇಂದ್ರದಿಂದ ನಿಗದಿತ ಅನುದಾನ ಬಂದಿಲ್ಲ. ಈ ಬಗ್ಗೆ ಚಕಾರ ಎತ್ತದಿರುವುದು ವಿಪರ್ಯಾಸ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಮಾತನಾಡಿ, ನನ್ನ ಕ್ಷೇತ್ರ ವ್ಯಾಪ್ತಿ ವಿದ್ಯುತ್ ಬಲವರ್ಧನೆಗಾಗಿ 120 ಕೋಟಿ ರೂ. ದೊರಕಿದ್ದು, ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಗುಡ್ಡಗಾಡು ಪ್ರದೇಶ ಕೊಡಗಿನಲ್ಲಿ ಹೆಚ್ಚು ಮಳೆಯಾಗುವುದರಿಂದ ವಿದ್ಯುತ್ ಅಡಚಣೆ ಉಂಟಾಗಲಿದೆ. ಇದರ ಪರಿಹಾರಕ್ಕೆ ಉಸ್ತುವಾರಿ ಸಚಿವರ ಮೂಲಕ ಇಂಧನ ಸಚಿವರಿಗೆ ಮನವಿ ಸಲ್ಲಿಸಲಾಗಿತ್ತು. ಕೊಡಗಿನ ಪ್ರೀತಿಯಿಂದ ಅವರು 208 ಕೋಟಿ ರೂ. ನೀಡಿದ್ದಾರೆ. ಅವರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಈ ಕಾಮಗಾರಿ ಸಮಯದಲ್ಲಿ ಜನರ ಸಹಕಾರ ಅಗತ್ಯ, ರಸ್ತೆ ಅಭಿವೃದ್ಧಿ ಆಗಬೇಕು. ಆದರೆ, ಪಕ್ಕದ ತೋಟದ ಮಾಲಿಕರು ಒಂದಿಷ್ಟು ಬೇಲಿಯನ್ನು ತೆಗೆಯದೆ ರಸ್ತೆ ವಿಸ್ತರಣೆ ಹೇಗೆ ಸಾಧ್ಯ ಎಂಬುದು ಅರಿಯಬೇಕು. ಮಾರ್ಚ್‌ನಲ್ಲಿ ಕಾಮಗಾರಿಯ ಶ್ವೇತಪತ್ರ ಹೊರಡಿಸಿ ಜನರ ಮುಂದಿಡುತ್ತೇನೆ. ಈ ಮೂಲಕ ವೃಥಾ ಟೀಕಿಸುವ ವಿಪಕ್ಷಕ್ಕೆ ಉತ್ತರಿಸುತ್ತೇನೆ. ವಿಪಕ್ಷಗಳ ಅವಧಿಯಲ್ಲಿ, ಕಾಮಗಾರಿಗೆ ಎಷ್ಟು ಹಣ ತಂದಿದ್ದಾರೆ ಎಂದು ಆತ್ಮಾವಲೋಕನ ಮಾಡಿಕೊಂಡು, ಜನರ ಹಾದಿ ತಪ್ಪಿಸುವ, ಟೀಕಿಸುವ ಪ್ರವೃತ್ತಿ ನಿಲ್ಲಿಸಲಿ. ಕಾಮಗಾರಿಯಲ್ಲಿ ಗುಣಮಟ್ಟ ಕಾದು ಕೊಳ್ಳಬೇಕು. ಇಲ್ಲವಾದರೆ ಗುತ್ತಿಗೆದಾರರ ಹಣ ಪಾವತಿಯಾಗುವುದಿಲ್ಲ ಎಂದು ಅವರು ಎಚ್ಚರಿಸಿದರು.

ಜಿಲ್ಲಾಧಿಕಾರಿ ವೆಂಕಟರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಮತ್ತು ಐಪಿಎಸ್ ಅಧಿಕಾರಿ ಬೆನಕ ಪ್ರಸಾದ್, ಜಿಪಂ ಕಾರ್ಯನಿರ್ವಾಹಣಾಧಿಕಾರಿ ಆನಂದ ಪ್ರಕಾಶ್ ಮೀನಾ ಸೆಸ್ಕ್ ಮೈಸೂರಿನ ಮುಖ್ಯ ಅಭಿಯಂತರ ದಿವಾಕರ್, ಕೊಡಗು–ಚಾಮರಾಜನಗರ ಜಿಲ್ಲೆಯ ಅಧಿಕ್ಷಕ ಅಭಿಯಂತರ ಸೋಮಶೇಖರ್, ಜಿಲ್ಲಾ ಸೆಸ್ಕ್ ಅಭಿಯಂತರ ರಾಮಚಂದ್ರ, ಬಿಟ್ಟಂಗಾಲ ಗ್ರಾಪಂ ಅಧ್ಯಕ್ಷ ಎಂ.ಪಿ. ಸುಬ್ಬಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ದರ್ಮಜ ಉತ್ತಪ್ಪ, ವಿರಾಜಪೇಟೆ ಸಹಾಯಕ ಕಾರ್ಯಪಾಲಕ ಅಭಿಯಂತರ ಸುರೇಶ್, ಸಹಾಯಕ ಅಭಿಯಂತರ ಅಭಿಷೇಕ್, ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.

ಚಾ.ನಗರದಲ್ಲಿ ಅರ್ಥಪೂರ್ಣ ರಾಷ್ಟ್ರೀಯ ಮತದಾರರ ದಿನ ಆಚರಣೆ





ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ಅಧಿಕಾರಿಗಳು ಪಾಲ್ಗೊಂಡು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಚಾಮರಾಜನಗರ, ಜ.25– ಮತದಾರರಿಗೆ ವ್ಯವಸ್ಥಿತ ಜಾಗೃತಿ, ಸುಭದ್ರ ಪ್ರಜಾಪ್ರಭುತ್ವ ದೇಶ ನಿರ್ಮಾಣ ಹಾಗೂ ಮತದಾರರ ಪಟ್ಟಿಗೆ ಗರಿಷ್ಠ ದಾಖಲಾತಿ ಆಶಯದೊಂದಿಗೆ 'ರಾಷ್ಟ್ರೀಯ ಮತದಾರರ ದಿನಾಚರಣೆ'ಯನ್ನು ನಗರದಲ್ಲಿಂದು ಹಲವು ವಿಶಿಷ್ಟ ಕಾರ್ಯಕ್ರಮಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮತದಾರರ ದಿನ ಆಚರಣೆ ಕಾರ್ಯಕ್ರಮದಲ್ಲಿ ಗಣ್ಯರು, ಅಧಿಕಾರಿಗಳು ಮತ್ತು ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳು ಮಾನವ ಸರಪಳಿ ರಚಿಸಿ, ಕೇಸರಿ ಬಿಳಿ ಹಸಿರು ಬಣ್ಣದ ಬಲೂನ್‌ಗಳನ್ನು ಆಕಾಶಕ್ಕೆ ಹಾರಿಬಿಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು.

ಜಿಲ್ಲಾ ಪ್ರಧಾನ ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ, ಜಿಲ್ಲಾಧಿಕಾರಿ ಶಿಲ್ಪಾ ನಾಗ್. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತ ಹಾಗೂ ಇತರೆ ಗಣ್ಯರು ಹಾಜರಿದ್ದ ಕಾರ್ಯಕ್ರಮದಲ್ಲಿ ನಗರದ ಸರ್ಕಾರಿ ಶಾಲೆಯ 3ನೇ ತರಗತಿ ವಿದ್ಯಾರ್ಥಿನಿ ನುಸಾ ಫಾತೀಮಾ ಖಾನ್ ಅವರು ಅಚ್ಚುಕಟ್ಟಾಗಿ ಸಂವಿಧಾನದ ಪ್ರತಿಜ್ಞಾವಿಧಿ ಬೋಧಿಸಿದ್ದು ವಿಶೇಷವಾಗಿತ್ತು.

ಬಳಿಕ ಜಿಲ್ಲಾ ಪ್ರಧಾನ ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಎಸ್. ಭಾರತಿ ಅವರು ಮತದಾನ ನಮ್ಮ ಹಕ್ಕು, ಮತದಾನ ಬಿಟ್ಟರೆ ಇನ್ನೊಂದಿಲ್ಲ, ನೈತಿಕ ಮತದಾನ ಮಾಡಿ, ಮತದಾನ ಮಾಡಿ ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡಿ ಸೇರಿದಂತೆ ಮತದಾನದ ಅರಿವು ಮೂಡಿಸುವ ಇತರೆ ವಿವಿಧ ಬಣ್ಣದ ಸ್ಟಿಕ್ಕರ್‌ಗಳನ್ನು ವೃಕ್ಷಕ್ಕೆ ಅಳವಡಿಸಿ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಇದೇ ವೇಳೆ ಜಿಲ್ಲೆಯಲ್ಲಿ 18 ವರ್ಷ ತುಂಬಿದ ಯುವ ಮತದಾರರಿಗೆ ಮತದಾರರ ಗುರುತಿನ ಚೀಟಿ ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು, ಎಲ್ಲರಿಗೂ ರಾಷ್ಟ್ರೀಯ ಮತದಾರರ ದಿನದ ಶುಭಾಶಯಗಳನ್ನು ತಿಳಿಸಿ, ಪ್ರತಿವರ್ಷದಂತೆ ಜಿಲ್ಲೆಯಲ್ಲಿ ಈ ಬಾರಿಯು ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಅತ್ಯಂತ ವಿಜೃಂಭಣೆಯಿಂದ ಹಬ್ಬದ ಮಾದರಿಯಲ್ಲಿ ಆಚರಿಸಲಾಗುತ್ತಿದೆ. ಮತದಾರರ ದಿನ ಆಚರಣೆಯನ್ನು ಸಂವಿಧಾನದ ಹಬ್ಬವಾಗಿ ನಾವೆಲ್ಲರೂ ಆಚರಿಸಬೇಕು ಎಂದರು.

ಸಮತಾ ಸೊಸೈಟಿಯ ಅಧ್ಯಕ್ಷರು ಹಾಗೂ ಕಳೆದ ಲೋಕಸಭಾ ಚುನಾವಣೆಯಲ್ಲಿ ಜಿಲ್ಲೆಯ ರಾಯಭಾರಿಯಾಗಿದ್ದ ದೀಪಾ ಬುದ್ದೆ ಅವರು ಮಾತನಾಡಿದರು.

ಬಳಿಕ ಕಳೆದ ಲೋಕಸಭಾ ಚುನಾವಣೆಯಲ್ಲಿ ಮತದಾನದಲ್ಲಿ ಪಾಲ್ಗೊಂಡ ಲಿಂಗತ್ವ ಅಲ್ಪಸಂಖ್ಯಾತರಿಗೆ ಏರ್ಪಡಿಸಿದ್ದ ಸೆಲ್ಫಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಹಾಗೂ ಮತದಾನದ ಕುರಿತ ಪ್ರಬಂಧ, ರಸಪ್ರಶ್ನೆ ಮತ್ತು ಭಿತ್ತಿಚಿತ್ರ ಸ್ಪರ್ಧೆಗಳಲ್ಲಿನ ವಿಜೇತರಿಗೆ ಹಾಗೂ ದೇಶಾದ್ಯಂತ ಗಮನ ಸೆಳೆದ ರೇಷ್ಮೆ ಸೀರೆಯಲ್ಲಿ ಮತದಾನದ ಜಾಗೃತಿ ಮುದ್ರಿಸಿ ವಿತರಿಸಿದ ಕೊಳ್ಳೇಗಾಲದ ಕೈಮಗ್ಗ ನೇಕಾರರ ಸಂಘಕ್ಕೆ ಪ್ರಮಾಣಪತ್ರ, ಸ್ಮರಣಿಕೆಯೊಂದಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ವಿತರಿಸಲಾಯಿತು. ಅಲ್ಲದೆ ಕಳೆದ ಲೋಕಸಭೆ ಚುನಾವಣೆಯಲ್ಲಿ ಮತದಾರರನ್ನು ಮತಗಟ್ಟೆಗಳಿಗೆ ಆಕರ್ಷಿಸಲು 48 ವಿಶೇಷ ಮತಗಟ್ಟೆಗಳನ್ನು ರಚಿಸಿದ ಮತಗಟ್ಟೆ ಅಧಿಕಾರಿಗಳು ಹಾಗೂ ಯುವಸೌರಭ, ಸಖಿ ಸೌರಭ, ಜಾನಪದ ಸಾಂಪ್ರದಾಯಿಕ ಬೂತ್‌ಗಳನ್ನು ನಿರ್ಮಿಸಿದ್ದ ಅಧಿಕಾರಿಗಳಿಗೆ ಪ್ರಮಾಣಪತ್ರ ಹಾಗೂ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು. ನಂತರ ಸಹಿ ಸಂಗ್ರಹ ಅಭಿಯಾನ ನಡೆಯಿತು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಪಿ. ಲಕ್ಷ್ಮೀ, ತಹಶೀಲ್ದಾರ್ ಗಿರಿಜ, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ದೀಪಾ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅಂಬೇಡ್ಕರ್ ಶೋಷಿತರ ಆಶಾಕಿರಣ

ಹೆಬ್ಬಸೂರಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣ


ಹೆಬ್ಬಸೂರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣಗೊಳಿಸಿದ ಸಂದರ್ಭ.

ಚಾಮರಾಜನಗರ, ಜ.25– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಬರೆದು ಕೊಟ್ಟ ಸಂವಿಧಾನದಿಂದ ಭಾರತದ ಪ್ರಜಾಪ್ರಭುತ್ವ ಗಟ್ಟಿಯಾಗಿದೆ ಎಂದು ಎಂಎಸ್‌ಐಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ತಾಲೂಕಿನ ಹೆಬ್ಬಸೂರು ಗ್ರಾಮದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂಬೇಡ್ಕರ್‌ರವರು ದೇಶಕ್ಕೆ ಸಂವಿಧಾನ ಬರೆದು ಕೊಡದಿದ್ದರೆ ಏನಾಗುತ್ತಿತ್ತು ಎಂಬುವುದರ ಬಗ್ಗೆ ಚಿಂತಿಸಬೇಕಿದೆ ಎಂದರು.

ಸಂವಿಧಾನ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ: ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ ಧ್ರುವನಾರಾಯಣ್ ಮಾತನಾಡಿ, ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಚೆನ್ನಾಗಿ ಮೂಡಿಬಂದಿದೆ. ದೇಶ ಕಂಡ ಮಹಾ ಗ್ರಂಥವಾದ ಸಂವಿಧಾನ ರಚನೆ ಮಾಡಿದ್ದಾರೆ. ಅವರ ಸಂವಿಧಾನ ಜೀವಿಸಲು ನಾವೆಲ್ಲರೂ ರಕ್ಷಣೆ ಮಾಡುವ ದೊಡ್ಡ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಜಿ.ಪಂ ಮಾಜಿ ಸದಸ್ಯ ಎ.ಆರ್.ಬಾಲರಾಜು ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್‌ರವರು ನಿಜ ಜೀವನದಲ್ಲಿ ಸ್ವರ್ಗ ತೋರಿದ್ದಾರೆ. ಪ್ರತಿದಿನ ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್ ಹೇಳುತ್ತೇವೆ ಎಂದು ಅಂಬೇಡ್ಕರ್ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಅಮಿತ್ ಶಾ ವಿರುದ್ಧ ಕಿಡಿಕಾರಿದರು. ಬೌದ್ಧಭಿಕ್ಕು ಸುಗಂತಪಾಲ ಬಂತೇಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ಮಾಡಿದರು. ಕಾರ್ಯಕ್ರಮದಲ್ಲಿ ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಗ್ರಾಪಂ ಅಧ್ಯಕ್ಷೆ ಕೆ.ಪದ್ಮ, ಗುಲ್ಬರ್ಗಾ ಮೈತ್ರಿ ಅನಿಲ್, ಸಂಘ–ಸಂಸ್ಥೆಗಳ ಮುಖಂಡರು, ಗ್ರಾಮಸ್ಥರು ಭಾಗವಹಿಸಿದ್ದರು.

ಅಪರಿಚಿತ ವಾಹನ ಡಿಕ್ಕಿ, ಬೈಕ್ ಸವಾರ ಸಾವು


ಭರತ್‌ಕುಮಾರ್

ಚಾಮರಾಜನಗರ, ಜ.25– ಅಪರಿಚಿತ ವಾಹನ ಡಿಕ್ಕಿಹೊಡೆದ ಪರಿಣಾಮ ಬೈಕ್ ಸವಾರ ತೀವ್ರ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಹೊನ್ನಹಳ್ಳಿ ಗ್ರಾಮದ ನಡೆದಿದೆ.

ಚಾಮರಾಜನಗರ ಟೌನ್‌ನ ಉಪ್ಪಾರ ಬಡಾವಣೆಯ ನಿವಾಸಿ ಭರತ್‌ಕುಮಾರ್ (27) ಮೃತ ಬೈಕ್ ಸವಾರ. ಭರತ್‌ಕುಮಾರ್ ತನ್ನ ಬೈಕ್‌ನಲ್ಲಿ ಚಾಮರಾಜನಗರಕ್ಕೆ ಬರುತ್ತಿದ್ದ ವೇಳೆ ಹೊನ್ನಹಳ್ಳಿ ಗ್ರಾಮದ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಈ ವೇಳೆ ತೀವ್ರವಾಗಿ ಗಾಯಗೊಂಡ ಭರತ್‌ಕುಮಾರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಗ್ರಾಮಾಂತರ ಠಾಣೆಯ ಪೊಲೀಸರು ಮೃತದೇಹವನ್ನು ಸಿಮ್ಸ್ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ರವಾನಿಸಲಾಗಿದೆ.

ಈ ಸಂಬಂಧ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿಎಸ್‌ಎಸ್ ಕೊಳ್ಳೇಗಾಲ ತಾಲೂಕು ಸಮಿತಿ ರಚನೆ

ಚಾಮರಾಜನಗರ, ಜ.25– ಪಟ್ಟಣದ ಪ್ರವಾಸಿಮಂದಿರದಲ್ಲಿ ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಸಿ.ರಾಜಣ್ಣ ಯರಿಯೂರು ಅವರ ಅಧ್ಯಕ್ಷತೆಯಲ್ಲಿ ಕೊಳ್ಳೇಗಾಲ ತಾಲೂಕು ಸಮಿತಿ ರಚನೆ ಮಾಡಲಾಯಿತು. ಕೊಳ್ಳೇಗಾಲ ತಾಲೂಕು ಸಂಚಾಲಕರರಾಗಿ ಸಿ.ಸಿದ್ದರಾಜು, ಸಿದ್ದಯ್ಯನಪುರ, ಸಂಘಟನೆ ಸಂಚಾಲಕರಾಗಿ ಶಾಂತರಾಜು, ದಾಸನಪುರ, ರವಿ, ದಾಸನಪುರ, ಮಹೇಶ್ ಮುಳ್ಳೂರು, ಖಜಾಂಚಿಯಾಗಿ ಮಹದೇವ, ಆದರ್ಶನಗರ ಕೊಳ್ಳೇಗಾಲ ಪಟ್ಟಣ ಸಂಚಾಲಕರಾಗಿ ಶಂಕರ ಬಸ್ತಿಪುರ, ಕಸಬಾ ಹೋಬಳಿ ಸಂಚಾಲಕರಾಗಿ ಆರ್. ಕೆಂಪರಾಜು, ತೇರಂಬಳ್ಳಿ ಪಾಳ್ಯ ಹೋಬಳಿ ಸಂಚಾಲಕರಾಗಿ ಬಾಬು ಕಾಮಗೆರೆ, ಸಂಘಟನ ಸಂಚಾಲಕರರಾಗಿ ಸಿದ್ದಯ್ಯ ಕರಿನಪುರ, ಪ್ರವೀಣ್ ಇಕ್ಕಡಹಳ್ಳಿ ಅವರನ್ನು ನೇಮಕ ಮಾಡಲಾಗಿದೆ. ನೂತನ ಪದಾಧಿಕಾರಿಗಳನ್ನು ಜಿಲ್ಲಾ ಸಂಚಾಲಕ ಸಿ. ರಾಜಣ್ಣ ಯರಿಯೂರು ಸನ್ಮಾನಿಸಿದರು.

ಸಿದ್ದರಾಮಯ್ಯ ಒಬ್ಬ ಸಮರ್ಥ, ಜನರ ಮೆಚ್ಚಿನ ಮುಖ್ಯಮಂತ್ರಿ

ವಸತಿ ನಿಲಯದ ಶಂಕುಸ್ಥಾಪನೆ ವೇಳೆ ಶಾಸಕ ಎಆರ್‌ಕೆ ಅಭಿಮತ

ಕೊಳ್ಳೇಗಾಲ, ಜ.25– ರಾಜ್ಯ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ, ಚುನಾವಣೆಗೂ ಮುನ್ನ ಸಿದ್ದರಾಮಯ್ಯ ಅವರು ಜನರಿಗೆ ನೀಡಿದ್ದ ಭರವಸೆ ಈಡೇರಿಸುವ ಮೂಲಕ ತಾವೊಬ್ಬ ಜನಪ್ರಿಯ ಸಮರ್ಥ ನಾಯಕ ಮಾತ್ರವಲ್ಲ ಅವರೊಬ್ಬ ಜನ ಮೆಚ್ಚಿನ ಮುಖ್ಯಮಂತ್ರಿ ಎಂಬುದನ್ನು ತೋರಿಸಿಕೊಟ್ಟಿದ್ದಾರೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಬಣ್ಣಿಸಿದರು.

ಪಟ್ಟಣದಲ್ಲಿ 7 ಕೋಟಿ ರೂ. ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ನೂತನ ವಸತಿ ನಿಲಯದ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಜನರ ಮೆಚ್ಚಿನ ಸಿಎಂ ಎಂದೆ ಬಿಂಬಿತರಾಗಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ಜನರ ನಂಬಿಕೆ, ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ ಎಂದರು.

ಸರ್ವ ಧರ್ಮದ ಜನರು ಮತ್ತು ವಿದ್ಯಾರ್ಥಿಗಳ ಮೂಲ ಸೌಕರ್ಯಗಳಿಗೆ ಕಾಂಗ್ರೆಸ್ ಬದ್ಧವಾಗಿದ್ದು ಸರ್ಕಾರದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ರಾಜ್ಯದ ಪ್ರತಿಯೊಂದು ಜನರ ಅಭಿವೃದ್ಧಿಗಾಗಿ, ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ಚುನಾವಣಾ ಪೂರ್ವದಲ್ಲಿ ಕೊಟ್ಟ ಮಾತಿನಂತೆ ನಡೆದು ರಾಜ್ಯದ ಜನರ ಅಭಿವೃದ್ಧಿಗೆ ಆದ್ಯತೆ ನೀಡಿದ್ದಾರೆ ಎಂದರು.


ಕೊಳ್ಳೇಗಾಲ ಪಟ್ಟಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಶಂಕುಸ್ಥಾಪನೆಗೆ ನೆರವೇರಿಸಿದರು.

ಹಾಗೆಯೇ ರಾಜ್ಯದ ಸಮಾಜ ಕಲ್ಯಾಣ ಸಚಿವರಾದ ಹೆಚ್.ಸಿ.ಮಹದೇವಪ್ಪನವರು ಸಂವಿಧಾನಕ್ಕೆ ಗೌರವ ತರುವ ಅನೇಕ ಜನಪ್ರಿಯ ಸಂವಿಧಾನ ಜಾಗೃತಿ ಅಭಿಯಾನ ನಡೆಸಿ, ದೇಶವ್ಯಾಪ್ತಿಯಲ್ಲಿ ರಾಷ್ಟ್ರಮಟ್ಟದಲ್ಲಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅದೇ ರೀತಿ ವಿದ್ಯಾರ್ಥಿಗಳ ಶಿಕ್ಷಣದ ಬಗ್ಗೆ ಉಜ್ವಲವಾಗಿರಲಿ ಎಂದು ವಿದ್ಯಾರ್ಥಿಗಳಿಗೆ ಬೇಕಾದ ಮೂಲಸೌಕರ್ಯಗಳ ಬಗ್ಗೆ ಹೆಚ್ಚು ಆದ್ಯತೆ ನೀಡಿ ಸ್ಥಳೀಯ ಮತ್ತು ದೂರದ ಊರಿನಿಂದ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲವಾಗಲಿ ಎಂದು ವಸತಿ ನಿಲಯಗಳ ನಿರ್ಮಾಣಕ್ಕೆ ಹೆಚ್ಚಿನ ಆಸಕ್ತಿ ನೀಡಿದ್ದಾರೆ ಎಂದು ಶಾಸಕರು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭಾ ಅಧ್ಯಕ್ಷೆ ರೇಖಾ ರಮೇಶ್, ಉಪಾಧ್ಯಕ್ಷ ಎಪಿ ಶಂಕರ್, ಸದಸ್ಯರುಗಳಾದ, ಸ್ಥಾಯಿ ಸಮಿತಿ ಅಧ್ಯಕ್ಷ ಸುರೇಶ್, ನಗರಸಭೆ ಸದಸ್ಯರುಗಳಾದ ಸುಮ ಸುಬ್ಬಣ್ಣ, ಮಂಜುನಾಥ್, ಬಸತಿಪುರ ಶಾಂತರಾಜು, ರಾಘವೇಂದ್ರ, ನಾಗೇಂದ್ರ, ತಹಶೀಲ್ದಾರ್ ಬಸವರಾಜು, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಕೇಶವಮೂರ್ತಿ, ತಾಲ್ಲೂಕು ಗ್ಯಾರಂಟಿಗಳ ಅನುಷ್ಠಾನ ಸಮಿತಿ ಅಧ್ಯಕ್ಷರು ರಾಜೇಂದ್ರ, ಬಸ್ತಿಪುರ ರವಿ ಇನ್ನಿತರರಿದ್ದರು

ಇಂದು ನಗರದಲ್ಲಿ 76ನೇ ಗಣರಾಜ್ಯೋತ್ಸವ

ಚಾಮರಾಜನಗರ, ಜ.25– ಜಿಲ್ಲಾಡಳಿತದ ವತಿಯಿಂದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಜ.26ರಂದು ಬೆಳಿಗ್ಗೆ 9 ಗಂಟೆಗೆ ನಗರದ ಡಾ. ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಧ್ವಜಾರೋಹಣ ನೆರವೇರಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ಚಂದ್ರು, ಚಾ.ನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್, ನಗರಸಭೆ ಉಪಾಧ್ಯಕ್ಷೆ ಮಮತ, ಸದಸ್ಯ ಚಂದ್ರಶೇಖರ್ ಅವರು ಅತಿಥಿಗಳಾಗಿ ಪಾಲ್ಗೊಳ್ಳುವರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 26-1-2025

■ ಬನ್ನೂರು ಕೆ.ರಾಜು,
ಸಾಹಿತಿ-ಪತ್ರಕರ್ತ

ಸಂಸ್ಕೃತಿ ಮೆರೆಸುವ ಸುತ್ತೂರು ಜಾತ್ರೆ

ಇಂದಿನಿಂದ 31ರವರೆಗೆ ಸುಪ್ರಸಿದ್ಧ ಸುತ್ತೂರು ಜಾತ್ರೆ ಜರುಗುತ್ತಿದೆ ತನ್ನಿಮಿತ್ತ ಈ ಲೇಖನ.



ಜನಪದ ಅನ್ನುವುದು ನಮ್ಮ ನೆಲದ ತಾಯಿ ಬೇರು. ಜನಪದ ಸಂಸ್ಕೃತಿಯ ಹಿನ್ನೆಲೆಯಿಂದ ಬಂದಿರುವ ಜಾತ್ರೆಗಳೂ ಅಷ್ಟೆ, ತುದಿ ಮೊದಲಿಲ್ಲದ ಒಂದು ವಿಶಾಲ ವೈಭವ! ಜನಪದ ಜಾತ್ರೆ, ಹಬ್ಬ ಹರಿದಿನಗಳು ಮತ್ತು ಜನಪದ ಕಲೆಗಳು ನಾಡಿನ ಮಣ್ಣಿನ ಮಕ್ಕಳ ಉಸಿರು. ನಮ್ಮ ಜನಪದ ಗಂಡು ಕಲೆ ವೀರಗಾಸೆ ಸೇರಿದಂತೆ ಪ್ರತಿಯೊಂದು ಜನಪದ ಕಲೆಗಳು ನಮ್ಮ ನಾಡಿನ ಮತ್ತು ನಮ್ಮ ದೇಶದ ಸಂಸ್ಕೃತಿಯ ಪ್ರತಿಬಿಂಬ. ಜನಪದ ಗೀತೆ, ಜನಪದ ಕುಣಿತ, ಜನಪದ ಮೆರೆತ, ಸೋಬಾನೆ ಪದ, ಹಾಡು, ಹಸೆ, ಅಷ್ಟೇ ಏಕೆ ಜನಪದ ವೈದ್ಯ ಪದ್ಧತಿ, ಜನಪದ ಕೃಷಿ ...ಈ ರೀತಿ ಜನಪದದ ಒಳಗೆ ಎಲ್ಲವೂ ಉಂಟು.

ಈ ಹಿನ್ನೆಲೆಯಲ್ಲಿ ನಾವು ನಾಡಿನ ಸುವಿಖ್ಯಾತ "ಸುತ್ತೂರು ಜಾತ್ರೆ"ಯನ್ನು ನೋಡಿದಾಗ ಬಹುಶಃ ಇಷ್ಟರಮಟ್ಟಿಗೆ ನಮ್ಮ ನಾಡಿನ ಪರಂಪರೆಯ ಜಾತ್ರಾ ಮಹೋತ್ಸವದ ಸಂಸ್ಕೃತಿಯನ್ನು ಉಳಿಸುವ ಮತ್ತು ಬೆಳೆಸುವ ಹಾಗೂ ಮೆರೆಸುವ, ಎಲ್ಲಕ್ಕಿಂತ ಹೆಚ್ಚಾಗಿ ನಶಿಸಿ ಹೋಗುತ್ತಿರುವ ಜಾನಪದ ಸಿರಿಯನ್ನು, ಅಮೂಲ್ಯ ಸಂಪತ್ತನ್ನು, ಸಂರಕ್ಷಿಸುವತ್ತ ಪುನಶ್ಚೇತನಗೊಳಿಸುತ್ತಿರುವ ಮತ್ತೊಂದು ಜಾತ್ರೆ ಇನ್ನೆಲ್ಲೂ ಇರಲಾರದೇನೋ ಅನಿಸುತ್ತದೆ!

ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಕಪಿಲಾ ತೀರದ ಸುತ್ತೂರು ಶ್ರೀ ಕ್ಷೇತ್ರ ಮತ್ತು ಇಲ್ಲಿನ ಗುರು ಪರಂಪರೆ ಹಾಗೂ ಶ್ರೀ ಮಠದ ವಿಶಿಷ್ಟತೆಯೇ ಅದ್ಭುತ. ಅದರಲ್ಲೂ ಇಲ್ಲಿ ಪ್ರತಿ ವರ್ಷ ಸಾಮಾನ್ಯವಾಗಿ ಜನವರಿ ತಿಂಗಳಲ್ಲಿ ಜರುಗುವ "ಸುತ್ತೂರು ಜಾತ್ರೆ" ಎಂದೇ ವಿಶ್ವ ವಿಖ್ಯಾತಿ ಹೊಂದಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವಂತೂ ಇನ್ನೂ ಮಹದದ್ಭುತ. ಇಂಥಾ ಚೆಂದದ ಸುತ್ತೂರು ಜಾತ್ರೆಯಲ್ಲಿ ಏನಿಲ್ಲ ಎನ್ನುವಂತಿಲ್ಲ. ಎಲ್ಲಾ ರೀತಿಯ ಪಾರಂಪರಿಕ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಜನಪದೀಯ, ಸಾಂಸ್ಕೃತಿಕ ಮಹೋತ್ಸವಗಳ ಮಹಾ ಸಂಗಮವಿದು.

ಒಟ್ಟಾರೆ ಆರು ದಿನಗಳು ಬಹು ವೈವಿಧ್ಯಮಯವಾಗಿ ನಡೆಯುವ ಸುತ್ತೂರು ಜಾತ್ರೆಯಲ್ಲಿ ಮೊದಲ ದಿನ ಶ್ರೀಮಠದಿಂದ ಆದಿ ಜಗದ್ಗುರು ಶಿವಯೋಗಿಗಳ ಉತ್ಸವ ಮೂರ್ತಿಯನ್ನು ಕರ್ತೃಗದ್ದುಗೆಗೆ ಬಿಜಯಂಗೈಸಿಕೊಳ್ಳಲಾಗುವುದು. ಎರಡನೇ ದಿನ ಸಹಸ್ರ ಕುಂಭೋತ್ಸವ, ಮೂರನೇ ದಿನ ಬೆಳಿಗ್ಗೆ ರಥೋತ್ಸವ, ನಾಲ್ಕನೇ ದಿನ ಸಂಜೆ ಶ್ರೀ ಮಹದೇಶ್ವರ ಕೊಂಡೋತ್ಸವ ಮತ್ತು ಮುತ್ತಿನ ಪಲ್ಲಕ್ಕಿ ಉತ್ಸವ, ಐದನೇ ದಿನ ರಾತ್ರಿ ಲಕ್ಷ ದೀಪೋತ್ಸವದ ಮಹಾ ಬೆಳಕಿನಲ್ಲಿ ತೆಪ್ಪೋತ್ಸವ, ಆರನೇ ದಿನ ಅನ್ನಬ್ರಹ್ಮೋತ್ಸವ ಹಾಗೂ ಶ್ರೀ ವೀರಭದ್ರೇಶ್ವರ ಕೊಂಡೋತ್ಸವಗಳು ಲಕ್ಷಾಂತರ ಭಕ್ತ ಸಮೂಹದ ನಡುವೆ ಜರುಗುತ್ತವೆ. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರದಲ್ಲಿರುವ ಕರ್ತೃಗದ್ದುಗೆ ಮತ್ತು ಪುರಾಣ ಪ್ರಸಿದ್ಧ ಶ್ರೀಸೋಮೇಶ್ವರ, ಶ್ರೀಮಹದೇಶ್ವರ, ಶ್ರೀಶಂಕರನಾರಾಯಣ, ಶ್ರೀವೀರಭದ್ರೇಶ್ವರ, ಶ್ರೀನಾರಾಯಣಸ್ವಾಮಿ ದೇವಾಲಯಗಳಲ್ಲಿ ತ್ರಿಕಾಲ ಪೂಜೆ, ಮಹಾ ರುದ್ರಾಭಿಷೇಕ, ನವನೀತಾಲಂಕಾರ, ಹಸಿರುವಾಣಿ ಅಲಂಕಾರ ಹಾಗೂ ಗುರು ಪರಂಪರೆಯ ಸಂಸ್ಮರಣೋತ್ಸವಗಳು ಭಕ್ತಿಯ ದ್ಯೋತಕವಾಗಿ ನಡೆಯುತ್ತವೆ. ಶ್ರೀಮಠದ ಸಕಲ ಬಿರುದಾವಳಿಗಳ ಸಮೇತ, ಛತ್ರಿ, ಚಾಮರ, ಸೂರಾಪಾನಿ, ಗಾರುಡಿಗೊಂಬೆ, ಮರಗಾಲು ಕುಣಿತ, ನೃತ್ಯ, ವೀರಗಾಸೆ, ಡೊಳ್ಳು ಹಾಗೂ ಪೂಜಾ ಕುಣಿತ, ಕರಡಿ ಮೇಳ, ನಾದಸ್ವರಗಳೊಂದಿಗೆ ಬೇರೆ ಬೇರೆ ರಾಜ್ಯಗಳ ವಿವಿಧ ಜನಪದ ಕಲಾತಂಡಗಳು ಮೇಳೈಸಿ ಜರುಗುವ ಸುತ್ತೂರು ಜಾತ್ರೆಯ ವೈಭವವನ್ನು ನೋಡಿಯೇ ಸವಿಯಬೇಕು.

ಧಾರ್ಮಿಕ ಉತ್ಸವಗಳ ಜೊತೆಗೆ ವಾರಪೂರ್ತಿ ಆರೋಗ್ಯ ಮೇಳ, ಕೃಷಿ ಮೇಳ, ಉತ್ಪಾದಕ ಮತ್ತು ಗ್ರಾಹಕ ಮೇಳ, ಕ್ರೀಡಾ ಮೇಳ, ಸಾಂಸ್ಕೃತಿಕ ಮೇಳ, ಶೈಕ್ಷಣಿಕ ಮೇಳ, ಸಾಹಿತ್ಯ ಮತ್ತು ಪುಸ್ತಕ ಮೇಳ, ಸರ್ವಧರ್ಮ ಸಮ್ಮಿಲನ, ಸಾಮೂಹಿಕ ವಿವಾಹ, ವಿವಿಧ ವಸ್ತುಪ್ರದರ್ಶನಗಳು, ಜನಗಳಷ್ಟೇ ಜಾನುವಾರುಗಳಿಗೂ ಆದ್ಯತೆ ನೀಡುವ ದನಗಳ ಪರಿಷೆ, ಜಾನಪದ ಜಾತ್ರೆ, ಕುಸ್ತಿ ಪಂದ್ಯಾವಳಿ, ನಗೆ ಉತ್ಸವ, ನಾಟಕ, ನೃತ್ಯ, ವಚನಗಾಯನ, ಸುಗಮ ಸಂಗೀತ, ಯಕ್ಷಗಾನ... ಹೀಗೆ ಎಲ್ಲಾ ರೀತಿಯ ಕಾರ್ಯಕ್ರಮಗಳು, ಉತ್ಸವಗಳು ಇಲ್ಲಿ ಸಾರ್ಥಕ ರೀತಿಯಲ್ಲಿ ನಡೆಯುತ್ತವೆ. ಅಲ್ಲದೆ ಸಾಮಾಜಿಕ ಜಾಗೃತಿ ಉಂಟು ಮಾಡುವಲ್ಲಿ "ಸುತ್ತೂರು ಜಾತ್ರೆ" ಯಂತೂ ಸಂಪೂರ್ಣವಾಗಿ ತನ್ನನ್ನು ತೆರೆದುಕೊಳ್ಳುತ್ತದೆ.

ಶ್ರೀ ಕ್ಷೇತ್ರದ ಇತಿಹಾಸ: ಸುಮಾರು ಒಂದು ಸಾವಿರ ವರ್ಷಗಳ ಹಿಂದಿನ ಕಥೆ, ಕಂಚಿಯ ರಾಜೇಂದ್ರ ಚೋಳನಿಗೂ ತಲಕಾಡಿನ ಗಂಗರಾಜ ರಾಚಮಲ್ಲನಿಗೂ ಬಹಳ ಕಾಲದಿಂದಲೂ ಇದ್ದ ರಾಜಕೀಯ ದ್ವೇಷಾಗ್ನಿಯಿಂದ ಇವರಿಬ್ಬರೂ ಯುದ್ಧೋನ್ಮಾದದಲ್ಲಿ ಮುಳುಗಿ ಒಬ್ಬರನ್ನೊಬ್ಬರು ಕೊಲ್ಲಲು ಭಾರಿ ಸೈನ್ಯದೊಡನೆ ಕಾದಾಟಕ್ಕೆ ನುಗ್ಗುತ್ತಾರೆ. ಆಗ ರಾಜೇಂದ್ರ ಚೋಳನ ಕುದುರೆ ಏನು ಮಾಡಿದರೂ ಹಿಡಿತಕ್ಕೆ ಸಿಗದೆ ಶರವೇಗದಲ್ಲಿ ಮಿಂಚಿನಂತೆ ಓಡುತ್ತದೆ. ಹೀಗೆ ಓಡಿ ಬಂದ ಕುದುರೆ ದಕ್ಷಿಣಕಾಶಿ ಎಂದೇ ಹೆಸರಾದ ಕಪಿಲಾ ನದಿ ತೀರದಲ್ಲಿ ತಪಸ್ಸಿನಲ್ಲಿ ನಿರತರಾಗಿದ್ದ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಸುತ್ತ ಭಕ್ತಿಯಿಂದ ಪ್ರದಕ್ಷಿಣೆ ಹಾಕಿ ಅವರ ಬಳಿ ಶಾಂತವಾಗಿ ನಿಲ್ಲುತ್ತದೆ. ತನ್ನ ಮೆಚ್ಚಿನ ಕುದುರೆಯ ವರ್ತನೆ ಕಂಡು ಅಚ್ಚರಿಗೊಂಡ ರಾಜೇಂದ್ರ ಚೋಳ ಅಲ್ಲಿ ಧ್ಯಾನಮಗ್ನರಾಗಿದ್ದ ಶ್ರೀಶಿವರಾತ್ರೀಶ್ವರ ಶಿವಯೋಗಿ ಮಹಾಮುನಿಗಳನ್ನು ಕಂಡು ಮತ್ತಷ್ಟು ಮಹದಾಶ್ಚರ್ಯದಿಂದ ಕೂಡಲೇ ಕುದುರೆಯಿಂದಿಳಿದು ಭಕ್ತಿಯಿಂದ ಅವರ ಪಾದಕಮಲಗಳಿಗೆರಗಿ ಪೂಜಿಸುತ್ತಾನೆ. ಅಷ್ಟರಲ್ಲಿ ಇವನನ್ನು ಹಿಂಬಾಲಿಸಿಕೊಂಡು ಬಂದ ರಾಚಮಲ್ಲನೂ ಅಲ್ಲಿನ ಘಟನೆ ನೋಡಿ ಶ್ರೀಶಿವರಾತ್ರೀಶ್ವರರಿಗೆ ತಾನು ಶಿರಬಾಗಿ ನಮಿಸುತ್ತಾನೆ. ಆಗ ಧ್ಯಾನದಿಂದ ಕಣ್ತೆರೆದ ತೇಜೋಮೂರ್ತಿ ಶ್ರೀಶಿವರಾತ್ರೀಶ್ವರ ಮಹಾ ಮುನಿಗಳು ಯುದ್ಧದಿಂದಾಗುವ ಅನಾಹುತ ಮತ್ತು ದುರಂತಗಳನ್ನು ವಿವರಿಸಿ ಶಾಂತಿ, ಸಂಯಮ, ಸಹಬಾಳ್ವೆಯಲ್ಲಿ ಮನುಷ್ಯತ್ವದಿಂದ ಬದುಕಬೇಕೆಂದು ಉಪದೇಶಿಸಿ ಇಬ್ಬರಿಗೂ ಆಶೀರ್ವದಿಸುತ್ತಾರೆ. ಆ ಕ್ಷಣ ಅವರಿಬ್ಬರಲ್ಲಿದ್ದ ದ್ವೇಷದ ಅಗ್ನಿ ತಣ್ಣಗಾಗಿ ಯುದ್ಧೋನ್ಮಾದ ಇಳಿಯುತ್ತದೆ. ಮಾನವತೆಯ ಮಹಾಬೆಳಕು ಪ್ರಜ್ವಲಿಸಿ ಅವರಲ್ಲಿ ಪರಿವರ್ತನೆಯ ಹೂವು ಅರಳಿ ರಾಜರೀರ್ವರೂ ಯುದ್ಧಕ್ಕೆ ತಿಲಾಂಜಲಿ ಹೇಳುತ್ತಾರೆ. ಮತ್ತು ತಮಗೆ ದರ್ಶನ ನೀಡಿದ ಈ ಪುಣ್ಯ ಸ್ಥಳದಲ್ಲಿಯೇ ತಾವು ನೆಲೆಗೊಳ್ಳಬೇಕೆಂದು ಶ್ರೀ ಶಿವರಾತ್ರೀಶ್ವರ ಮುನಿಗಳಲ್ಲಿ ಕೋರಿಕೊಂಡು ಅವರು ಅಲ್ಲೇ ನೆಲೆಸುವಂತೆ ಮಾಡುತ್ತಾರೆ. ಆ ಪುಣ್ಯ ಸ್ಥಳವೇ ಈ ಸುತ್ತೂರು ಶ್ರೀ ಕ್ಷೇತ್ರ. ಮಾನವತೆಯ ನೆಲೆಯಲ್ಲಿ ಆದಿಗುರು ಶ್ರೀಶಿವರಾತ್ರೀಶ್ವರರಿಂದ ಉದಯವಾದ ಇಲ್ಲಿನ ಸುತ್ತೂರು ವೀರಸಿಂಹಾಸನ ಮಠವು ಹತ್ತು ಶತಮಾನಗಳಿಗೂ ಮೀರಿದ ಸುದೀರ್ಘ ಪರಂಪರೆಯನ್ನು ಹೊಂದಿದ್ದು, ಆದಿಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ (ಕ್ರಿ.ಶ. 950–1030) ಆದಿಯಾಗಿ ರಾಜಗುರುತಿಲಕ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು (1926–1986) ಸೇರಿದಂತೆ ಇಪ್ಪತ್ಮೂರು ಸಾರ್ಥಕ ಜಗದ್ಗುರುಗಳ ಸೇವಾ ಕೈಂಕರ್ಯಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿದೆ. ಮಾನವ ಕುಲದ ಉದ್ಧಾರಕ್ಕಾಗಿ ಈ ಮಹಾತ್ಮರೆಲ್ಲರೂ ಕಂಡ ಮಹಾ ಕನಸುಗಳನ್ನೆಲ್ಲಾ ಸಾಕಾರಗೊಳಿಸುವತ್ತ ಟೊಂಕಕಟ್ಟಿ ನಿಂತಿರುವ ಪ್ರಸ್ತುತ 1986 ರಿಂದ 24ನೇ ಪೀಠಾಧಿಕಾರಿಗಳಾಗಿ ಕಾಯಕ ನಿರತರಾಗಿರುವ ಕಾಯಕ ಯೋಗಿ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಎಲ್ಲಕ್ಕಿಂತ ಮಿಗಿಲಾಗಿ "ಶಿಕ್ಷಣಯಜ್ಞ" ವನ್ನು ನಡೆಸಿ ಇಡೀ ಜಗತ್ತೇ ಸುತ್ತೂರಿನತ್ತ ಸುಳಿಯುವಂತೆ ಮಾಡಿದ್ದಾರೆ.

ಶೈಕ್ಷಣಿಕ ಸಾಧನೆ: ಶಿಕ್ಷಣದ ವಿಷಯಕ್ಕೆ ಬಂದರೆ ಸುತ್ತೂರು ಶ್ರೀ ಮಠದ ಶೈಕ್ಷಣಿಕ ಸಾಧನೆಗೆ ಸರಿಗಟ್ಟುವ ಮಠವೇ ಆಗಲಿ, ಸಂಸ್ಥೆಯೇ ಆಗಲಿ ಬಹುಶಃ ಇಡೀ ವಿಶ್ವದಲ್ಲೇ ಮತ್ತೊಂದಿರಲಾರದೇನೋ! ಹಾಗೆಯೇ ಇದರ ಹಿಂದಿನ ಧೀಶಕ್ತಿಯಾಗಿ ಶಿಕ್ಷಣ ಯಜ್ಞವನ್ನು ಒಂದು ತಪಸ್ಸು ಮಾಡಿಕೊಂಡಿರುವ ದೂರದೃಷ್ಟಿಯುಳ್ಳ ಇಂಥ ಪವಾಡ ಸದೃಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳಂಥವರೂ ಕೂಡ ಪ್ರಪಂಚದಲ್ಲಿ ಅಪರೂಪವೆ! ಊಟ ಮತ್ತು ವಸತಿಗಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅನುಭವಿಸುತ್ತಿದ್ದ ಕಷ್ಟವನ್ನು ಕಂಡು ಹಿಂದಿನ ಜಗದ್ಗುರುಗಳಾಗಿದ್ದ ರಾಜಗುರು ತಿಲಕ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಬಾಡಿಗೆ ಮನೆಯೊಂದರಲ್ಲಿ 1941 ರಲ್ಲಿ ಕೇವಲ ಹನ್ನೆರಡು ಮಂದಿ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯ ಆರಂಭಿಸಿ ಅನ್ನ ಮತ್ತು ಶಿಕ್ಷಣ ದಾಸೋಹದ ಬೀಜ ಬಿತ್ತಿದ್ದರು. ಹಲವಾರು ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಉದಯದೊಡನೆ ಗಿಡವಾಗಿ ಬೆಳೆಯತೊಡಗಿ ಇದೀಗ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳ ಕಾಲದಲ್ಲಿ "ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ" ಎಂಬ ನಾಮಾಂಕಿತದಲ್ಲಿ ಹೆಮ್ಮರವಾಗಿ ಬೆಳೆದಿದೆ. ಒಂದು ರೀತಿಯಲ್ಲಿ ಸುತ್ತೂರು ಶ್ರೀ ಕ್ಷೇತ್ರ ಜೆ.ಎಸ್.ಎಸ್. ಮಹಾವಿದ್ಯಾಪೀಠದಿಂದಾಗಿ "ಶಿಕ್ಷಣ ಕಾಶಿ"ಯಾಗಿ ರೂಪುಗೊಂಡಿದೆ.

ಶಿಶುವಿಹಾರದ ವಿದ್ಯಾರ್ಥಿಯಾಗಿ ಇಲ್ಲಿಗೆ ಪ್ರವೇಶಿಸಿದರೆ ಸಾಕು, ಉನ್ನತ ಪದವಿಯೊಡನೆ ಶಿಕ್ಷಕನೋ, ವೈದ್ಯನೋ, ವಿಜ್ಞಾನಿಯೋ, ಇಂಜಿನಿಯರೋ, ಆಡಳಿತಗಾರನೋ ಆಗಿ ಇಲ್ಲಿಂದ ಹೊರಹೊಮ್ಮಿ ಬರಬಹುದು. ಅಷ್ಟರಮಟ್ಟಿಗೆ ಶಿಶುವಿಹಾರದಿಂದ ಹಿಡಿದು ವೈದ್ಯಕೀಯ, ತಾಂತ್ರಿಕ ಕಾಲೇಜುಗಳ ತನಕ ಎಲ್ಲಾ ಬಗೆಯ ಉನ್ನತ ಶಿಕ್ಷಣಗಳೂ ಇಲ್ಲಿ ಲಭ್ಯ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಇಲ್ಲಿ ಯಾವುದೂ ಇಲ್ಲ ಎನ್ನುವಂತಿಲ್ಲ. ಹತ್ತಾರು ಪ್ರಾಥಮಿಕ ಶಿಕ್ಷಕರ ಮತ್ತು ಪ್ರೌಢ ಶಿಕ್ಷಕರ ತರಬೇತಿಯ ಡಿ.ಎಡ್, ಬಿ.ಎಡ್, ಸಿ.ಪಿ.ಎಡ್, ಬಿ.ಪಿ.ಎಡ್ ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳು, ಪದವಿ ಪೂರ್ವ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಆಯುರ್ವೇದ ಕಾಲೇಜುಗಳು, ಕಾನೂನು ಕಾಲೇಜುಗಳು, ಹಿಂದಿ ವಿದ್ಯಾಲಯ, ಸಂಸ್ಕೃತ ಪಾಠಶಾಲೆ, ನರ್ಸಿಂಗ್ ಕಾಲೇಜುಗಳು, ಫಾರ್ಮಸಿ ಕಾಲೇಜುಗಳು, ಕೇಂದ್ರೀಯ ಶಾಲೆಗಳು, ವೃತ್ತಿಪರ ಶಿಕ್ಷಣ ಸಂಸ್ಥೆಗಳು, ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಐನೂರಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳು ಇಲ್ಲಿ ಜ್ಞಾನದೀಪಗಳಾಗಿ ಬೆಳಗುತ್ತಿವೆ. ಸುತ್ತೂರಿನಂತಹ ಪುಟ್ಟ ಗ್ರಾಮದಿಂದ ಹಿಡಿದು ದೂರದ ಅಮೆರಿಕಾದಂಥ ವಿದೇಶಗಳ ವರೆಗೂ ಜೆಎಸ್‌ಎಸ್ ವಿದ್ಯಾಸಂಸ್ಥೆಗಳು ವಿಸ್ತಾರಗೊಂಡಿವೆ. ಸದಾಶಯದಿಂದ ಶಿಕ್ಷಣ ಬೀಜವನ್ನು ಬಿತ್ತಿದ್ದು ಹಿಂದಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಅವರಾದರೂ ಅವರ ಆಶಯವನ್ನೂ ಮೀರಿ ಅದನ್ನು ಅತ್ಯದ್ಭುತವಾಗಿ ಬೆಳೆಸಿದ ಕೀರ್ತಿ ಇಂದಿನ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳಿಗೆ ಸಂಪೂರ್ಣವಾಗಿ ಸಲ್ಲುತ್ತದೆ. ಅಂದು ಕೇವಲ ಹನ್ನೆರಡು ವಿದ್ಯಾರ್ಥಿಗಳಿಂದ ಬಾಡಿಗೆ ಮನೆಯಲ್ಲಿ ಆರಂಭವಾದ ಶಿಕ್ಷಣ ಕೈಂಕರ್ಯ ಇಂದು ಸ್ವಂತ ನೆಲದಲ್ಲಿ ವಿಶ್ವದ ಉದ್ದಗಲಕ್ಕೂ ಹಿಮಾಲಯದಂತೆ ಬೆಳೆದಿದ್ದು ಅರ್ಧ ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಜೆ.ಎಸ್.ಎಸ್. ಮಹಾವಿದ್ಯಾಪೀಠದ ಬೃಹತ್ ಆಲದ ನೆರಳಿನಲ್ಲಿದ್ದಾರೆಂದರೆ ಇದರ ಚೈತನ್ಯ ಶಕ್ತಿಯಾಗಿರುವ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಶಿಕ್ಷಣ ಯಜ್ಞಕ್ಕೆ ಎಂಥವರೂ ಶರಣೆನ್ನಲೇಬೇಕು.

ಪ್ರತಿವರ್ಷ ಪರಂಪರಾನುಗತವಾಗಿ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜರುಗುವ ಸುತ್ತೂರು ಜಾತ್ರಾ ಮಹೋತ್ಸವವಂತೂ ಇಡೀ ದೇಶ ಇತ್ತ ತಿರುಗಿ ನೋಡುವಂಥಾದ್ದು. ಇಂದಿನ ಆಧುನಿಕ ಸಮಾಜದ ಅಭಿವೃದ್ಧಿಗೆ ಪೂರಕವಾದ ಹಲವು ಹತ್ತು ಸಾರ್ಥಕ ಕಾರ್ಯಕ್ರಮಗಳು ಇಲ್ಲಿ ಮೇಳೈಸಿ ಸುತ್ತೂರಿಗೆ ಸುತ್ತೂರೇ ನಾಡಿನ ಲಕ್ಷಾಂತರ ಜನ ಸಮೂಹದಿಂದ ಜಾತ್ರೆಯಲ್ಲಿ ಸಂಭ್ರಮಿಸುವುದುಂಟು.

ಮಕ್ಕಳ ಚಿತ್ರಕಥೆ

'ಸೈನಿಕರಿಗೆ ಒಂದು ಸಲಾಂ...!'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ಯೋಗ್ಯ ಭಾರತೀಯನಾಗಿ, ಏಕೆಂದರೆ ನಿಮ್ಮನ್ನು ಉಳಿಸಲು ಸೈನಿಕ ಗಡಿಯಲ್ಲಿ ಕಾದಾಡುತ್ತಿದ್ದಾನೆ....!



ತಮ್ಮ ಉಸಿರನ್ನು ಪಣಕ್ಕಿಟ್ಟು ಹೋರಾಡುವ ಯೋಧರು ನಮ್ಮ ಸುಖ ನಿದ್ರೆ, ನೆಮ್ಮದಿಗೆ ಕಾರಣಕರ್ತರು.



ಸುಡುವ ಬಿಸಿಲಿನಲ್ಲಿಯೂ, ಕೊರೆವ ಮಂಜಿನಲ್ಲಿಯೂ ಸೇವೆ ಸಲ್ಲಿಸುತ್ತಾ, ನಾನು ಆರಾಮವಾಗಿದ್ದೇನೆ ಎನ್ನುವವ ಸೈನಿಕ ಮಾತ್ರ..!




ಭಾರತದ ಬಾವುಟ ಹಾರಾಡುತ್ತಿರುವುದು ಗಾಳಿಯಿಂದಲ್ಲಾ... ನಮ್ಮ ಯೋಧರ ಉಸಿರಿನಿಂದ...!



ದೇವರು, ಭೂತಾಯಿ, ತಂದೆ-ತಾಯಿ, ಗುರುಗಳು ಹೇಗೆ ಪ್ರಾತಃಸ್ಮರಣೀಯರೋ, ಹಾಗೆಯೇ ನಮ್ಮ ವೀರಯೋಧರೂ ಸಹ ಅವರ ಸಾಲಿನಲ್ಲಿ ನಿಲ್ಲುವರು.



ತಾಯಿಯಿಂದ ಕಲಿತ ಪಾಠ, ಸೈನಿಕನಿಂದ ಕಲಿತ ಶಿಸ್ತು ಎಂದೂ ತಪ್ಪು ದಾರಿ ಹಿಡಿಸಲು ಸಾಧ್ಯವಿಲ್ಲ...ಜೈ ಹಿಂದ್....!



ವಾರಭವಿಷ್ಯ

26.01.2025 ರಿಂದ 01.02.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಚಂದ್ರ-ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ-ಮಿಥುನ, ಬುಧ-ಮಕರ, ಗುರು-ವೃಷಭ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

'ಸಮಯಕ್ಕಾದವನೇ ನೆಂಟ', ದೈವ ಸಹಾಯ ಮನುಷ್ಯ ರೂಪದಲ್ಲೇ ಬರುವುದು. ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ಎದುರಾಗುವ ಸಂಕಟಗಳನ್ನು ಮೀರಿ ನಿಲ್ಲುವಿರಿ. ಹೊಸ ಮಿತ್ರರ ಪರಿಚಯವಾಗುವುದು. ದೈನಂದಿನ ಕೆಲಸಗಳು ನೀವಂದುಕೊಂಡಂತೆ ಸಾಗಲಿದೆ. ಸರ್ಕಾರಿ ನೌಕರರಿಗೆ ಬಡ್ತಿ ದೊರೆಯುವ ಸಂಭವವಿದೆ. ಲಘು ಪ್ರವಾಸಗಳ ಜೊತೆ ಪುಣ್ಯಕ್ಷೇತ್ರ ಸಂದರ್ಶನ.

ಶ್ರೀ ಸುಬ್ರಹ್ಮಣ್ಯ ಸ್ತುತಿ, ಶುಭ ಸಂಖ್ಯೆ-5

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಯಾವುದೇ ಕೆಲಸವನ್ನು ಆತುರಪಡದೆ ಸುದೀರ್ಘವಾಗಿ ಆಲೋಚಿಸಿ ಮಾಡಿ. ಸ್ವಲ್ಪ ಒತ್ತಡದ ಸನ್ನಿವೇಶಗಳನ್ನು ಎದುರಿಸಬೇಕಾಗುವುದು. ವರಮಾನಕ್ಕಿಂತ ಖರ್ಚು ಹೆಚ್ಚಾಗುವುದು. ಹಾಗೂ ಸಾಲ ಮಾಡಬೇಕಾದ ಪರಿಸ್ಥಿತಿ ಉಂಟಾಗುವುದು. ವಾರದ ಉತ್ತರಾರ್ಧದಲ್ಲಿ ವೃತ್ತಿಪರ ವ್ಯವಹಾರಗಳು ಕೊಂಚ ಆಶಾದಾಯಕವಾಗಿ ನಡೆಯುವುದು. ಆರೋಗ್ಯದಲ್ಲಿ ಏರುಪೇರು, ವೈದ್ಯರ ಸಂದರ್ಶನ.

ಶ್ರೀ ಚಾಮುಂಡೀ ದರ್ಶನ. ಶುಭ ಸಂಖ್ಯೆ-6

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸದ್ಯದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದರಲ್ಲೇ ನಿಮ್ಮ ಸಮಯ ವ್ಯಯವಾಗುವುದು. ನಿರೀಕ್ಷಿತ ಧನ ಕೈಗೆ ಬಂದರೂ ವ್ಯಯಸ್ಥಿತ ಗುರುವಿನಿಂದಾಗಿ ಕೈಯಲ್ಲಿ ನಿಲ್ಲದು. ಸಮಾಧಾನವೇನೆಂದರೆ ಅಪವ್ಯಯವಾಗದು. ದುಬಾರಿ ವಸ್ತುಗಳನ್ನು ಖರೀದಿಸುವಿರಿ. ದೂರ ಪ್ರಯಾಣಗಳು ಸಂಭವಿಸಲಿದೆ. ತಾಳ್ಮೆಯಿಂದಲೂ, ಜಾಗರೂಕತೆಯಿಂದಲೂ ಡ್ರೈವಿಂಗ್ ಮಾಡಿ. ಅಮೂಲ್ಯ ಆಭರಣ ಉಟ್ಟ ಮಹಿಳೆಯರು ಎಚ್ಚರವಾಗಿರಿ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-2

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಇಚ್ಛಿತ ಮುಖ್ಯ ಕೆಲಸಗಳು ಕೈಗೂಡುವುದು. ಆಸ್ತಿ ವಿಚಾರಗಳು ಗಣ್ಯವ್ಯಕ್ತಿಗಳ ಮಧ್ಯಸ್ಥಿಕೆಯಿಂದ ಅನುಕೂಲವಾಗುವುದು. ನೆರೆಹೊರೆಯಲ್ಲಿ ಸೌಹಾರ್ದತೆಯಿಂದಿರಲು ಪ್ರಯತ್ನಿಸಿ. ನಿಮ್ಮ ಮನೋಭಿಲಾಷೆ ಈಡೇರಲು ಮಾತೃಶ್ರೀಯವರ ಸಹಾಯ ದೊರಕುವುದು. ಸಹೋದರ ಸಂಬಂಧಿಗಳಲ್ಲಿ ವಾದ-ವಿವಾದಗಳು ಉಂಟಾಗುತ್ತವೆ. ತಾಳ್ಮೆಯಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ.

ಶ್ರೀ ದುರ್ಗಾ ಸ್ತುತಿ, ಶುಭ ಸಂಖ್ಯೆ-3

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದಾರಂಭಕ್ಕೆ ಯತ್ನ ಕಾರ್ಯದಲ್ಲಿ ಸಫಲತೆ. ಕುಟುಂಬ ಸೌಖ್ಯಕ್ಕೆ ಹೇರಳ ಧನ ವ್ಯಯ. ಸಮಾಜದಲ್ಲಿ ಗೌರವ ಪ್ರಾಪ್ತಿ. ಷೇರು ವ್ಯವಹಾರಗಳಲ್ಲಿ ನಷ್ಟ ಸಂಭವ. ದೂರ ಪ್ರಯಾಣದಲ್ಲಿ ಅಡ್ಡಿ, ಆತಂಕಗಳು. ಮಹಿಳೆಯರಿಗೆ ಕೆಲಸ ಒತ್ತಡ ಹೆಚ್ಚಲಿದೆ. ವಾರಾಂತ್ಯಕ್ಕೆ ಸಾಲಗಾರರ ಒತ್ತಡ. ಮಾನಸಿಕ ತೊಳಲಾಟ. ಕಳ್ಳ ಕಾಕರಿಂದ ಜಾಗೃತರಾಗಿರಿ. ಪುಣ್ಯ ಕ್ಷೇತ್ರ ಸಂದರ್ಶನದಿಂದ ಮಾನಸಿಕ ನೆಮ್ಮದಿ.

ಶ್ರೀ ಗುರುರಾಯರ ದರ್ಶನ, ಶುಭ ಸಂಖ್ಯೆ-4

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನ್ಯಾಯ ಮಾರ್ಗದಲ್ಲಿ ನಡೆದರೆ ನೀವಂದುಕೊಂಡಂತೆ ಕಾರ್ಯಸಿದ್ಧಿಯನ್ನು ಹೊಂದುವಿರಿ. ನಿಮ್ಮ ಭಾಗ್ಯದಲ್ಲಿ ಅನಿರೀಕ್ಷಿತ ವೃದ್ಧಿಗೆ ಗುರುಗ್ರಹ ಕರುಣೆ ತೋರಲಿದ್ದಾನೆ. ನಿಮ್ಮ ಅವಿರತ ಶ್ರಮ ಈಗ ಫಲ ನೀಡುವ ಕಾಲ ಬಂದಿದೆ. ನೂತನ ವಸ್ತ್ರ, ವಾಹನ, ಖರೀದಿಯ ಯೋಗವಿದೆ. ಮನೆಯಲ್ಲಿ ಮಂಗಳ ಕಾರ್ಯ ಜರುಗುವುದು. ಆಸ್ತಿ ಮಾರಾಟದ ವಿಚಾರಗಳು ಕೈಗೂಡದೆ ನಿರಾಶೆಯನ್ನು ಅನುಭವಿಸುವಿರಿ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪ. ಶುಭ ಸಂಖ್ಯೆ-6

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ಚಂದ್ರಗ್ರಹ ಸಂಚಾರ ಶುಭವಿದೆ. ಧನ, ಕನಕ, ವಸ್ತು, ವಾಹನ ಹೊಂದುವ ನಿಮ್ಮ ಪ್ರಯತ್ನದಲ್ಲಿ ಸಫಲತೆಯನ್ನು ಕಾಣುವಿರಿ. ಧೈರ್ಯ, ಸಾಹಸಗಳಿಂದ ನಿರ್ಧಾರಗಳನ್ನು ಕೈಗೊಳ್ಳಬಹುದು. ರಾಜಕಾರಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು. ವಾರದ ಕಡೆಗೆ ಯಾರೋ ಮಾಡಿದ ತಪ್ಪಿಗೆ ನೀವು ಬಲಿಪಶು ಆಗುವ ಸಾಧ್ಯತೆ. ಆರೋಗ್ಯದ ಬಗ್ಗೆ ವಿಶೇಷ ಕಾಳಜಿಯ ಅಗತ್ಯವಿದೆ.

ಶ್ರೀ ಶಕ್ತಿ ದೇವತೆ ಅರ್ಚನೆ. ಶುಭ ಸಂಖ್ಯೆ-8

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಅವರಿವರು ಹೇಳಿದ್ದಕ್ಕೆಲ್ಲಾ ಮಹತ್ವ ಕೊಡಬೇಡಿ. 'ಜಾಣಕಿವುಡು ಬುದ್ಧಿವಂತರ ಲಕ್ಷಣ'. ವಿವಿಧ ಮೂಲಗಳಿಂದ ಹಣ ಸಂಪಾದನೆ ಆಗುವುದು. ಭವಿಷ್ಯದ ಕಷ್ಟ ಕಾಲಕ್ಕೆ ಉಳಿಸಿ. ವಿವಾಹ ಯೋಗ್ಯರಿಗೆ ಸೂಕ್ತ ಬಾಳ ಸಂಗಾತಿ ದೊರೆಯುವರು. ನ್ಯಾಯವಾದಿಗಳಿಗೆ ದೊಡ್ಡ ಕಕ್ಷಿಗಾರರು ದೊರೆಯುವರು. ವಿದ್ಯಾ, ವ್ಯಾಸಂಗಗಳಲ್ಲಿ ಪ್ರಶಸ್ತಿಗೆ ಪಾತ್ರರಾಗುವಿರಿ. ವಿದ್ಯುತ್ ಉಪಕರಣಗಳಿಂದ ಜಾಗೃತರಾಗಿರಿ.

ಶ್ರೀ ಗಣಪತಿ ಆರಾಧನೆ, ಶುಭ ಸಂಖ್ಯೆ-7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಆದಿಗೆ ಆದಾಯದಲ್ಲಿ ಹೆಚ್ಚಳ. ಸ್ತ್ರೀಯರೊಬ್ಬರ ಸಹಾಯದಿಂದ ಪ್ರಯತ್ನ ಕಾರ್ಯಗಳಲ್ಲಿ ಜಯ. ಕಚೇರಿಯಲ್ಲಿ ಸಹೋದ್ಯೋಗಿಗಳ ಸಹಕಾರದಿಂದ ನೆಮ್ಮದಿ. ಬ್ಯೂಟಿ ಪಾರ್ಲರ್‌ನವರಿಗೆ ಭರಪೂರ ವ್ಯಾಪಾರ. ವಿದ್ಯಾರ್ಥಿಗಳಿಗೆ ಅಭ್ಯಾಸದ ಮೇಲೆ ಏಕಾಗ್ರತೆಯ ಕೊರತೆ. ಎಣ್ಣೆಕಾಳು, ದ್ವಿದಳ ಧಾನ್ಯ ವ್ಯಾಪಾರಿಗಳಿಗೆ ಹೇರಳ ಧನಲಾಭ. ಅಧಿಕ ಪ್ರಯಾಣಗಳಿಂದ ದೇಹಾಯಾಸ.

ಶ್ರೀ ಸಾಯಿಬಾಬಾ ಪೂಜೆ. ಶುಭ ಸಂಖ್ಯೆ-9

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆದಿಗೆ ಯತ್ನ ಕಾರ್ಯಗಳಲ್ಲಿ ಯಶಸ್ಸು. ಕುಟುಂಬದಲ್ಲಿ ಹರುಷದ ವಾತಾವರಣ. ಷೇರು ವ್ಯವಹಾರಗಳಲ್ಲಿ ಲಾಭ. ನಿರೀಕ್ಷಿತ ಹಣ ಕೈ ಸೇರುವುದು. ಸದಾಚಾರಿಗಳೆನಿಸಿ ಸಮಾಜದ ಗೌರವಕ್ಕೆ ಭಾಜನರಾಗುವಿರಿ. ಪೂರ್ವ ದಿಕ್ಕಿನ ಪ್ರಯಾಣದಿಂದ ಅನುಕೂಲ. ಸಾಡೇಸಾತಿ ಪ್ರಭಾವವೂ ಉಂಟು. ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಬಹುದು, ವಾಹನ ಡ್ರೈವ್ ಮಾಡುವಾಗ ದುಡುಕಬೇಡಿ.

ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-1

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಪ್ರಾರಂಭಕ್ಕೆ ಸಂತಸದ ಸುದ್ದಿ ಬರುವುದು. ಕಾನೂನು ತಜ್ಞರ ಸಲಹೆಯಂತೆ ಸ್ಥಿರಾಸ್ತಿ ವಿಲೇವಾರಿ ಆಗುವುದು. ನಿಮ್ಮ ಪ್ರಗತಿ ಕುಂಠಿತವಾಗಲು ನಿಮ್ಮ ದುಡುಕು ಕಾರಣವಾಗುವುದು. ಉದ್ಯೋಗ, ವ್ಯವಹಾರಗಳು ನೀವಂದುಕೊಂಡ ಗತಿಯಲ್ಲಿ ಸಾಗುತ್ತಿಲ್ಲ. ನಿರೀಕ್ಷಿಸಿದ ಹಣ ಕೈ ಸೇರುವಲ್ಲಿ ವಿಳಂಬ. ಆಹಾರ ವ್ಯತ್ಯಾಸದಿಂದ ಆರೋಗ್ಯ ಹದಗೆಡುವುದು.


ಶ್ರೀ ಆಂಜನೇಯ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-1

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಪಿತ್ರಾರ್ಜಿತ ಆಸ್ತಿ ವಿಚಾರಗಳಲ್ಲಿ ಗಣ್ಯ ವ್ಯಕ್ತಿಗಳ ಮಧ್ಯಸ್ಥಿಕೆಯಿಂದ ಅನುಕೂಲ. ಖರ್ಚು ಅಧಿಕವಾಗಲಿದ್ದು, ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗಲಿದೆ. ಮಾಡುವ ಕೆಲಸದಲ್ಲಿ ಸ್ಪಷ್ಟತೆ ಇರದು. ಕಚೇರಿಯಲ್ಲಿ ಅಧಿಕ ಕೆಲಸದ ಒತ್ತಡದಿಂದ ಮಾನಸಿಕವಾಗಿ ಬಳಲುವಿರಿ. ದಾಂಪತ್ಯದಲ್ಲಿ ಕಲಹಗಳು ಉಂಟಾದೀತು. ಆರೋಗ್ಯದಲ್ಲಿ ಏರುಪೇರು. ಸತ್ಸಂಗದಿಂದ ಮನಸ್ಸಿಗೆ ನೆಮ್ಮದಿ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4

ಕುರಹಟ್ಟಿಯಲ್ಲಿ ಪಶು ಆಸ್ಪತ್ರೆ ನಿರ್ಮಾಣ: ಶಾಸಕ ದರ್ಶನ್


ಕಾರ್ಯಕ್ರಮದಲ್ಲಿ ರೈತರಿಗೆ ಶಾಸಕ ದರ್ಶನ್ ಬಹುಮಾನ ವಿತರಿಸಿದರು.

ನಂಜನಗೂಡು, ಜ.25– ಹೈನುಗಾರಿಕೆ ಪ್ರೋತ್ಸಾಹಿಸಿ ಉತ್ತೇಜಿಸುವ ಸಲುವಾಗಿ ರೈತರ ಬೇಡಿಕೆಯಂತೆ ತಾಲೂಕಿನ ಕುರಹಟ್ಟಿ ಗ್ರಾಮದಲ್ಲಿ ಶೀಘ್ರ ಪಶು ಆಸ್ಪತ್ರೆ ನಿರ್ಮಾಣ ಮಾಡಲಾಗುವುದು ಎಂದು ಶಾಸಕ ದರ್ಶನ್ ಭರವಸೆ ನೀಡಿದರು.

ತಾಲೂಕಿನ ಕುರಹಟ್ಟಿ ಗ್ರಾಮದಲ್ಲಿ ಪಶು ಇಲಾಖೆ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಮಿಶ್ರ ತಳಿ ಕರುಗಳ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಈ ಭಾಗದ ರೈತರ ಬೇಡಿಕೆಯಂತೆ ಸಿಎಂ ಸಿದ್ದರಾಮಯ್ಯ, ಪಶುಸಂಗೋಪನೆ ಇಲಾಖೆ ಸಚಿವ ಕೆ.ವೆಂಕಟೇಶ್ ಅವರ ಮನವೊಲಿಸಿದ ಪರಿಣಾಮ ನೂತನ ಪಶು ಆಸ್ಪತ್ರೆಗೆ ಅನುದಾನ ನೀಡಿ, ನೂತನ ಪಶು ಆಸ್ಪತ್ರೆ ಮಂಜೂರು ಮಾಡಿಕೊಟ್ಟಿದ್ದಾರೆ. ಶೀಘ್ರದಲ್ಲೇ ಸಚಿವರಾದ ವೆಂಕಟೇಶ್ ಅವರಿಂದ ನೂತನ ಪಶು ಆಸ್ಪತ್ರೆಗೆ ಗುದ್ದಲಿ ಪೂಜೆ ನೆರವೇರಿಸಲಾಗುವುದು ಎಂದರು.

ರೈತರು ಕೃಷಿ ಜೊತೆಗೆ ಹೈನುಗಾರಿಕೆ ಅನುಸರಿಸಿದಲ್ಲಿ ಆರ್ಥಿಕವಾಗಿ ಸದೃಢರಾಗಬಹುದು. ಸರ್ಕಾರ ಕೂಡ ಹೈನುಗಾರಿಕೆ ಉತ್ತೇಜಿಸಲು ಹಲವು ಕಾರ್ಯಕ್ರಮಗಳನ್ನು ರೂಪಿಸಿ ರೈತರಿಗೆ ನೆರವು ನೀಡುತ್ತಿದೆ.

ಈ ನಿಟ್ಟಿನಲ್ಲಿ ಪಶು ಇಲಾಖೆ ವತಿಯಿಂದ ಹೈನುಗಾರಿಕೆ ಉತ್ತೇಜಿಸಲು ಮಿಶ್ರ ತಳಿ ಕರುಗಳ ಪ್ರದರ್ಶನ ಏರ್ಪಡಿಸಿ ಎಚ್‌ಎಫ್, ಜರ್ಸಿ ಮತ್ತು ನಾಟಿ ಹಸುಗಳ ಕರುಗಳ 3 ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡುವ ಮೂಲಕ ರೈತರನ್ನು ಪ್ರೋತ್ಸಾಹಿಸಲಾಗುತ್ತಿದೆ. ಜೊತೆಗೆ ಕರುಗಳಿಗೆ ರೋಗ ರುಜಿನಗಳು ಬಾರದಂತೆ ಲಸಿಕೆ ಮತ್ತು ಕಂದುರೋಗ ಬಾರದಂತೆ ಕಂದು ರೋಗ ನಿಯಂತ್ರಣ ಲಸಿಕೆ, ಚರ್ಮ ಗಂಟು, ಕಾಲು ಬಾಯಿ ಜ್ವರ ನಿಯಂತ್ರಣಕ್ಕೂ ಸಹ ಲಸಿಕೆ ನೀಡಲಾಗುತ್ತಿದೆ. ರೈತರು ಇದರ ಸದುಪಯೋಗ ಪಡೆದುಕೊಂಡು ಹೈನುಗಾರಿಕೆಯಲ್ಲಿ ಲಾಭಗಳಿಸಿ ಆರ್ಥಿಕವಾಗಿ ಮುಂದೆ ಬರಬೇಕು ಎಂದು ಸಲಹೆ ನೀಡಿದರು.

ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಮಾತನಾಡಿ, ರೈತರು ಕರುಗಳಿಗೆ ಚಿಕ್ಕಂದಿನಿಂದಲೇ ಉತ್ತಮ ಪೋಷಕಾಂಶಗಳನ್ನು ನೀಡುವುದಲ್ಲದೆ ಕಾಲ ಕಾಲಕ್ಕೆ ರೋಗ ಬಾರದಂತೆ ಲಸಿಕೆ ಹಾಕಿಸುವ ಮೂಲಕ ರೋಗ ನಿರೋಧಕ ಶಕ್ತಿ ಹೆಚ್ಚಿಸಿದಾಗ ಕರುಗಳು ಸದೃಢವಾಗಿ ಬೆಳೆದು ಬೇಗನೆ ಗರ್ಭ ಧರಿಸಿ, ಹೆಚ್ಚು ಹಾಲು ನೀಡುತ್ತವೆ. ಇದರಿಂದ ರೈತರಿಗೆ ಹೈನುಗಾರಿಕೆ ಲಾಭದಾಯಕವಾಗಲಿದೆ. ಆದ್ದರಿಂದ ರೈತರು ತಪ್ಪದೇ ನಿಮ್ಮ ಜಾನುವಾರುಗಳಿಗೆ ಕಾಲಕಾಲಕ್ಕೆ ರೋಗನಿರೋಧಕ ಲಸಿಕೆಗಳನ್ನು ಹಾಕಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಎಚ್‌ಎಫ್, ಜರ್ಸಿ, ನಾಟಿ ಕರು ವಿಭಾಗಗಳಲ್ಲಿ ವಿಜೇತರಾದ ರೈತರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಗ್ರಾಪಂ ಅಧ್ಯಕ್ಷ ಹೊಣಕಾರನಾಯಕ, ಉಪಾಧ್ಯಕ್ಷೆ ಲತಾ, ಸದಸ್ಯರಾದ ಶಾಂತಮಲ್ಲು, ಮಣಿಕಂಠ, ಡೈರಿ ನಿರ್ದೇಶಕರಾದ ಸಿದ್ದರಾಜು, ನಾಗಮ್ಮ, ಶಾರದಮ್ಮ, ಗುರುಸಿದ್ದಪ್ಪ, ರೇಚಪ್ಪ, ಚಿಕ್ಕೂಸಯ್ಯ, ವಿರೂಪಾಕ್ಷ, ವೀರೇಶ್, ಪಶು ವೈದ್ಯಾಧಿಕಾರಿಗಳಾದ ಶರಣಬಸಪ್ಪ, ಪುಟ್ಟರಾಜು, ರೇವಣ್ಣ ಸೇರಿದಂತೆ ಹಲವರಿದ್ದರು.

ಹುಣಸೂರು ತಾಲೂಕು ಶಿವಾರ್ಚಕ ಸಂಘ ಉದ್ಘಾಟನೆ


ಹುಣಸೂರು ತಾಲೂಕು ಶಿವಾರ್ಚಕ ಸಂಘವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಹನಗೋಡು, ಜ.25– ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಹುಣಸೂರು ತಾಲೂಕು ಶಿವಾರ್ಚಕ ಸಂಘವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ತಾಲೂಕಿನ ಹಳ್ಳಿಕೆರೆ ಗ್ರಾಮದ ಶ್ರೀಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಘ ಉದ್ಘಾಟಿಸಿದ ಶಾಸಕರು, ನಂತರ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ಬಳಿಕ ಮಾತನಾಡಿದ ಅವರು, ಮೊದಲಿನಿಂದಲೂ ಜಿಲ್ಲಾ ರಾಜ್ಯ ಮಟ್ಟದ ಶಿವಾರ್ಚಕ ಸಂಘದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಇದೀಗ ನಮ್ಮ ತಾಲೂಕಿನಲ್ಲಿಯೇ ತಾಲೂಕು ಮಟ್ಟದ ಸಂಘ ಅಸ್ತಿತ್ವಕ್ಕೆ ಬಂದಿರುವುದು ಸಂತಸದ ವಿಚಾರ. ಸಮುದಾಯದ ಎಲ್ಲರೂ ಸಂಘಟಿತರಾಗಿ ಎಂದರು.

ರಾಜ್ಯ ಶಿವಾರ್ಚಕ ಸಂಘದ ಮಾಜಿ ಅಧ್ಯಕ್ಷ ಕೆ.ಎಂ.ನಂಜುಂಡಪ್ಪ ಮಾತನಾಡಿ, ತಾಲೂಕಿನಲ್ಲಿ ಸಂಸ್ಕೃತ ಪಾಠಶಾಲೆ ನಡೆಸಲು ಸ್ಥಳದ ಅಭಾವವಿದೆ. ಸೂಕ್ತ ಸ್ಥಳಾವಕಾಶವಾದರೆ ಸಂಸ್ಕೃತ ಪಾಠಶಾಲೆ ಪ್ರಾರಂಭಿಸಲಾಗುವುದು. ಈ ಬಗ್ಗೆ ಶಾಸಕರು ಗಮನಹರಿಸಿ ತಾಲೂಕು ಸಂಘಕ್ಕೆ ನಿವೇಶನ ಮಂಜೂರು ಮಾಡಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಹರೀಶ್‌ಗೌಡ, ಈ ಬಗ್ಗೆ ಸೂಕ್ತ ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಂಘದ ಅಧ್ಯಕ್ಷ ಪ್ರೊ.ಎಂ.ಮಲ್ಲಣ್ಣ, ನೂತನ ಸಂಘದ ಅಧ್ಯಕ್ಷ ಬಿ.ಚಂದ್ರಶೇಖರ್ ಪದಾಧಿಕಾರಿಗಳು ಇದ್ದರು.

ರೈತರ ಸಮಸ್ಯೆ ಬಗೆಹರಿಸುವಂತೆ ಮನವಿ


ತಹಸೀಲ್ದಾರ್‌ರೊಂದಿಗೆ ಚಂದನ್‌ಗೌಡ ಮಾತನಾಡಿದರು.

ಸರಗೂರು, ಜ.25– ಪಟ್ಟಣದ ತಾಲೂಕು ಕಚೇರಿಗೆ ಆಗಮಿಸುವ ರೈತರ ಸಮಸ್ಯೆ ಬಗೆಹರಿಸುವಂತೆ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್ ಗೌಡ ತಹಸೀಲ್ದಾರ್ ಮೋಹನಕುಮಾರಿ ಅವರಿಗೆ ಮನವಿ ಮಾಡಿದರು.

ಪಟ್ಟಣದ ತಾಲೂಕು ಕಚೇರಿಗೆ ಭೇಟಿ ನೀಡಿ ರೈತರ ಸಮಸ್ಯೆ ಕುರಿತು ಮಾತನಾಡಿದ ಚಂದನ್‌ಗೌಡ, ತಾಲೂಕಿನಲ್ಲಿ ರೈತರ ಸಮಸ್ಯೆಗೆ ಸೂಕ್ತ ಪರಿಹಾರ ಸಿಗುತ್ತಿಲ್ಲ. ಮಣ್ಣನ್ನು ನಂಬಿಕೊಂಡು ಅನ್ನದಾತರು ತಮ್ಮ ಜೀವ ಸವೆಸುತ್ತಿದ್ದಾರೆ. ಅತಿವೃಷ್ಟಿ, ಅನಾವೃಷ್ಟಿಯಿಂದ ತತ್ತರಿಸಿದರೇ, ಅಲ್ಪ ಸ್ವಲ್ಪ ಬೆಳೆದ ಬೆಳೆ ಕಾಡು ಪ್ರಾಣಿಗಳ ಪಾಲಾಗುತ್ತಿದೆ. ಅರಣ್ಯ ಇಲಾಖೆಯಿಂದ ಯಾವುದೇ ಪರಿಹಾರ ಸಿಗದಂತಾಗಿದೆ. ಅನ್ನದಾತರು ಕಂದಾಯ ಸೇರಿದಂತೆ ಇತರೆ ಇಲಾಖೆಗಳಿಗೆ ತಮ್ಮ ಕೆಲಸಗಳಿಗಾಗಿ ಅಲೆಯುತ್ತಿದ್ದಾರೆ. ಇದರಿಂದ ಅವರಿಗೆ ತೊಂದರೆಯಾಗಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ರೈತರ ಕೆಲಸ ಮಾಡಿಕೊಡಬೇಕು. ಇದರಿಂದ ಅವರು ಕಚೇರಿಗಳಿಗೆ ಅಲೆದಾಡುವುದು ತಪ್ಪುತ್ತದೆ. ತಿಂಗಳಿಗೆ ಒಂದು ದಿನ ರೈತರ ಸಾಕಷ್ಟು ಸಮಸ್ಯೆ ಪರಿಹಾರವಾಗಲಿದೆ ಎಂದರು.

ತಹಸೀಲ್ದಾರ್ ಮೋಹನಕುಮಾರಿ ಮಾತನಾಡಿ, ರೈತರಿಗೆ ಪೌತಿ ಖಾತೆ, ಸಾಗುವಳಿ ಪತ್ರ ವಿತರಿಸಲು ಅರಣ್ಯ ಇಲಾಖೆಯವರಿಗೆ ಜಂಟಿ ಸರ್ವೇ ನಡೆಸಲು ಪತ್ರ ಬರೆಯಲಾಗಿದೆ. ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ ಎಂಆರ್, ಆರ್‌ಟಿಸಿ ಮತ್ತಿತರ ದಾಖಲೆಗಳ ಬಗ್ಗೆ ಅರಿವು ಮೂಡಿಸಲು ಮುಂದಿನ ದಿನಗಳಲ್ಲಿ ಕಾರ್ಯಕ್ರಮ ರೂಪಿಸಲಾಗುವುದು ಎಂದರು.

ಸಮುದಾಯ ಭವನದ ಮುಂದುವರೆದ ಕಾಮಗಾರಿಗೆ ಚಾಲನೆ


ಸಮುದಾಯ ಭವನದ ಮುಂದುವರೆದ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.

ಬೆಟ್ಟದಪುರ, ಜ.25– ಸಮೀಪದ ಅತ್ತಿಗೋಡು ಗ್ರಾಮದಲ್ಲಿ 20 ಲಕ್ಷರೂ. ವೆಚ್ಚದಲ್ಲಿ ವೀರಶೈವ ಲಿಂಗಾಯತ ಸಮುದಾಯ ಭವನದ ಮುಂದುವರೆದ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.

ನಂತರ ಮಾತನಾಡಿದ ಸಚಿವರು, ಗ್ರಾಮಗಳ ಅಭಿವೃದ್ಧಿಗೆ ಸಮುದಾಯ ಭವನಗಳು ಅತೀ ಮುಖ್ಯವಾಗಿದೆ. ಬಡಜನರು ಮದುವೆ, ನಾಮಕರಣ ಮತ್ತು ಇತರ ಶುಭ ಕಾರ್ಯಗಳನ್ನು ಲಕ್ಷಾಂತರ ರೂ. ಖರ್ಚು ಮಾಡಿ ಕಲ್ಯಾಣ ಮಂಟಪಗಳಲ್ಲಿ ಮಾಡುವ ಬದಲು ತಮ್ಮ ಗ್ರಾಮಗಳ ಸಮುದಾಯ ಭವನಗಳಲ್ಲಿ ಮಾಡುವುದರಿಂದ ಹಣ ಉಳಿತಾಯವಾಗಲಿದೆ ಎಂದರು.

ಈ ವೇಳೆ ದೇವಸ್ಥಾನ ಸಮಿತಿ ಅಧ್ಯಕ್ಷ ಕಾಂತರಾಜು, ಮುಖಂಡ ನಿತಿನ್, ಮೈಮುಲ್ ನಿರ್ದೇಶಕ ಪ್ರಕಾಶ್ ಹೊಲದಪ್ಪ, ವಿರೂಪಾಕ್ಷ, ಕೆಂಡಗಣ್ಣಶೆಟ್ಟಿ, ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಫಣೀಶ್, ಗ್ರಾಪಂ ಮಾಜಿ ಸದಸ್ಯ ಮಹದೇವ್, ಸುರೇಶ್, ಪ್ರಕಾಶ್, ಚಿಕ್ಕಸ್ವಾಮಿ, ಗ್ರಾಮದ ಯಜಮಾನ ಗೌರೀಶ್, ಗುಂಡಣ್ಣ, ಗ್ರಾಪಂ ಅಧ್ಯಕ್ಷ ರಾಜೇಗೌಡ, ಪಿಡಿಓ ಮನು, ಮುಖಂಡರಾದ ಗಂಗಾಧರ್, ಚಂದ್ರಹಾಸ, ತಾಲೂಕು ಅಧಿಕಾರಿಗಳು, ಸಾರ್ವಜನಿಕರು ಹಾಜರಿದ್ದರು.

ಬಿದರಹಳ್ಳಿ ಗ್ರಾಪಂಗೆ ನಾಗರತ್ನ ಅಧ್ಯಕ್ಷೆ


ಹೆಚ್.ಡಿ.ಕೋಟೆ ತಾಲೂಕಿನ ಬಿದರಹಳ್ಳಿ ಗ್ರಾಪಂ ಅಧ್ಯಕ್ಷೆಯಾಗಿ ನಾಗರತ್ನ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಚುನಾವಣಾಧಿಕಾರಿ ಉಷಾ, ಪಿಡಿಓ ಜೆ.ಪರಮೇಶ್, ಉಪಾಧ್ಯಕ್ಷ ವಿಜಯ್ ಕುಮಾರ್, ಮಾಜಿ ಅಧ್ಯಕ್ಷರಾದ ಬಿ.ಶಿವಣ್ಣ, ವೆಂಕಟಸ್ವಾಮಿ, ಪುಟ್ಟಮ್ಮ, ಸ್ಥಾಯಿಸಮಿತಿ ಅಧ್ಯಕ್ಷ ಸತ್ಯ, ಗ್ರಾಪಂ ಸದಸ್ಯರಾದ ಅಂಕನಾಯಕ, ರತ್ನಮ್ಮ, ಸತೀಶ, ರಾಣಿ, ಡಿ.ನೇತ್ರಾ, ಕುಮಾರ್, ಚನ್ನನಾಯಕ, ರತ್ನಮ್ಮ, ದೇವಮಣಿ, ಎಸ್‌ಡಿಎ ಮಹೇಶ, ಬಿಲ್ ಕಲೆಕ್ಟರ್ ವಿನೋದ್, ಶಿವರಾಜು ಇತರರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ನಂ.ಗೂಡು ಪ್ರಥಮ ಸ್ಥಾನಗಳಿಸಲು ಶ್ರಮಿಸಿ

ಬಿಇಓ, ಶಿಕ್ಷಕರಿಗೆ ಶಾಸಕ ದರ್ಶನ್ ಸೂಚನೆ


ಆಸರೆ ಪುಸ್ತಕವನ್ನು ಶಾಸಕ ದರ್ಶನ್ ಬಿಡುಗಡೆಗೊಳಿಸಿದರು.

ನಂಜನಗೂಡು, ಜ.25– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಂಜನಗೂಡು ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಕರು ಶ್ರಮಿಸಬೇಕು ಎಂದು ಶಾಸಕ ದರ್ಶನ್ ಸೂಚಿಸಿದರು.

ನಗರದ ನಾಗಮ್ಮ ಶಾಲಾವರಣದಲ್ಲಿರುವ ಗುರುಭವನದಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ರೂಪಿಸುವ ಆಸರೆ ಪುಸ್ತಕವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ತಾಲೂಕಿನಲ್ಲಿ SSLC ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ, ವಿದ್ಯಾರ್ಥಿಗಳು ಕಲಿಯಲೇಬೇಕಾದ ಅತೀ ಸಂಭವನೀಯ ಕಲಿಕಾಂಶಗಳನ್ನು ಗುರುತಿಸಿ ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳು ಸಹ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಹಿತದೃಷ್ಟಿಯಿಂದ ಈ ಆಸರೆ ಸಂಚಿಕೆ ಪುಸ್ತಕ ಹೊರ ತಂದಿರುವುದು ಖುಷಿ ತಂದಿದೆ. ಆದರೆ ನಂಜನಗೂಡು ತಾಲೂಕು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸ್ಥಾನ ಗಳಿಸುವ ಹಾಗೂ ಗುಣಾತ್ಮಕ ಶಿಕ್ಷಣ ಒದಗಿಸುವ ಸಲುವಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮವಹಿಸಬೇಕು. ಮುಖ್ಯ ಶಿಕ್ಷಕರು ಮತ್ತು ವಿಷಯಾಧಾರಿತ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ನೇರ ಸಂಪರ್ಕದಲ್ಲಿದ್ದು, ಅವರ ಕಲಿಕೆಗೆ ಸಲಹೆ ನೀಡಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಲು ನೆರವು ನೀಡಬೇಕು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರ್ತಿಸಿ ಅವರಿಗೆ ಹೆಚ್ಚಿನ ಸಲಹೆ ನೀಡಿ ಉತ್ತೀರ್ಣರಾಗುವಂತೆ ನೆರವಾಗಬೇಕು. ಅಲ್ಲದೇ ತಾಲೂಕು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.86ಕ್ಕಿಂತ ಹೆಚ್ಚಿನ ಫಲಿತಾಂಶ ಗಳಿಸುವಂತೆ ಶಿಕ್ಷಕರು ಶ್ರಮವಹಿಸಬೇಕು ಎಂದು ಸಲಹೆ ನೀಡಿದರು.

ಸಂಚಿಕೆ ಹೊರತರಲು ಶ್ರಮಿಸಿದ ಬಿಇಓ ಹಾಗೂ ಸಂಪನ್ಮೂಲ ಶಿಕ್ಷರ ತಂಡಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಬಿಇಓ ಮಹೇಶ್ ಮಾತನಾಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಹೆಚ್ಚಿಸುವ ಸಲುವಾಗಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೂ ನೆರವು ನೀಡುವಂತೆ, ಪರೀಕ್ಷೆಯಲ್ಲಿ ಬರಬಹುದಾದ ಸಂಭವನೀಯ ಕಲಿಕಾಂಶಗಳನ್ನು ಗುರ್ತಿಸಿ ಎಲ್ಲಾ ವಿಷಯಗಳನ್ನು ಒಳಗೊಂಡ ಈ ಆಸರೆ ಸಂಚಿಕೆಯನ್ನು ಶಿಕ್ಷಕರ ಸಹಾಯದೊಂದಿಗೆ ಹೊರ ತರಲಾಗಿದೆ. ಈ ಸಂಚಿಕೆಯನ್ನು ತಾಲೂಕಿನ ಎಲ್ಲಾ ಪ್ರೌಢಶಾಲೆಗಳಿಗೂ ಒದಗಿಸಲಾಗಿದೆ. ಶಿಕ್ಷಕರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಕಾರ್ಯ ಚಟುವಟಿಕೆ ಮೂಲಕ ಅಭ್ಯಾಸ ಮಾಡಿಸಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿ ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ರಮೇಶ್, ಪ್ರಾಥಮಿಕ ಶಾಲಾ ಶಿಕ್ಷರ ಸಂಘ ಅಧ್ಯಕ್ಷ ಧರ್ಮ ರತ್ನಾಕರ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಡಾ.ದೀಪು, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ, ಬಾಲರಾಜು ಮತ್ತು ಶಿಕ್ಷಕ ವರ್ಗದವರು ಉಪಸ್ಥಿತರಿದ್ದರು.

ಮರಕ್ಕೆ ಟಿಟಿ ಡಿಕ್ಕಿ: 7 ಮಂದಿಗೆ ಗಾಯ



ಹುಣಸೂರು, ಜ.25– ರಾಯರ ದರ್ಶನಕ್ಕೆ ಭಕ್ತರನ್ನು ಕರೆದೊಯ್ಯುತ್ತಿದ್ದ ಟಿಟಿ ವಾಹನ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸೇರಿದಂತೆ 7 ಮಂದಿಗೆ ಗಾಯವಾಗಿರುವ ಘಟನೆ ಮಂತ್ರಾಲಯ ಬಳಿ ನಡೆದಿದೆ.

ಹುಣಸೂರಿನ ಚಾಲಕ ಸಂತೋಷ್ ತೀವ್ರ ಗಾಯಗೊಂಡಿದ್ದರೆ, ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬಿಜೆಪಿ ಮುಖಂಡ ಹನಗೋಡು ಮಂಜುನಾಥ್ ಮತ್ತವರ ಸಂಬಂಧಿ ಗಿರಿಧರ್ ಕುಟುಂಬವಿದ್ದ ಟಿಟಿ ವಾಹನ ಮಂತ್ರಾಲಯಕ್ಕೆ ಹೋಗುತ್ತಿದ್ದ ವೇಳೆ ಶುಕ್ರವಾರ ಬೆಳಗಿನ ಜಾವ 5 ಗಂಟೆ ಸಮಯದಲ್ಲಿ ನಿದ್ದೆ ಮಂಪರಿನಲ್ಲಿದ್ದ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ವಾಹನದ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ. ಚಾಲಕ ಸಂತೋಷ್‌ಗೆ ತೀವ್ರ ಗಾಯವಾಗಿದ್ದು, ಮಂಜುನಾಥ್, ಪತ್ನಿ ಸುಜಾತ, ಗಿರಿಧರ್ ಸೇರಿದಂತೆ ಗಾಯಾಳುಗಳನ್ನು ರಾಯಚೂರು ಆಸ್ಪತ್ರೆಗೆ ದಾಖಲಿಸಲಾಗಿದೆ.

ಆಸ್ಪತ್ರೆ ದಾಖಲಾಗಿದ್ದ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಟಿಟಿ ವಾಹನ ಸ್ವಲ್ಪ ಮುಂದೆ ಉರುಳಿದ್ದರೆ ಹಳ್ಳಕ್ಕೆ ಬಿದ್ದು ಹೆಚ್ಚಿನ ಅನಾಹುತ ಸಂಭವಿಸುತ್ತಿತ್ತು ಎನ್ನಲಾಗಿದೆ.

ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯಲ್ಲಿ ಗ್ರಾಟಿಟ್ಯುಡ್ ಡೇ



ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯಲ್ಲಿ ಗ್ರಾಟಿಟ್ಯುಡ್ ಡೇ ನಡೆಯಿತು.

ಹುಣಸೂರು, ಜ.25– ನಗರದ ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯಿಂದ ಗ್ರಾಟಿಟ್ಯುಡ್ ಡೇ, ಸ್ಕಾಲರ್‌ಶಿಪ್ ವಿತರಣೆ ಹಾಗೂ ಇಂಗ್ಲಿಷ್ ಲ್ಯಾಬ್ ಉದ್ಘಾಟನೆ ಮಾಡಲಾಯಿತು.

25ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಎರಡೂವರೆ ಲಕ್ಷದವರೆಗೆ ಸ್ಕಾಲರ್‌ಶಿಪ್ ವಿತರಿಸಲಾಯಿತು. 20 ವರ್ಷಗಳಿಂದ ಸಂಸ್ಥೆ ಏಳಿಗೆಗೆ ಶ್ರಮಿಸಿದ ಶಾಲಾ ಸಿಬ್ಬಂದಿಗಳಾದ ಗುಲ್ನಾಝ್ ಖಾನಮ್, ಶಶಿಕಲಾ, ಸುಧಾಮಣಿ, ವಿಜಯ್ ಹಾಗೂ ಪುಷ್ಪ ಅವರನ್ನು ಸನ್ಮಾನಿಸಲಾಯಿತು.

ಮುಖ್ಯ ಅತಿಥಿ ಚಿಕ್ಕಣ್ಣ ಮಾತನಾಡಿ, ಇಂಗ್ಲಿಷ್ ಲ್ಯಾಬ್ ಎಂಬ ಕಲ್ಪನೆ ಮಕ್ಕಳಿಗೆ ತುಂಬಾ ಉಪಯೋಗಕಾರಿಯಾಗಿದೆ. ವ್ಯವಹಾರಿಕ ಭಾಷೆಯಾಗಿ ಇಂಗ್ಲಿಷ್ ಹೆಚ್ಚಾಗಿ ಬಳಕೆಯಲ್ಲಿ ಇರುವುದರಿಂದ ಇದರ ಅವಶ್ಯಕತೆ ಇಂದಿನ ಪರಿಸ್ಥಿತಿಗೆ ತಕ್ಕದಾಗಿದೆ ಎಂದರು. ಸಂಸ್ಥಾಪಕ ನಿರ್ದೇಶಕರಾದ ನವೀನ್ ರೈ, ನಿರ್ದೇಶಕರಾದ ಡಾ.ಶ್ರೀನಾಥ್, ಮಂಜುನಾಥ್ ಮಾತನಾಡಿದರು. ಈ ವೇಳೆ ವಿದ್ಯಾರ್ಥಿಗಳು ಇನ್ನಿತರರಿದ್ದರು.

ಲೋ ಬಿಪಿ: ವಿದ್ಯಾರ್ಥಿ ಸಾವು



ಮಲ್ಲುಂಡಿ, ಜ.25– ಲೋ ಬಿಪಿಯಿಂದ ವಿದ್ಯಾರ್ಥಿ ಸಾವನ್ನಪ್ಪಿರುವ ಘಟನೆ ನಂಜನಗೂಡು ತಾಲೂಕಿನ ತರಗನಹಳ್ಳಿ ಗ್ರಾಮದಲ್ಲಿ ನಡೆದಿದೆ. ತರಗನಹಳ್ಳಿ ಗ್ರಾಮದ ನಿವಾಸಿ ಬಸವರಾಜು, ಶೈಲ ದಂಪತಿ ದ್ವಿತೀಯ ಪುತ್ರ, ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಮಹಾಂತೇಶ್ (13) ಸಾವನ್ನಪ್ಪಿದ ಬಾಲಕ. ಈತನನ್ನು ಅನಾರೋಗ್ಯದ ಹಿನ್ನೆಲೆಯಲ್ಲಿ ಗುರುವಾರ ರಾತ್ರಿ ಹುಲ್ಲಹಳ್ಳಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಪಾಸಣೆ ನಡೆಸಿದಾಗ ಮಹಾಂತೇಶ್ ಲೋ ಬಿಪಿಯಿಂದ ಬಳಲುತ್ತಿದ್ದು ಕಂಡು ಬಂದಿತ್ತು. ತಕ್ಷಣ ಆತನಿಗೆ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಮಧ್ಯಾಹ್ನ ಸಾವನ್ನಪ್ಪಿದ್ದಾನೆ.

ಹನಗೋಡು: ಬೀದಿ ನಾಯಿಗಳ ದಾಳಿಗೆ ಜಿಂಕೆ ಬಲಿ



ಹನಗೋಡು, ಜ.25– ಬೀದಿ ನಾಯಿಗಳ ದಾಳಿಗೆ ಜಿಂಕೆ ಬಲಿಯಾಗಿರುವ ಘಟನೆ ಹನಗೋಡು ಹೋಬಳಿಯ ಚಿಕ್ಕಹೆಜ್ಜೂರಲ್ಲಿ ನಡೆದಿದೆ. ನಾಗರಹೊಳೆ ಉದ್ಯಾನವನದ ವೀರನಹೊಸಹಳ್ಳಿ ವಲಯದ ಬಳಿ ಮೇಯುತ್ತಿದ್ದ ಜಿಂಕೆಗಳನ್ನು ಕಂಡ ಬೀದಿ ನಾಯಿಗಳು ಬೊಗಳಿದ್ದರಿಂದ ಅರಣ್ಯದೊಳಗೆ ಜಿಂಕೆಗಳು ಓಡಿಹೋಗಿವೆ. ಅಲ್ಲದೇ ಟ್ರಂಚ್ ಬಳಿ ನಾಯಿಗಳು ಬೊಗಳುವುದನ್ನು ಕಂಡ ಜಮೀನಿಗೆ ತೆರಳುತ್ತಿದ್ದ ರೈತರು ನಾಯಿಗಳನ್ನು ಓಡಿಸಿದರಾದರೂ ಅಷ್ಟರಲ್ಲಾಗಲೇ ಒಂದು ಜಿಂಕೆಯನ್ನು ನಾಯಿಗಳು ಅಟ್ಟಾಡಿಸಿಕಚ್ಚಿ ಕೊಂದು ಹಾಕಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸಿ ಜಿಂಕೆ ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪಿಎಲ್‌ಡಿ ಬ್ಯಾಂಕ್ ಚುನಾವಣೆ: 4 ನಾಮಪತ್ರ ಸಲ್ಲಿಕೆ


ಸಾಲಗಾರರಲ್ಲದ ಕ್ಷೇತ್ರದಿಂದ ಗುರುಮಲ್ಲೇಗೌಡ ನಾಮಪತ್ರ ಸಲ್ಲಿಸಿದರು.

ತಿ.ನರಸೀಪುರ, ಜ.25– ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕ ಸ್ಥಾನಕ್ಕೆ ಶನಿವಾರ 4 ನಾಮಪತ್ರಗಳು ಸಲ್ಲಿಕೆಯಾದವು.

ನಾಮಪತ್ರ ಸಲ್ಲಿಸಲು ಅಂತಿಮ ದಿನವಾದ ಇಂದು ಸಾಲಗಾರರಲ್ಲದ ಕ್ಷೇತ್ರದಿಂದ ಗುರು ಮಲ್ಲೇಗೌಡ, ಸಾಲಗಾರರ ಕ್ಷೇತ್ರದಿಂದ ಬನ್ನೂರು ಕ್ಷೇತ್ರದಿಂದ ಆರ್.ಮಹೇಶ್, ಶ್ರೀಧರ್, ಹಾಗೂ ಮಾಕನಹಳ್ಳಿ ಎಂ.ಕೆ.ಮಹೇಶ್ ಚುನಾವಣಾಧಿಕಾರಿ ಎನ್.ಮಹೇಶ್ ಅವರಿಗೆ ಉಮೇದುವಾರಿಕೆ ಸಲ್ಲಿಸಿದರು.

ಈ ವೇಳೆ ಎಂ.ಕೆ.ನಟೇಶ್, ದೇವರಾಜು, ಕಿರಗಸೂರು ಮಹದೇವ, ಚೌಹಳ್ಳಿ ಕುಮಾರ್, ಡೈರಿ ನಿರ್ದೇಶಕರಾದ ನಿಂಗಪ್ಪ, ವೆಂಕಟೇಶ್, ಪುರಸಭೆ ಸದಸ್ಯರಾದ ಶಿವಕುಮಾರ್, ಶ್ರೀನಿವಾಸ್, ವಿಷಕಂಠ, ದೇವರಾಜು, ಕಾಳೇಗೌಡ, ಮಲ್ಲಿಕಾ, ಜಯರಾಮು, ಮಹೇಂದ್ರ ಹಾಜರಿದ್ದರು.

ಅಲೆಮಾರಿ ಕೊರಚ ಸಮುದಾಯಕ್ಕೆ ಜಮೀನು ಮಂಜೂರು

ಅನಿರ್ದಿಷ್ಟಾವಧಿ ಪ್ರತಿಭಟನೆ ಅಂತ್ಯ

ಪ.ಜಾತಿ ಮತ್ತು ಪ.ಪಂಗಡಗಳ ಅಲೆಮಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಭೇಟಿ, ಅಹವಾಲು ಆಲಿಕೆ


ಅನಿರ್ದಿಷ್ಟಾವಧಿ ಧರಣಿ ಸ್ಥಳಕ್ಕೆ ಪ.ಜಾತಿ ಮತ್ತು ಪ.ಪಂಗಡಗಳ ಅಲೆಮಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಭೇಟಿ ನೀಡಿ ಅಹವಾಲು ಆಲಿಸಿದರು.

ತಿ.ನರಸೀಪುರ, ಜ.25– ಪುರಸಭೆ ವ್ಯಾಪ್ತಿಯ ಬಂಗಾರಪ್ಪ ಬಡಾವಣೆಯಲ್ಲಿ ಅಲೆಮಾರಿ ಕೊರಚ ಸಮುದಾಯದ ಕುಟುಂಬಗಳಿಗೆ ತಾಲೂಕು ಆಡಳಿತ 1 ಎಕರೆ ಸರ್ಕಾರಿ ಜಮೀನನ್ನು ಮಂಜೂರು ಮಾಡಿದ ಹಿನ್ನೆಲೆಯಲ್ಲಿ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ತಾಲೂಕು ಕಚೇರಿ ಆವರಣದಲ್ಲಿ ಕಳೆದ ಐದು ದಿನಗಳಿಂದ ನಡೆಯುತ್ತಿದ್ದ ಅನಿರ್ದಿಷ್ಟಾವಧಿ ಪ್ರತಿಭಟನೆ ಅಂತ್ಯಗೊಂಡಿತು.

ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಪ.ಜಾತಿ ಅಲೆಮಾರಿ ಕೊರಚ ಸಮುದಾಯದ ಕುಟುಂಬಗಳು ನಿವೇಶನ ಮತ್ತು ವಸತಿ ಯೋಜನೆ ಮಂಜೂರು ಮಾಡುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಸಾರಥ್ಯದಲ್ಲಿ ಕಳೆದ ಸೋಮವಾರದಿಂದ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ಆರಂಭಿಸಿದ್ದರು. ನಿವೇಶನ ಮಂಜೂರಾತಿಗೆ 10 ದಿನಗಳ ಕಾಲಾವಕಾಶ ನೀಡುವಂತೆ ತಾಲೂಕು ಆಡಳಿತ ಕೇಳಿದ್ದರೂ ಒಪ್ಪದ ಪ್ರತಿಭಟನಾಕಾರರು ನಿವೇಶನ ಮಂಜೂರು ಮಾಡುವವರೆಗೂ ಪರ್ಯಾಯ ಸ್ಥಳ ತೋರುವಂತೆ ಪಟ್ಟು ಹಿಡಿದು ಪ್ರತಿಭಟನೆ ಮುಂದುವರಿಸಿದ್ದರು. ಜಿಲ್ಲಾಧಿಕಾರಿಗಳ ಸೂಚನೆಯಂತೆ ತಾಲೂಕು ಆಡಳಿತ ಬಂಗಾರಪ್ಪ ಬಡಾವಣೆಯಲ್ಲಿ ಒಂದು ಎಕರೆ ಸರ್ಕಾರಿ ಜಮೀನನ್ನು ಕೊರಚರಿಗೆ ಕಾಯ್ದಿರಿಸಿ, ಹದ್ದುಬಸ್ತು ಮಾಡಿ ತೋರಿಸಿದ್ದರಿಂದ 5 ದಿನಗಳ ಪ್ರತಿಭಟನೆ ಕೊನೆಯಾಯಿತು.

ಕೊರಚರು ಮನುಷ್ಯರಂತೆ ಕಾಣುತ್ತಿಲ್ಲವೇ: ಅನಿರ್ದಿಷ್ಟಾವಧಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ, ಧರಣಿ ನಿರತರ ಅಹವಾಲು ಆಲಿಸಿದ ಕರ್ನಾಟಕ ಪ.ಜಾತಿ ಮತ್ತು ಪ.ಪಂಗಡಗಳ ಅಲೆಮಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ, ಈ ಹಿಂದಿನ ಭೇಟಿ ವೇಳೆ ನಿವೇಶನ ಕಲ್ಪಿಸಲು ತಿಂಗಳ ಗಡುವು ಕೇಳಿಯೂ ನಿರ್ಲಕ್ಷಿಸಿರುವ, ಪ್ರತಿಭಟನೆಗೆ ಕುಳಿತಿರುವ ಕುಟುಂಬಗಳ ಅಹವಾಲನ್ನು ಸೌಜನ್ಯಕ್ಕೂ ಆಲಿಸದ ತಹಸೀಲ್ದಾರ್, ಪುರಸಭೆ ಮುಖ್ಯಾಧಿಕಾರಿ ಹಾಗೂ ಸಮಾಜ ಕಲ್ಯಾಣಾಧಿಕಾರಿ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡು ಕೊರೆಯುವ ಚಳಿಯಲ್ಲಿ ಹಗಲಿರುಳು ಪ್ರತಿಭಟನೆ ನಡೆಸುತ್ತಿರುವ ಕೊರಚ ಕುಟುಂಬಗಳು ಮನುಷ್ಯರಂತೆ ಕಾಣುತ್ತಿಲ್ಲವೇ ಎಂದು ಕಿಡಿಕಾರಿದರು. ಅಪಮಾನಿಸಿರುವ ಮುಖ್ಯಾಧಿಕಾರಿ ಹಾಗೂ ನಿರ್ಲಕ್ಷ್ಯ ವಹಿಸಿರುವ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ವಿರುದ್ಧ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸುವುದಾಗಿ ಎಚ್ಚರಿಸಿದರು. ಅಲ್ಲದೇ ತಾಲೂಕು ಆಡಳಿತ ಮಂಜೂರು ಮಾಡಿರುವ ಸರ್ಕಾರಿ ಜಮೀನನ್ನು ಪರಿಶೀಲಿಸಿ, ಮೂಲ ಸೌಕರ್ಯಗಳನ್ನು ಕಲ್ಪಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ತಾಕೀತು ಮಾಡಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕೆ ವಾಸವಿದ್ದ ಜಾಗವನ್ನು ಸ್ವಾಧೀನ ಪಡಿಸಿಕೊಂಡ ರಾಜ್ಯ ಸರ್ಕಾರ ಕೊರಚ ಸಮುದಾಯಗಳಿಗೆ ಪರ್ಯಾಯ ನಿವೇಶನ ಕಲ್ಪಿಸಲು ಗಂಭೀರ ಕ್ರಮ ಕೈಗೊಳ್ಳಬೇಕಿತ್ತು. ದಶಗಳ ಕಾಲ ತಡವಾದರೂ ಹೋರಾಟಕ್ಕೆ ಮಣಿದ ಸರ್ಕಾರ, ಜಿಲ್ಲಾ ಹಾಗೂ ತಾಲೂಕು ಆಡಳಿತ ನಿವೇಶನ ಮಂಜೂರು ಮಾಡಿದೆ. ನಿವೇಶನ ಸಿಕ್ಕಷ್ಟಕ್ಕೆ ಹೋರಾಟ ನಿಲ್ಲಲ್ಲ. ನಿವೇಶನಕ್ಕೆ ಮೂಲ ಸೌಕರ್ಯಗಳನ್ನು ಕಲ್ಪಿಸಿ ವಸತಿ ಯೋಜನೆ ಮಂಜೂರು ಮಾಡಿ, ಮನೆಗಳನ್ನು ನಿರ್ಮಾಣ ಮಾಡುವವರೆಗೂ ತಾತ್ವಿಕ ಹೋರಾಟ ನಿರಂತರವಾಗಿ ನಡೆಯಲಿದೆ ಎಂದರು.

ಬುಡಕಟ್ಟು ಅಲೆಮಾರಿಗಳ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಆದರ್ಶ ಎಲ್ಲಪ್ಪ, ಪದಾಧಿಕಾರಿಗಳಾದ ಶಿವಕುಮಾರ್ ಸಾಗರ್, ದಸಂಸ ಹಿರಿಯ ಮುಖಂಡ ಛಲವಾದಿ ನಾರಾಯಣಪ್ಪ, ಜಿಲ್ಲಾ ಸಂಘಟನಾ ಸಂಚಾಲಕ ಶಂಭುಲಿಂಗಸ್ವಾಮಿ, ತಹಸೀಲ್ದಾರ್ ಟಿ.ಜಿ. ಸುರೇಶಾಚಾರ್, ಸಮಾಜ ಕಲ್ಯಾಣ ಅಧಿಕಾರಿ ರಾಮೇಗೌಡ, ಅಲೆಮಾರಿ ಕುಳುವ ಸಂಘದ ಅಧ್ಯಕ್ಷ ಕೊಡಗಹಳ್ಳಿ ಎನ್.ರವಿಕುಮಾರ್, ದಸಂಸ ತಾಲೂಕು ಸಂಚಾಲಕ 'ಏಕ್ಕೂರು ರಾಜು, ಯಾಚೇನಹಳ್ಳಿ ಸೋಮಶೇಖರ್, ಸಂಘಟನಾ ಸಂಚಾಲಕರಾದ ಆಲಗೂಡು ನಾಗರಾಜಮೂರ್ತಿ, ಕಿರಗಸೂರು ರಜನಿ, ಶಾಂತಕುಮಾರ್, ಮೋಹನ್ ಕಾಯಕ, ಕೊರಚ ಮುಖಂಡರಾದ ರಾಜು, ವೆಂಕಟೇಶ್, ಕೊಟ್ರೇಶಿ, ಮಾರಪ್ಪ, ಕುಟುಂಬಗಳ ಮಹಿಳೆಯರು ಮತ್ತು ಮಕ್ಕಳು ಇದ್ದರು.

ಅಂಚೆ ಜನಸಂಪರ್ಕ ಅಭಿಯಾನ


ಅಂಚೆ ಜನ ಸಂಪರ್ಕ ಅಭಿಯಾನದಲ್ಲಿ ಅಂಚೆ ಇನ್ಸ್‌ಪೆಕ್ಟರ್ ಕುಮಾರ್ ಅಭಿಜಿತ್ ಮಾತನಾಡಿದರು.

ಹನಗೋಡು, ಜ.25– ಸಾರ್ವಜನಿಕರ ಅನುಕೂಲಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸೇವೆಗಳನ್ನು ಒಂದೇ ಸೂರಿನಡಿ ತರುವ ನಿಟ್ಟಿನಲ್ಲಿ ಕರ್ನಾಟಕ ಅಂಚೆ ಇಲಾಖೆ ಕಾರ್ಯ ಪ್ರವೃತ್ತವಾಗಿದೆ ಎಂದು ಹುಣಸೂರು ಅಂಚೆ ವಿಭಾಗೀಯ ಇನ್ಸ್‌ಪೆಕ್ಟರ್ ಕುಮಾರ್ ಅಭಿಜಿತ್ ತಿಳಿಸಿದರು.

ಹನಗೋಡಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಅಂಚೆ ಇಲಾಖೆಯಿಂದ ಆಯೋಜಿಸಿದ್ದ ಅಂಚೆ ಜನ ಸಂಪರ್ಕ ಅಭಿಯಾನದಲ್ಲಿ ಮಾತನಾಡಿದ ಅವರು, ಅಭಿಯಾನದಲ್ಲಿ ಇಲಾಖೆಯ ವಿವಿಧ ಉಳಿತಾಯ ಯೋಜನೆಗಳು ಮತ್ತು ಅಂಚೆ ಜೀವ ವಿಮಾ ಸೌಲಭ್ಯಗಳು, ಅಪಘಾತ ವಿಮಾ ಯೋಜನೆಗಳ ಮಾಹಿತಿಗಳನ್ನು ತಿಳಿಸಿ. ಈಗ ಎಲ್ಲೆಡೆ ಜನರು ಅಂಚೆ ಕಚೇರಿ ಉಳಿತಾಯ ಯೋಜನೆಗಳಾದ ಉಳಿತಾಯ ಬ್ಯಾಂಕ್ ಖಾತೆ, ಮಹಿಳಾ ಸಮ್ಮಾನ್ ಉಳಿತಾಯ ಪ್ರಮಾಣ ಪತ್ರ, ಸಾರ್ವಜನಿಕ ಭವಿಷ್ಯ ನಿಧಿ, ಅಂಚೆ ಜೀವ ವಿಮಾ ಸೇವೆ ಮತ್ತು ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಸೇವೆಗಳನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಹುಣಸೂರು ಕೇಂದ್ರ ಕಚೇರಿ ಅಧೀಕ್ಷಕ ಕಿರಣ್, ಕಾಲೇಜಿನ ಪ್ರಾಂಶುಪಾಲ ದೊರೆರಾಜ್, ಪ್ರೌಢಶಾಲೆ ಮುಖ್ಯ ಶಿಕ್ಷಕ ಸಂತೋಷ್ ಕುಮಾರ್, ಅಂಚೆ ಇಲಾಖೆ ನಂದೀಶ್, ಶಿವಕುಮಾರ್, ತನುಜ ಸೇರಿದಂತೆ ಇತರರಿದ್ದರು.

‘ಒಂದು ರಾಷ್ಟ್ರ ಒಂದು ಚುನಾವಣೆ’ ಯೋಜನೆ ಆಡಳಿತದಲ್ಲಿ ಸ್ಥಿರತೆ, ಆರ್ಥಿಕ ಹೊರೆ ಕುಗ್ಗಿಸುತ್ತದೆ

• ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಮತ • ಗಣರಾಜ್ಯೋತ್ಸವದ ಮುನ್ನಾ ದಿನ ರಾಷ್ಟ್ರ ಉದ್ದೇಶಿಸಿ ಭಾಷಣ

ನವದೆಹಲಿ, ಜ.25– ‘ಒಂದು ರಾಷ್ಟ್ರ ಒಂದು ಚುನಾವಣೆ’ ಯೋಜನೆಯು ಆಡಳಿತದಲ್ಲಿ ಸ್ಥಿರತೆಯನ್ನು ಉತ್ತೇಜಿಸುತ್ತದೆ ಹಾಗೂ ಆರ್ಥಿಕ ಹೊರೆಗಳನ್ನು ಕಡಿಮೆ ಮಾಡುವ ಮೂಲಕ ದೇಶದಲ್ಲಿ ಉತ್ತಮ ಆಡಳಿತ ವನ್ನು ಮರು ವ್ಯಾಖ್ಯಾನಿಸುವ ಸಾಮರ್ಥ್ಯ ಹೊಂದಿದೆ ಎಂದು ರಾಷ್ಟ್ರಪತಿಗಳು ಪ್ರತಿಪಾದಿಸಿದರು.

76ನೇ ಗಣರಾಜ್ಯೋತ್ಸವದ ಅಂಗವಾಗಿ ಇಂದು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿದ ದ್ರೌಪದಿ ಮುರ್ಮು ಅವರು, ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಗುರಿಯನ್ನು ಹೊಂದಿರುವ ಪ್ರಸ್ತಾವಿತ ಮಸೂದೆಯ ಮಹತ್ವವನ್ನು ಎತ್ತಿ ತೋರಿಸಿದರು.

ನಮ್ಮ ಸಂವಿಧಾನವು ಜೀವಂತ ದಾಖಲೆಯಾಗಿದೆ. ಏಕೆಂದರೆ ನಾಗರಿಕ ಸದ್ಗುಣಗಳು ಸಹಸ್ರಾರು ವರ್ಷಗಳಿಂದ ನಮ್ಮ



ನೈತಿಕ ದಿಕ್ಸೂಚಿಯ ಭಾಗವಾಗಿವೆ. ಭಾರತೀಯರಾಗಿ ನಮ್ಮ ಸಾಮೂಹಿಕ ಗುರುತಿನ ಅಂತಿಮ ಅಡಿಪಾಯವನ್ನು ಸಂವಿಧಾನ ಒದಗಿಸುತ್ತದೆ. ಇದು ನಮ್ಮನ್ನು ಕುಟುಂಬವಾಗಿ ಒಟ್ಟಿಗೆ ಬಂಧಿಸುತ್ತದೆ ಎಂದು ಹೇಳಿದರು.

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಗಳು, ರಾಷ್ಟ್ರೀಯ ಫೆಲೋಶಿಪ್‌ಗಳು, ವಿದೇಶಿ ವಿದ್ಯಾರ್ಥಿ ವೇತನಗಳು, ಹಾಸ್ಟೆಲ್‌ಗಳು ಮತ್ತು ತರಬೇತಿ ಸೌಲಭ್ಯಗಳನ್ನು ಎಸ್‌ಸಿ ಸಮುದಾಯಗಳ ಯುವಕರಿಗೆ ಒದಗಿಸಲಾಗುತ್ತಿದೆ. ಪ್ರಧಾನ ಮಂತ್ರಿ ಅನುಸೂಚಿತ್ ಜಾತಿ ಅಭ್ಯುದಯ ಯೋಜನೆಯು ಉದ್ಯೋಗ ಮತ್ತು ಆದಾಯ ಗಳಿಕೆಯ ಅವಕಾಶಗಳನ್ನು ಸೇರಿಸುವ ಮೂಲಕ ಎಸ್‌ಸಿ ಸಮುದಾಯಗಳಲ್ಲಿ ಬಡತನವನ್ನು ಕಡಿಮೆ ಮಾಡುವಲ್ಲಿ ಪ್ರಗತಿ ಸಾಧಿಸುತ್ತಿದೆ ಎಂದು ಹೇಳಿದರು.

ಈಗ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಪರಂಪರೆಯ ಶ್ರೀಮಂತಿಕೆಯ ಅಭಿವ್ಯಕ್ತಿಯಾಗಿ ಕಾಣಬಹುದು. ನಮ್ಮ ಸಂಪ್ರದಾಯಗಳು ಮತ್ತು ಪದ್ಧತಿಗಳನ್ನು ಸಂರಕ್ಷಿಸಲು ಮತ್ತು ಪುನರುಜ್ಜೀವನಗೊಳಿಸಲು ಸಂಸ್ಕೃತಿಯ ಕ್ಷೇತ್ರದಲ್ಲಿ ಹಲವಾರು ಅತ್ಯಾಕರ್ಷಕ ಉಪಕ್ರಮಗಳು ನಡೆಯುತ್ತಿವೆ. ಭಾರತವು ಉತ್ತಮ ಭಾಷಾ ವೈವಿಧ್ಯತೆಯ ಕೇಂದ್ರವಾಗಿದೆ. ಈ ಶ್ರೀಮಂತಿಕೆಯನ್ನು ಸಂರಕ್ಷಿಸಲು ಮತ್ತು ಆಚರಿಸಲು, ಸರ್ಕಾರವು ಅಸ್ಸಾಮಿ, ಬಂಗಾಳಿ, ಮರಾಠಿ, ಪಾಲಿ ಮತ್ತು ಪ್ರಾಕೃತ ಭಾಷೆಗಳನ್ನು ಶಾಸ್ತ್ರೀಯ ಭಾಷೆಗಳಾಗಿ ಗುರುತಿಸಿದೆ. ಈ ವರ್ಗದಲ್ಲಿ ಈಗಾಗಲೇ ತಮಿಳು, ಸಂಸ್ಕೃತ, ತೆಲುಗು, ಕನ್ನಡ, ಮಲಯಾಳಂ ಮತ್ತು ಒಡಿಯಾ ಸೇರಿವೆ. ಸರ್ಕಾರವು ಈಗ 11 ಶಾಸ್ತ್ರೀಯ ಭಾಷೆಗಳಲ್ಲಿ ಸಂಶೋಧನೆಯನ್ನು ಪೂರ್ವಭಾವಿಯಾಗಿ ಉತ್ತೇಜಿಸುತ್ತಿದೆ ಎಂದರು.

ನಮಗೆ 1947 ರಲ್ಲಿ ಸ್ವಾತಂತ್ರ್ಯ ಸಿಕ್ಕಿತು, ಆದರೆ ವಸಾಹತುಶಾಹಿ ಮನಸ್ಥಿತಿಯ ಅನೇಕ ಅವಶೇಷಗಳು ನಮ್ಮಲ್ಲಿ ಬಹಳ ದಿನಗಳಿಂದ ಉಳಿದುಕೊಂಡಿವೆ. ಇತ್ತೀಚೆಗೆ ಆ ಮನಸ್ಥಿತಿಯನ್ನು ಬದಲಾಯಿಸಲು ನಾವು ಸಂಘಟಿತ ಪ್ರಯತ್ನಗಳನ್ನು ನೋಡುತ್ತಿದ್ದೇವೆ. ಅಂತಹ ಪ್ರಯತ್ನಗಳಲ್ಲಿ ಅತ್ಯಂತ ಗಮನಾರ್ಹವಾದದ್ದು ಭಾರತೀಯ ದಂಡ ಸಂಹಿತೆ, ಅಪರಾಧ ಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯನ್ನು ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮಗಳೊಂದಿಗೆ ಬದಲಾಯಿಸುವ ನಿರ್ಧಾರ. ಭಾರತೀಯ ನ್ಯಾಯಶಾಸ್ತ್ರದ ಸಂಪ್ರದಾಯಗಳನ್ನು ಆಧರಿಸಿ, ಹೊಸ ಕ್ರಿಮಿನಲ್ ಕಾನೂನುಗಳು ಶಿಕ್ಷೆಯ ಬದಲು ನ್ಯಾಯ ವಿತರಣೆಯನ್ನು ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ಕೇಂದ್ರದಲ್ಲಿ ಇರಿಸುತ್ತವೆ. ಇದಲ್ಲದೆ, ಹೊಸ ಕಾನೂನುಗಳು ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ಎದುರಿಸಲು ಹೆಚ್ಚಿನ ಆದ್ಯತೆಯನ್ನು ನೀಡುತ್ತವೆ ಎಂದು ಹೇಳಿದ್ದಾರೆ.

ಕಲ್ಲು ಚಪ್ಪಡಿ ಬಿದ್ದು ಸಹೋದರನ ನೋಡಲು ಬಿಹಾರದಿಂದ ಬಂದಿದ್ದವನ ದುರಂತ ಸಾವು

ಮೈಸೂರು, ಜ.25(ಎಸ್‌ಬಿಡಿ)– ಗ್ರಾನೈಟ್ ಫ್ಯಾಕ್ಟರಿಯಲ್ಲಿರುವ ಸಹೋದರನನ್ನು ನೋಡಲು ಬಂದಿದ್ದ ಬಿಹಾರ ಮೂಲದ 17 ವರ್ಷದ ಹುಡುಗ ಫ್ಯಾಕ್ಟರಿಯಲ್ಲಿ ಕಲ್ಲು ಚಪ್ಪಡಿ ಬಿದ್ದು ಸಾವನ್ನಪ್ಪಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ತಾಲೂಕಿನ ಇಲವಾಲ ಹೋಬಳಿ ಮೈದನಹಳ್ಳಿಯ ಮಾರುತಿ ಗ್ರಾನೈಟ್ ಫ್ಯಾಕ್ಟರಿಯಲ್ಲಿ ಸಹಾಯಕನಾಗಿ ಕೆಲಸ ಮಾಡಿಕೊಂಡಿರುವ ಬಿಹಾರ ಮೂಲದ ಅಜರುಲ್ಲಾ ಇಸ್ಲಾಂನ ಸಹೋದರ ಶಹನೂರ ಅಲಂ(17) ದುರಂತದಲ್ಲಿ ಸಾವನ್ನಪ್ಪಿದ್ದಾನೆ.

ಈ ಮೊದಲೇ ತಮ್ಮ ಗ್ರಾಮದ ಸ್ನೇಹಿತರು ಕೆಲಸ ಮಾಡುತ್ತಿರುವ ಮಾರುತಿ ಗ್ರಾನೈಟ್ ಫ್ಯಾಕ್ಟರಿಗೆ 2 ತಿಂಗಳ ಹಿಂದೆ ಅಜರುಲ್ಲಾ ಇಸ್ಲಾಂ ಹೆಲ್ಪರ್ ಆಗಿ ಸೇರಿದ್ದು, ಎಲ್ಲರೊಂದಿಗೆ ಅಲ್ಲಿಯೇ ನೆಲೆಸಿದ್ದಾನೆ. ಈತನನ್ನು ನೋಡಲೆಂದು ಜ.19ರಂದು ಊರಿಂದ ಸಹೋದರ ಶಹನೂರ ಆಲಂ ಬಂದಿದ್ದ. ಕಳೆದ ಗುರುವಾರ ಮಧ್ಯಾಹ್ನ ಕ್ರೇನ್ ಮೂಲಕ ಕಲ್ಲುಗಳನ್ನು ಸಾಗಿಸುವುದನ್ನು ನಿಂತು ನೋಡುತ್ತಿದ್ದಾಗ ಆಕಸ್ಮಿಕವಾಗಿ ಕಲ್ಲು ಜಾರಿ ಶಹನೂರ ಅಜಂ ತೊಡೆಯ ಮೇಲೆ ಬಿದ್ದಿದೆ ಗಂಭೀರವಾಗಿ ಗಾಯಗೊಂಡಿದ್ದ ಆತನಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ ಅಷ್ಟರಲ್ಲಿ ಆತ ಮೃತಪಟ್ಟಿದ್ದಾನೆ. ಈ ಸಂಬಂಧ ದೂರಿನನ್ವಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದ ಆರೋಪದಡಿ ಫ್ಯಾಕ್ಟರಿ ಮಾಲೀಕ ಹಾಗೂ ಕ್ರೇನ್ ಆಪರೇಟರ್ ವಿರುದ್ಧ ಇಲವಾಲ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಯೋಗ್ಯಾಸ್ ಯಂತ್ರೋಪಕರಣ ಸರಬರಾಜು ನೆಪದಲ್ಲಿ 16 ಲಕ್ಷ ವಂಚನೆ

ಮೈಸೂರು, ಜ.25(ಎಸ್‌ಬಿಡಿ)– ಬಯೋಗ್ಯಾಸ್ ವ್ಯವಹಾರಕ್ಕೆ ಅಗತ್ಯ ಯಂತ್ರೋಪಕರಣಗಳನ್ನು ಕಡಿಮೆ ಬೆಲೆಗೆ ಒದಗಿಸುವುದಾಗಿ ನಂಬಿಸಿ ವ್ಯಕ್ತಿಯೊಬ್ಬರಿಗೆ 16 ಲಕ್ಷಕ್ಕೂ ಹೆಚ್ಚು ಹಣ ವಂಚಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಯೋಗ್ಯಾಸ್ ಸಂಬಂಧಿತ ವ್ಯಾಪಾರಸ್ಥರೊಬ್ಬರಿಗೆ ಕರೆ ಮಾಡಿದ ಅಪರಿಚಿತ ವ್ಯಕ್ತಿ, ವ್ಯವಹಾರದ ಬಗ್ಗೆ ಚರ್ಚಿಸಿದ್ದಾನೆ. ಬಳಿಕ ನಿಮ್ಮ ವ್ಯವಹಾರಕ್ಕೆ ಅಗತ್ಯವಾದ ಯಂತ್ರೋಪಕರಣಗಳು ಸೇರಿದಂತೆ ಎಲ್ಲಾ ಪರಿಕರಗಳನ್ನು ಕಡಿಮೆ ಬೆಲೆಗೆ ಒದಗಿಸುತ್ತೇವೆ. ನೀವು ಮುಂಗಡವಾಗಿ 16 ಲಕ್ಷ ರೂ. ಪಾವತಿಸಿದರೆ 36 ಲಕ್ಷ ಮೌಲ್ಯದ ಯಂತ್ರೋಪಕರಣಗಳನ್ನು ನೀಡುತ್ತೇವೆ. ಅಲ್ಲದೆ ಅದರ ದುಪ್ಪಟ್ಟು ಹಣವನ್ನು ಕೆಲ ದಿನಗಳ ಬಳಿಕ ವಾಪಸ್ ನೀಡುತ್ತೇವೆ ಎಂಬ ಭರ್ಜರಿ ಆಫರ್ ನೀಡಿದ್ದಾನೆ.

ಇದನ್ನು ನಂಬಿದ ವ್ಯಾಪಾರಸ್ಥ, ಹಂತ ಹಂತವಾಗಿ 16.80 ಲಕ್ಷ ರೂ. ಹಣ ವರ್ಗಾವಣೆ ಮಾಡಿದ್ದಾರೆ. ನಂತರ ಆಫರ್ ನೀಡಿದ್ದ ವ್ಯಕ್ತಿ ಕರೆಯನ್ನೂ ಸ್ವೀಕರಿಸಿಲ್ಲ, ಸಂದೇಶಕ್ಕೂ ಪ್ರತಿಕ್ರಿಯಿಸಿಲ್ಲ. ಬಳಿಕ ಮೋಸ ಹೋಗಿರುವುದಾಗಿ ತಿಳಿದು ದೂರು ದಾಖಲಿಸಿದ್ದಾರೆ.

ಮನೆಯಲ್ಲಿಟ್ಟಿದ್ದ ಚಿನ್ನಾಭರಣ, ಬೆಳ್ಳಿ ಪದಾರ್ಥ ಕಳವು

ಮೈಸೂರು, ಜ.25(ಎಸ್‌ಬಿಡಿ)– ಮನೆಯ ಬೀರುವಿನಲ್ಲಿದ್ದ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳು ಕಳ್ಳತನವಾಗಿರುವುದಾಗಿ ಜೆಎಸ್‌ಎಸ್ ಲೇಔಟ್‌ನ ಮಹಿಳೆಯೊಬ್ಬರು ಪೊಲೀಸರಿಗೆ ದೂರು ನೀಡಿದ್ದಾರೆ.

ತಾಯಿಯೊಂದಿಗೆ ಡಿಸೆಂಬರ್ 25ರಂದು ಬೆಂಗಳೂರಿನಲ್ಲಿ ಸಹೋದರಿ ಮನೆಗೆ ಹೋಗುವಾಗ ಚಿನ್ನಾಭರಣಗಳನ್ನು ತೆಗೆದುಕೊಂಡು ಹೋಗಿದ್ದೆ. ಡಿ.30ರಂದು ವಾಪಸ್ ಬಂದಾಗ ಚಿನ್ನಾಭರಣವನ್ನು ಮನೆಯ ಬೀರುವಿನಲ್ಲಿಟ್ಟಿದ್ದೆ. ಮೊನ್ನೆ ಹೊರ ಹೋಗಿದ್ದಾಗ ನನ್ನ ತಾಯಿ ಕರೆ ಮಾಡಿ ಚಿನ್ನದ ಸರ ಹಾಗೂ ಉಂಗುರ ಕಾಣಿಸುತ್ತಿಲ್ಲ ಎಂದರು. ಕೂಡಲೇ ಮನೆಗೆ ಬಂದು ಬೀರುವಿನ ಲಾಕ್ ತೆಗೆದು ನೋಡಿದಾಗ ಅದರಲ್ಲಿದ್ದ 7.50 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 35 ಸಾವಿರ ಮೌಲ್ಯದ ಬೆಳ್ಳಿ ಪದಾರ್ಥಗಳು ಕಳ್ಳತನವಾಗಿರುವುದು ಗೊತ್ತಾಯಿತು ಎಂದು ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಉದಯಗಿರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಓಪಿಎಸ್ ಜಾರಿ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಅನುದಾನಿತ ಶಾಲಾ ಕಾಲೇಜು ನೌಕರರ ಮನವಿ

ಮೈಸೂರು, ಜ.25(ಎಸ್‌ಪಿಎನ್)– ಅನುದಾನಿತ ಶಾಲಾ ಕಾಲೇಜು ನೌಕರರಿಗೆ ಓಪಿಎಸ್ ಜಾರಿ ಸೇರಿದಂತೆ ಇತರೆ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಪಿಂಚಣಿ ವಂಚಿತ ಅನುದಾನಿತ ಶಾಲಾ ಕಾಲೇಜು ನೌಕರರ ಸಂಘ ಜಿಲ್ಲಾ ಘಟಕದ ಪದಾಧಿಕಾರಿಗಳು, ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಮೈಸೂರು ನಾರಾಯಣ ಶಾಸ್ತ್ರಿ ರಸ್ತೆಯ ಶಾಂತಲಾ ಟಾಕೀಸ್ ಪೋಸ್ಟ್ ಆಫೀಸ್ ಬಳಿ ಪೋಸ್ಟ್ ಕಾರ್ಡ್‌ಗಳ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಮನವಿ ಮಾಡಲಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ತನ್ನ ಪಕ್ಷದ ಪ್ರಣಾಳಿಕೆಯಲ್ಲಿ ಅನುದಾನಿತ ನೌಕರರಿಗೂ ಎನ್‌ಪಿಎಸ್ ಇಲ್ಲವೇ ಓಪಿಎಸ್ ಜಾರಿಗೊಳಿಸುವುದಾಗಿ ಭರವಸೆ ನೀಡಿತ್ತು. ಆದರೆ, ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡು ಎರಡು ವರ್ಷಗಳಾಗುತ್ತಿದ್ದರೂ ಪ್ರಣಾಳಿಕೆಯಲ್ಲಿ ಅನುದಾನಿತ ಶಾಲಾ ಕಾಲೇಜು ನೌಕರರಿಗೆ



ಓಪಿಎಸ್ ಜಾರಿ ಸೇರಿದಂತೆ ಇತರೆ ಬೇಡಿಕೆಗಳ ಈಡೇರಿಸುವಂತೆ ಒತ್ತಾಯಿಸಿ ಅನುದಾನಿತ ಶಾಲಾ ಕಾಲೇಜು ನೌಕರರ ಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳು, ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪತ್ರ ಬರೆದು ಮನವಿ ಮಾಡಿದರು.

ನೀಡಿದ್ದ ಭರವಸೆಯನ್ನು ಈಡೇರಿಸಲು ಮುಂದಾಗಿಲ್ಲ ಎಂದು ಆರೋಪಿಸಿದರು.

ಹಾಗಾಗಿ ಫೆ.7ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯಾದ್ಯಂತ ಅಂದಾಜು 25 ಸಾವಿರಕ್ಕೂ ಹೆಚ್ಚು ಅನುದಾನಿತ ಶಾಲಾ ಕಾಲೇಜು ನೌಕರರ ಕುಟುಂಬ ಸಮೇತ ಭಾಗವಹಿಸಿ ಸಾಂಕೇತಿಕ ಪ್ರತಿಭಟನೆ ನಡೆಸಲಾಗುವುದು. ಆಗಲೂ ನಮ್ಮ ಬೇಡಿಕೆಗೆ ಸರ್ಕಾರ ಸ್ಪಂದಿಸದಿದ್ದರೆ, ಹಂತಹಂತವಾಗಿ ಸರ್ಕಾರದ ವಿರುದ್ಧ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಪ್ರತಿಭಟನಾಕಾರರು ಮಾಹಿತಿ ನೀಡಿದರು. ಪತ್ರ ಚಳವಳಿಯಲ್ಲಿ ಡಾ.ಎಸ್.ವಿಶ್ವನಾಥ್, ಕಿರಣ್‌ಕುಮಾರ್, ಮಂಜುನಾಥ್, ಮೃತ್ಯುಂಜಯ ಸ್ವಾಮಿ, ಹೇಮಂತ್‌ನಾಯಕ್, ಶಶಿಕುಮಾರ್, ದೊಡ್ಡ ಕಾಳೇಗೌಡ, ಪರಶಿವಮೂರ್ತಿ, ನವೀನ್ ಕುಮಾರ್ ಸೇರಿದಂತೆ ಇತರರಿದ್ದರು.

ತಾರಸಿ ತೋಟದಿಂದ ಹಣ ಉಳಿತಾಯ; ಆರೋಗ್ಯವೂ ವೃದ್ಧಿಸಲಿದೆ

ಹವ್ಯಾಸಿ ತಾರಸಿತೋಟ ಕೃಷಿಕರಾದ ಪ್ರತಿಮಾ ಅಡಿಗ ಅಭಿಮತ

ಮೈಸೂರು, ಜ.25(ಎಂಕೆ)– ತಾರಸಿತೋಟದಿಂದ ಹಣ ಉಳಿತಾಯವಾಗುವುದು ಮಾತ್ರವಲ್ಲದೇ ಆರೋಗ್ಯವೂ ವೃದ್ಧಿಯಾಗುತ್ತದೆ ಎಂದು ಹವ್ಯಾಸಿ ತಾರಸಿತೋಟ ಕೃಷಿಕರಾದ ಪ್ರತಿಮಾ ಅಡಿಗ ತಿಳಿಸಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ಸ್ವದೇಶಿ ಮೇಳದಲ್ಲಿ ತಾರಸಿತೋಟ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ನಮ್ಮ ಮನೆಗೆ ಬೇಕಾದ ಶೇ.85 ರಷ್ಟು ತರಕಾರಿಗಳನ್ನು ಮನೆಯ ತಾರಸಿತೋಟದಿಂದಲೇ ಪಡೆಯುತ್ತಿದ್ದೇವೆ. ಇದರಿಂದ ಶೇ.70 ರಷ್ಟು ಹಣ ಉಳಿತಾಯವಾಗುತ್ತಿದೆ ಎಂದರು.

ನಮ್ಮ ಮನೆಯ ಮುಂದೆ ಕೈತೋಟ ನಿರ್ಮಿಸಲು ಸಾಕಷ್ಟು ಸ್ಥಳಾವಕಾಶ ಇಲ್ಲದಿದ್ದಲ್ಲಿ ಮನೆಯ ಮಾಳಿಗೆ (ತಾರಸಿ) ಮೇಲೆ ಅಂದದ ತೋಟ ನಿರ್ಮಿಸಿ ಸಾವಯವ ಹಣ್ಣು ತರಕಾರಿಗಳನ್ನು ಬೆಳೆಯಬಹುದು. ದೈನಂದಿನ ಅಡುಗೆಗೆ ಬೇಕಾದ ವಿವಿಧ ರೀತಿ ತರಕಾರಿ, ಆಯ್ದ ಹಣ್ಣಿನ ಬೆಳೆಗಳು, ಸೊಪ್ಪುಗಳಿಂದ ಹಿಡಿದು ಅನಾರೋಗ್ಯದ ಸಂದರ್ಭದಲ್ಲಿ ಮನೆಮದ್ದಿಗೆ ಬಳಸುವ ಗಿಡಮೂಲಿಕೆಗಳನ್ನು ಬೆಳೆಯಬಹುದು ಎಂದು ತಿಳಿಸಿದರು.

ಮನೆಯಲ್ಲೇ ಇರುವ ಹೆಣ್ಣು ಮಕ್ಕಳು ಮನೆ ಕೆಲಸ ಮುಗಿದ ನಂತರ ತಾರಸಿ ತೋಟದಲ್ಲಿ ಸಮಯ ಕಳೆಯುವುದರ ಜೊತೆಗೆ ಹಣ ಉಳಿತಾಯ ಮಾಡಬಹುದು. ಅಲ್ಲದೆ ಮನೆಯ ವಾತಾವರಣವೂ ಬದಲಾಗಲಿದ್ದು, ಬೇಸಿಗೆಯಲ್ಲಿ ಮನೆಯೊಳಗೆ ತಣ್ಣನೆಯ ವಾತಾವರಣವನ್ನು ಅನುಭವಿಸಬಹುದು. ಕಡಿಮೆ



ಸ್ವದೇಶಿ ಮೇಳದಲ್ಲಿ ತಾರಸಿ ತೋಟ ತರಬೇತಿ ಕಾರ್ಯಾಗಾರದಲ್ಲಿ ಹವ್ಯಾಸಿ ತಾರಸಿತೋಟ ಕೃಷಿಕರಾದ ಪ್ರತಿಮಾ ಅಡಿಗ ಮಾಹಿತಿ ನೀಡಿದರು.

ಸ್ಥಳಾವಕಾಶದಲ್ಲಿ ಹೆಚ್ಚೆಚ್ಚು ತರಕಾರಿ ಮತ್ತು ಹೂವಿನ ಗಿಡಗಳನ್ನು ಬೆಳೆಯಲು ತಾರಸಿ ತೋಟ ಕೃಷಿ ಅನುಕೂಲವಾಗಿದೆ ಎಂದು ಹೇಳಿದರು.

ನಂತರ ಮಹಿಳಾ ಸಮಾವೇಶ ನಡೆಯಿತು. ಸಂಜೆ ವೇಳೆ ಗಾಯಕರಾದ ಎಸ್.ಸುಬ್ರಮಣ್ಯ ಮತ್ತು ದೇವಾನಂದ ವರಪ್ರಸಾದ್ ಅವರಿಂದ ಜಾನಪದ ಗೀತಗಾಯನ ಕಾರ್ಯಕ್ರಮ ನಡೆಯಿತು. ಸ್ವದೇಶಿ ಜಾಗರಣ ಮಂಚ್‌ನ ಅಖಿಲ ಭಾರತೀಯ ಸಹ ಮಹಿಳಾ ಪ್ರಮುಖ್ ರಶ್ಮಿ ವಿಜಯ್‌ಕುಮಾರ್, ಬೆಂಗಳೂರು ಮಹಾನಗರ ಸಂಯೋಜಕಿ ಮನಿಲಾ ಮತ್ತಿತರರಿದ್ದರು.

ಬಂಡೀಪುರದಲ್ಲಿ ಲಾರಿಯಿಂದ ಸುರಿದ ಅಕ್ಕಿ ತಿನ್ನಲು ಮುಂದಾದ ಕಾಡಾನೆಗಳು!

ಅರ್ಧ ಗಂಟೆಗೂ ಹೆಚ್ಚು ಕಾಲ ಸಂಚಾರ ಸ್ಥಗಿತ



ಬಂಡೀಪುರದ ಊಟಿ ರಸ್ತೆಯಲ್ಲಿ ಸುರಿದಿದ್ದ ಅಕ್ಕಿ ತಿನ್ನುತ್ತಿರುವ ಕಾಡಾನೆಗಳು.

ಬಂಡೀಪುರ, ಜ.25(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ಊಟಿ ಹೆದ್ದಾರಿಯಲ್ಲಿ ದಿನಸಿ ಪದಾರ್ಥ ತುಂಬಿದ್ದ ಲಾರಿಯೊಂದರಿಂದ ಬಿದ್ದ ಅಕ್ಕಿ ತಿನ್ನಲು ಎರಡು ಕಾಡಾನೆಗಳು ಮುಖ್ಯ ರಸ್ತೆಯಲ್ಲಿಯೇ ನಿಂತುಕೊಂಡಿದ್ದ ಹಿನ್ನೆಲೆಯಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಮೈಸೂರು ಭಾಗದಿಂದ ಗುಂಡ್ಲುಪೇಟೆ ಮಾರ್ಗವಾಗಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ–67ರ ಊಟಿ ರಸ್ತೆಯಲ್ಲಿ ಶುಕ್ರವಾರ ಸಂಜೆ ದಿನಸಿ ಲೋಡ್ ಸಾಗಿಸುತ್ತಿದ್ದ ಲಾರಿಯೊಂದರಿಂದ ರಸ್ತೆಗೆ ಅಕ್ಕಿ ಚೆಲ್ಲಿದೆ. ಮೂಟೆಯಿಂದ ಅಕ್ಕಿ ರಸ್ತೆಯುದ್ದಕ್ಕೂ ಚೆಲ್ಲಾಡಿದ್ದ ವಾಸನೆ ಗ್ರಹಿಸಿದ ಸಲಗ ಸೇರಿದಂತೆ ಎರಡು ಕಾಡಾನೆಗಳು ರಸ್ತೆಯಲ್ಲಿ ಚೆಲ್ಲಾಡಿದ್ದ ಅಕ್ಕಿಯನ್ನು ತಿನ್ನಲು ಬಂದಿದ್ದವು.

ಆ ಆನೆಗಳು ರಸ್ತೆ ಮಧ್ಯದಲ್ಲಿಯೇ ನಿಂತುಕೊಂಡು ಸೊಂಡಲಿನಲ್ಲಿ ಅಕ್ಕಿ ಬಳಿದುಕೊಂಡು ತಿನ್ನಲಾರಂಭಿಸಿದ್ದರಿಂದ ವಾಹನ ಸವಾರರು ಪರದಾಡಿದರು. ಆನೆಗಳು ರಸ್ತೆಗೆ ಅಡ್ಡ ನಿಂತಿದ್ದರಿಂದ ಊಟಿಯಿಂದ ಮೈಸೂರು ಹಾಗೂ ಮೈಸೂರಿನಿಂದ ಊಟಿ ಕಡೆಗೆ ಸಂಚರಿಸುವ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಎರಡೂ ಬದಿಯಲ್ಲೂ ಸುಮಾರು ಎರಡು ಕಿ.ಮೀ ದೂರ ವಾಹನಗಳು ನಿಂತುಕೊಳ್ಳಬೇಕಾದ ಅನಿವಾರ್ಯತೆ ಎದುರಾಯಿತು.

ಅರಣ್ಯದ ರಸ್ತೆಯಲ್ಲಿ ವಾಹನಗಳು ಸರದಿ ಸಾಲಿನಲ್ಲಿ ನಿಂತಿದ್ದನ್ನು ಗಮನಿಸಿದ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ತೆರಳಿ ರಸ್ತೆಯಲ್ಲಿ ಅಕ್ಕಿ ತಿನ್ನುತ್ತಿದ್ದ ಕಾಡಾನೆಗಳನ್ನು ಕಾಡಿಗೆ ಓಡಿಸಲು ಪ್ರಯತ್ನಿಸಿದರು. ಆದರೆ, ಆ ಆನೆಗಳು ಜಗ್ಗದೇ ಅಕ್ಕಿ ತಿನ್ನಲು ಮಗ್ನವಾಗಿದ್ದರಿಂದ ಅರಣ್ಯ ಸಿಬ್ಬಂದಿಗಳ ಪ್ರಯತ್ನ ವಿಫಲವಾಯಿತು. ರಸ್ತೆ ಮೇಲಿದ್ದ ಅಕ್ಕಿ ಸೊಂಡಿಲಿಗೆ ಸಿಕ್ಕುವವರೆಗೂ ಬಳಿದುಕೊಂಡು ತಿಂದ ಆ ಆನೆಗಳು ಅಂತಿಮವಾಗಿ ರಸ್ತೆ ಬದಿಗೆ ಸರಿದು ನಿಂತವು. ಈ ವೇಳೆ ಕೆಲ ವಾಹನ ಸವಾರರು ಧೈರ್ಯ ಮಾಡಿ ಮುಂದೆ ಸಾಗಿದರು.

ಕೆಲ ಸಮಯದ ನಂತರ ಮತ್ತೆ ಮತ್ತೆ ರಸ್ತೆಗೆ ಬಂದು ಅಳಿದುಳಿದ ಅಕ್ಕಿ ಆಯ್ದುಕೊಳ್ಳುವ ಪ್ರಯತ್ನ ಮಾಡುತ್ತಿದ್ದ ಕಾಡಾನೆಗಳನ್ನು ವಾಪಸ್ಸು ಕಳಿಸಲು ಅರಣ್ಯ ಸಿಬ್ಬಂದಿ ಹೈರಾಣಾದರೆ, ಮುಂದಕ್ಕೆ ಹೋಗಲಾಗದೇ ವಾಹನ ಸವಾರರು ಪರದಾಡಿದರು.

ಲಾರಿಗಳನ್ನೇ ಅಡ್ಡಗಟ್ಟುವ ಒಂಟಿಸಲಗ: ಬಂಡೀಪುರದ ಊಟಿ ರಸ್ತೆಯಲ್ಲಿ ಒಂಟಿಸಲಗವೊಂದು ಕಳೆದ ಒಂದು ತಿಂಗಳಿಂದ ಲಾರಿಗಳನ್ನೇ ಅಡ್ಡಗಟ್ಟುತ್ತಿದ್ದು, ದಿನಸಿ ಹಾಗೂ ತರಕಾರಿ ಮೂಟೆ ಎಳೆದುಕೊಳ್ಳುವ ಪ್ರಯತ್ನ ಮಾಡುತ್ತಲೇ ಇದೆ. ಬಂಡೀಪುರದ ಹಳೆಯ ಕ್ಯಾಂಪಸ್‌ನಿಂದ ಸ್ವಲ್ಪ ದೂರದಲ್ಲಿಯೇ ಒಂಟಿಸಲಗ ಲಾರಿಗಳನ್ನು ಅಡ್ಡಗಟ್ಟುತ್ತಿರುವುದರಿಂದ ವಾಹನ ಸವಾರರು ಆತಂಕಗೊಳ್ಳುವಂತಾಗಿದೆ. ಜನವರಿ ಮೊದಲ ವಾರದಿಂದ ಇದುವರೆಗೆ ಮೂರು ಬಾರಿ ಲಾರಿಗಳನ್ನು ಸಲಗ ಅಡ್ಡಗಟ್ಟಿದೆ. ಕಳೆದ ವಾರ ತರಕಾರಿ ಲಾರಿಯೊಂದನ್ನು ಅದೇ ಸಲಗ ಅಡ್ಡಗಟ್ಟಿ, ತರಕಾರಿ ಮೂಟೆಯೊಂದನ್ನು ಎಳೆದುಕೊಂಡಿತ್ತು. ಇದರಿಂದ ಆ ವೇಳೆ ಲಾರಿ ಹಿಂದೆ ಸಾಗುತ್ತಿದ್ದ ಕಾರು, ಮಿನಿ ಬಸ್ ಹಾಗೂ ಕೆಲ ಬೈಕ್ ಸವಾರರು ಗಾಬರಿಗೆ ಒಳಗಾಗಿ ತಮ್ಮ ವಾಹನವನ್ನು ಹಿಂದಕ್ಕೆ ಚಲಿಸುವ ಮೂಲಕ ಆನೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಟ್ರಾಫಿಕ್ ಜಾಮ್ ಮಾಡಿದರು. ಈ ವೇಳೆ ಆ ಆನೆ ವಾಹನಗಳ ನಡುವೆಯೇ ತರಕಾರಿ ಮೂಟೆ ಎಳೆದುಕೊಂಡು ತಿನ್ನಲಾರಂಭಿಸಿತ್ತು. ಅರಣ್ಯ ಸಿಬ್ಬಂದಿಗಳ ತಂಡ ಅಂದು ಆನೆಯನ್ನು ಓಡಿಸಿ, ಟ್ರಾಫಿಕ್ ಜಾಮ್ ತೆರವು ಮಾಡಿತ್ತು.

ಗಸ್ತು ಹೆಚ್ಚಿಸಿ: ಊಟಿ ರಸ್ತೆಯಲ್ಲಿ ಸಲಗ, ವೈಯ್ನಾಡು ರಸ್ತೆಯಲ್ಲಿ ಹೆಣ್ಣಾನೆಯೊಂದು ಪದೇ ಪದೆ ವಾಹನಗಳ ಮೇಲೆ ದಾಳಿ ಮಾಡಲು ಪ್ರಯತ್ನಿಸುತ್ತಿದ್ದು, ಅನಾಹುತಕ್ಕೂ ಮುನ್ನ ಅರಣ್ಯ ಇಲಾಖೆ ಗಸ್ತು ಹೆಚ್ಚಳ ಮಾಡಿ ಆನೆಗಳಿಂದ ವಾಹನ ಸವಾರರಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ವಾಹನ ಸವಾರರು ಮನವಿ ಮಾಡಿದ್ದಾರೆ. ವೈಯ್ನಾಡು ರಸ್ತೆಯಲ್ಲಿ ಮೂಲೆಹೊಳೆ ಸಮೀಪ ಹೆಣ್ಣಾನೆ ಬೈಕ್ ಸವಾರರನ್ನೇ ಅಟ್ಟಾಡಿಸುತ್ತಿದ್ದು, ಯಾಮಾರಿದರೆ ಅನಾಹುತ ಸಂಭವಿಸುತ್ತದೆ. ಈ ಹಿನ್ನೆಲೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಸಂಕ್ರಾಂತಿಕಿ ವಸ್ತುನ್ನಾಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ರುದ್ರ ಗರುಡ ಪುರಾಣ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಮಾರ್ಕೋ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಫಾರೆಸ್ಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫಾರೆಸ್ಟ್ (ಕ)	5 ಪ್ರದರ್ಶನಗಳು
ರಾಜಕಮಲ್	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ಭೂ ಮಂತರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಕೈ ಫೋರ್ಸ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಮ್ಯಾಕ್ಸ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರಾಯಲ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ರಾ.7.15ಕ್ಕೆ, ಎಮರ್ಜೆನ್ಸಿ (ಹಿಂ): ಸಂ.4.15ಕ್ಕೆ, ಭೂ ಮಂತರ್ (ಕ): ರಾ.10.10ಕ್ಕೆ.
ಸ್ಕ್ರೀನ್ 2	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.10.35ಕ್ಕೆ, ಕುಟುಂಬಸ್ಥನ್ (ತ): ಮ.1ಕ್ಕೆ, ಸಂಕ್ರಾಂತಿಕಿ ವಸ್ತುನಾಂ (ತೆ): ಸಂ.4.05ಕ್ಕೆ, ಭೂ ಮಂತರ್ (ಕ): ರಾ.7.05ಕ್ಕೆ, ಟ್ವೈಲೈಟ್ ಆಫ್ ದಿ ವಾರಿಯರ್ಸ್ ವಾಲ್ಡ್ ಇನ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.10.25ಕ್ಕೆ, ಮಿ. ಹೌಸ್‌ಕೀಪಿಂಗ್ (ತ): ಮ.1.05ಕ್ಕೆ, ರಾಮಾಯಣ ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ (ಹಿಂ): ಸಂ.4.10ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7.05ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.20ಕ್ಕೆ, ಮ್ಯಾಕ್ಸ್ (ಕ): ಮ.1.20ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಂಚಾರ ಸುರಕ್ಷೆ ಜಾಗೃತಿ



ಖಾಸಗಿ ಆಂಬುಲೆನ್ಸ್ ಚಾಲಕರಿಗೆ ರಸ್ತೆ ಸಂಚಾರ ಸುರಕ್ಷತಾ ಜಾಗೃತಿ ಮೂಡಿಸಲಾಯಿತು

ಮೈಸೂರು, ಜ.25(ಎಂಕೆ)– ದೇವರಾಜ ಸಂಚಾರ ಪೊಲೀಸ್ ಠಾಣೆ ವತಿಯಿಂದ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ಖಾಸಗಿ ಆಂಬುಲೆನ್ಸ್ ಚಾಲಕರಿಗೆ ರಸ್ತೆ ಸಂಚಾರ ಸುರಕ್ಷೆ ಹಾಗೂ ಪಾಲಿಸಬೇಕಾದ ನಿಯಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ನಗರದ ಟೌನ್‌ಹಾಲ್ ಆವರಣದಲ್ಲಿ ದೇವರಾಜ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮಮತ, ರೋಗಿಯ ಸುರಕ್ಷತೆ ಜೊತೆಗೆ ನಿಮ್ಮ ಸುರಕ್ಷತೆ ದೃಷ್ಟಿಯಿಂದ ಸೀಟ್ ಬೆಲ್ಟ್ ಧರಿಸಬೇಕು. ವಾಹನ ಚಲಾಯಿಸುವಾಗ ಮೊಬೈಲ್ ಫೋನ್ ಬಳಸಬಾರದು. ಹಾಗೆಯೇ ರಸ್ತೆ ಸಂಚಾರ ನಿಯಮಗಳನ್ನು ಅರಿತುಕೊಳ್ಳಬೇಕು ಎಂದು ಎಚ್ಚರಿಸಿದರು. ಸಬ್‌ಇನ್ಸ್‌ಪೆಕ್ಟರ್ ಚಂದ್ರಶೇಖರ್, ಎಎಸ್‌ಐ ಪ್ರಕಾಶ್, ಸಿಬ್ಬಂದಿಗಳಾದ ಎಸ್.ಮಹೇಶ್, ಜಗದೀಶ್ ಮತ್ತಿತರರಿದ್ದರು.

ಸ್ಕೂಟರ್ ಡಿಕ್ಕಿಯಲ್ಲಿಟ್ಟಿದ್ದ 50 ಸಾವಿರ ನಗದು ಕಳವು

ಮೈಸೂರು, ಜ.25(ಎಸ್‌ಬಿಡಿ)– ತೆಂಗಿನ ಎಣ್ಣೆ ಸರಬರಾಜು ಏಜೆನ್ಸಿಯೊಂದರ ಸಿಬ್ಬಂದಿ ಅಂಗಡಿಗಳಿಂದ ಸಂಗ್ರಹಿಸಿದ್ದ 50 ಸಾವಿರ ಹಣವನ್ನು ಅವರ ಸ್ಕೂಟರ್ ಡಿಕ್ಕಿಯಿಂದ ಖದೀಮರು ಎಗರಿಸಿರುವ ಘಟನೆ ಮೈಸೂರಿನ ಶ್ರೀರಾಂಪುರದಲ್ಲಿ ನಡೆದಿದೆ.

ಶ್ರೀವಾರಿ ಏಜೆನ್ಸಿಯಲ್ಲಿ ತೆಂಗಿನ ಎಣ್ಣೆ ಆರ್ಡರ್ ಪಡೆಯುವುದು ಹಾಗೂ ಹಣ ಸಂಗ್ರಹಿಸುವ ಕೆಲಸ ಮಾಡಿಕೊಂಡಿರುವ ಶಿವಶಂಕರ್ ಈ ಸಂಬಂಧ ಕುವೆಂಪುನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಅಂಗಡಿಗಳಿಂದ ಸಂಗ್ರಹಿಸಿದ ಹಣ, ಎಟಿಎಂ, ಪಾನ್‌ಕಾರ್ಡ್ ಇನ್ನಿತರ ವಸ್ತುಗಳಿದ್ದ ಬ್ಯಾಗ್ ಅನ್ನು ಸ್ಕೂಟರ್ ಡಿಕ್ಕಿಯಲ್ಲಿಟ್ಟು ಶ್ರೀರಾಂಪುರದ ಕಚೇರಿ ಬಳಿ ನಿಲ್ಲಿಸಿ ಒಳಹೋಗಿದ್ದು, ಅಲ್ಲಿಂದ ಮನೆಗೆ ಹೋಗಿ ಸ್ಕೂಟರ್ ಡಿಕ್ಕಿ ತೆಗೆದಾಗ ಅದರಲ್ಲಿದ್ದ ಬ್ಯಾಗ್ ಇರಲಿಲ್ಲ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಜ.28ರಂದು ಕ್ಷಯಮುಕ್ತ ಅರಿವು ಕಾರ್ಯಕ್ರಮ


ಮೈಸೂರು,ಜ.25– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ಎನ್.ಟಿ.ಇ.ಪಿ. ಜಿಲ್ಲಾ. ಕ್ಷಯರೋಗ ನಿಯಂತ್ರಣ ಕೇಂದ್ರ ವತಿಯಿಂದ ಜ.28 ರಂದು ಶ್ರೀ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಮೈಸೂರು ಜಿಲ್ಲೆಯ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಗೆ ‘ಕ್ಷಯಮುಕ್ತ ಗ್ರಾಮ ಪಂಚಾಯತ್’ ಅರಿವು ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ. ಗಾಯಿತ್ರಿ ಅಧ್ಯಕ್ಷತೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಜಯಂತ್ ಎಂ.ಎಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೋಮವಾರದಿಂದಲೇ ಏಕರೂಪ ನಾಗರಿಕ ಸಂಹಿತೆ ಜಾರಿ: ಯುಸಿಸಿ ಜಾರಿಗೆ ತಂದ ಮೊದಲ ರಾಜ್ಯವಾಗಲಿದೆ ಉತ್ತರಾಖಂಡ

ನವದೆಹಲಿ, ಜ.25– ಜನವರಿ 27 ರಂದು ಉತ್ತರಾಖಂಡದಲ್ಲಿ ಯುಸಿಸಿ ಜಾರಿಗೆ ಬರಲಿದೆ. ಪ್ರಧಾನಿ ನರೇಂದ್ರ ಮೋದಿ ಡೆಹ್ರಾಡೂನ್‌ಗೆ ಆಗಮಿಸುವ ಒಂದು ದಿನ ಮೊದಲು ಜನವರಿ 27ರಂದು ಉತ್ತರಾಖಂಡ್ ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ಅನುಷ್ಠಾನಕ್ಕೆ ಸಾಕ್ಷಿಯಾಗಲಿದೆ. ಅದೇ ದಿನ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಯುಸಿಸಿ ಪೋರ್ಟಲ್ ಅನ್ನು ಸಹ ಉದ್ಘಾಟಿಸಲಿದ್ದಾರೆ. ಇದು ಉತ್ತರಾಖಂಡವು ಯುಸಿಸಿಯನ್ನು ಜಾರಿಗೆ ತಂದ ಮೊದಲ ರಾಜ್ಯವಾಗಲಿದೆ. ಜನವರಿ 27ರಂದು ಮಧ್ಯಾಹ್ನ 12.30ಕ್ಕೆ ಸೆಕ್ರೆಟರಿಯೇಟ್‌ನಲ್ಲಿ ಯುಸಿಸಿ ಪೋರ್ಟಲ್ ಅನ್ನು ಪ್ರಾರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಕಾರ್ಯದರ್ಶಿ ಶೈಲೇಶ್ ಬಗೋಲಿ ಶನಿವಾರ ತಿಳಿಸಿದ್ದಾರೆ.



ಸ್ನೇಹಜೀವಿ ಹಾಗೂ ಸಮಾಜ ಸೇವಕರಾದ ಶ್ರೀಯುತ ನಾಗೇಶ್ [ಕೋಟೆ]ರವರಿಗೆ ಹುಟ್ಟುಹಬ್ಬದ ಶುಭಾಷಯಗಳು



ಶುಭಕೋರುವವರು : ನಂಜುಂಡಸ್ವಾಮಿ, ಅಧ್ಯಕ್ಷರು
ಸಿಂಹದಮರಿ ಸೇವಾ ಟ್ರಸ್ಟ್ (ರಿ.)
ಶಿವರಾಜ್‌ಕುಮಾರ್ ಮತ್ತು ಅಪ್ಪು ಅಭಿಮಾನಿಗಳ ಸಂಘ, ಶಿವರಾಂಪೇಟೆ, ಮೈಸೂರು

Commercial New Building For Sale

60x20 North-East Corner
J.P.Nagar Police Booth
Opp. SBI Bank
Rent - 1.5 L/M
Contact: 8971134052

ಕಳೆದಿದೆ

ಬೆಂಗಳೂರು ಉತ್ತರ, ಜೀವನ್ ಭೀಮನಗರ, 7ನೇ ಮೇನ್, ಸೆಕ್ಟರ್ 10. ಪ್ಲಾಟ್ ನಂ.7ಎ.ರಲ್ಲಿ ವಾಸವಾಗಿರುವ ಶ್ರೀ ರವೀಂದ್ರ ಎ.ಪಿ. ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನಾನು ಸ್ವತ್ತಿನ ಸಂಖ್ಯೆ 2811/ಎ. ಸಿಹೆಚ್–23/ಎ., 2ನೇ ಮೇನ್, ಜಯನಗರ, ಚಾಮರಾಜಮೊಹಲ್ಲಾ, ಮೈಸೂರು ಸದರಿ ಸ್ವತ್ತಿಗೆ ಸಂಬಂಧಪಟ್ಟ ಮಂಜೂರಾತಿ ಪತ್ರ ಮತ್ತು ಖಾತಾ ಪತ್ರದ ಮೂಲ ದಾಖಲಾತಿ ಪತ್ರಗಳನ್ನು ದಿನಾಂಕ 04-12-2024ರಂದು ಮನೆ ಬದಲಾವಣೆ ಸಂದರ್ಭದಲ್ಲಿ ಕಳೆದುಹೋಗಿರುತ್ತದೆ, ಸಿಕ್ಕವರು ಸಂಪರ್ಕಿಸಿ:
9448056606

ಬೇಕಾಗಿದ್ದಾರೆ

ಮೈಸೂರಿನ ಕುವೆಂಪುನಗರದ ಮನೆಯೊಂದರಲ್ಲಿ ಮನೆ ಕೆಲಸ ಮತ್ತು ಹೌಸ್ ಕೀಪಿಂಗ್ ಮಾಡಲು ನುರಿತ, ತಾಳ್ಮೆಯ, ಅನುಭವಿ ಮಹಿಳೆಯರು ಬೇಕಾಗಿದ್ದಾರೆ, ಕುವೆಂಪುನಗರದ ಸುತ್ತಾಮುತ್ತವಿರುವ ಹಾಗೂ ದ್ವಿಚಕ್ರವಾಹನ ಇರುವವರಿಗೆ ಮೊದಲ ಆದ್ಯತೆ.
9902508150

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು.. ಸದರಿ ಸ್ವತ್ತಿನ ಮಾಲೀಕರಾದ ಲೇಟ್. ಉಸ್ಮಾನ್ ಅಲಿರವರ ಮಗನಾದ ಸುಮಾರು 59 ವರ್ಷ ವಯಸ್ಸಿನ ತಾಹೇರ್ ಅಲಿ ರವರಿಂದ ಖರೀದಿಸಲು ತೀರ್ಮಾನಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯ 07 ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ : ಐಟಂ ಸಂಖ್ಯೆ:1
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಹಾರೋಹಳ್ಳಿ ಗ್ರಾಮದ ಸರ್ವೇ ಸಂಖ್ಯೆ 453/1 (ಹಳೆ ಸರ್ವೆ ಸಂಖ್ಯೆ 886/1) ವಿಸ್ತೀರ್ಣ 2 ಎಕರೆ 35.08 ಗುಂಟೆ ಜಮೀನಿನ ಚೆಕ್ಕುಬಂದಿ ಈ ಮುಂದಿನಂತಿದೆ ಎಂದರೆ: ಪೂರ್ವಕ್ಕೆ: ಹಾಲಿ ಶ್ರೀ. ಮರಿಗೌಡರ ಜಮೀನು (ಸರ್ವೆ ಸಂಖ್ಯೆ: 453/2, ಹಳೆಸಂಖ್ಯೆ 886/2), ಶ್ರೀಮತಿ. ಕಮಲಮ್ಮರವರ ಜಮೀನು (ಸರ್ವೆ ಸಂಖ್ಯೆ: 453/3, ಹಳೆಸಂಖ್ಯೆ 886/3). ಶ್ರೀ. ಪುಟ್ಟಸ್ವಾಮಿಗೌಡರವರಿಗೆ ಸೇರಿದ ಜಮೀನು (ಸರ್ವೆ ಸಂಖ್ಯೆ: 453/5, ಹಳೆಸಂಖ್ಯೆ 886/5). ಪಶ್ಚಿಮಕ್ಕೆ: ಸರ್ವೆ ಸಂಖ್ಯೆ 454, ಹಳೆ ಸರ್ವೆ ಸಂಖ್ಯೆ 887 ರ ಜಮೀನು,ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸರ್ವೆ ಸಂಖ್ಯೆ 451, ಹಳೆ ಸರ್ವೆ ಸಂಖ್ಯೆ 884 ರ ಜಮೀನು

ಐಟಂ ಸಂಖ್ಯೆ:2 ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಹಾರೋಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 453/4 (ಹಳೆ ಸರ್ವೆ ಸಂಖ್ಯೆ 886/4) ವಿಸ್ತೀರ್ಣ 16 ಗುಂಟೆ ಜಮೀನಿನ ಚೆಕ್ಕುಬಂದಿ ಈ ಮುಂದಿನಂತಿದೆ ಎಂದರೆ: ಪೂರ್ವಕ್ಕೆ : ಸರ್ವೆ ಸಂಖ್ಯೆ 451, ಹಳೆ ಸರ್ವೆ ಸಂಖ್ಯೆ 884 ರ ಜಮೀನು. ಪಶ್ಚಿಮಕ್ಕೆ : ಸರ್ವೆ ಸಂಖ್ಯೆ 454, ಹಳೆ ಸರ್ವೆ ಸಂಖ್ಯೆ 887 ರ ಸ್ವತ್ತಿನಲ್ಲಿರುವ ರಸ್ತೆ, ಉತ್ತರಕ್ಕೆ : ಸರ್ವೇ ಸಂಖ್ಯೆ 453/1 (ಹಳೆ ಸರ್ವೆ ಸಂಖ್ಯೆ 886/1) ರ ಜಮೀನು, ದಕ್ಷಿಣಕ್ಕೆ : ಸರ್ವೆ ಸಂಖ್ಯೆ 451, ಹಳೆ ಸರ್ವೆ ಸಂಖ್ಯೆ 884 ರ ಜಮೀನು.

ಸಹಿ/-
H.P. RAKSHITH, BAL., LL.B., Advocate, KAR No. 1915/04 #651, CA-1, 1st Floor, "Sri Vidhya" 1st Main Road, Aravinda Nagar, Mysuru-23. Mob: 9738200157
ದಿನಾಂಕ : 25-01-2025 । ಸ್ಥಳ: ಮೈಸೂರು

ಶ್ರೀ ಗೌರಿಶಂಕರ ಟ್ರಾವೆಲ್ಸ್ ಮಹಾಕುಂಭ ಯಾತ್ರೆ

ಪ್ರಯಾಗ್‌ರಾಜ್, ಕಾಶಿ, ಅಯೋಧ್ಯೆ, ಗೋರಾಕ್‌ಪುರ.
Date: 15-2-2025, 20 & 24
(ವಿಮಾನ, ಬಸ್, ರೂಂ, ಊಟ)
Mob: 9620002114



FOR SALE

43x60, West Face, Old House at Saraswathipuram
30x40, North Face, Vishweshwaraiah Layout
45x60 South East Corner, Gayathri Layout Near RT Nagar
7760811113 / 9845349385

ಫ್ಲಾಟ್ ಮಾರಾಟಕ್ಕಿದೆ

Flat No.54/4, 3BHK Measuring 1900 sqft. Carpet Area situted at 2nd floor, C.C. Enclave No.54455, 5th Cross, KIADB Residents Colony, Hebbal 2nd Stage, Ilavala Hobli Mysuru, Karnataka
ಸಂಪರ್ಕಿಸಿ: ಹರ್ಷಿತ್
9620003732

ಉತ್ತರ ಕ್ರಿಯಾದಿ ಆಹ್ವಾನ



ಶ್ರೀ ಎಂ.ಸೃಜನ್ (ಮಧು)
ಇವರು ದಿನಾಂಕ 16-01-2025ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 27-01-2025ರ ಸೋಮವಾರ ಬೆಳಗ್ಗೆ 11-00 ಗಂಟೆಗೆ #53, 10ನೇ ಮೇನ್, ಕೆ.ಪಿ.ಶಾಲೆ ರಸ್ತೆ, ಗೋಕುಲಂ 3ನೇ ಹಂತ ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು: ತಂದೆ, ತಾಯಿ, ಅಣ್ಣ ಸಂತೋಷ್ ಎಂ. ಕುಟುಂಬವರ್ಗದವರು ಮತ್ತು ಸ್ನೇಹಿತರು ಹಾಗೂ ಬಂಧುಮಿತ್ರರು.

25ನೇ ವರ್ಷದ ಸವಿನೆನಪು



ನಿಧನ: 27.01.2000
ಶ್ರೀಮತಿ ಜಯಮ್ಮ
(ಲೇ॥ ನಿಂಗೇಗೌಡರ ಧರ್ಮಪತ್ನಿ)
ಟೆರಿಷಿಯನ್ ಕಾಲೇಜು ಸರ್ಕಲ್, ಯರಗನಹಳ್ಳಿ, ಮೈಸೂರು
ನೀವು ನಮ್ಮನ್ನಗಲಿ ಇಂದಿಗೆ 25 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಮಗ ಶಿವಣ್ಣ, ಸೊಸೆ: ಜ್ಯೋತಿ, ಎಸ್.ಸ್ವರೂಪ್ ಗೌಡ, ಎಸ್.ಶ್ವೇತ ಹಾಗೂ ಕುಟುಂಬದವರು, ಯರಗನಹಳ್ಳಿ

STAR OF MYSORE

SPECIAL ISSUE

Star of Mysore is completing 47 years of service on 16th February 2025 and entering 48th year of publication. As in the past, this year too we will be publishing a Special Issue.

We request our advertisers and patrons to release their advertisements before 5th February to facilitate printing as per schedule.

HEAD OFFICE
0821-2496520 (5-LINES)
Ad Dept. - 0821-2496522 / 23
Email : ad@starofmysore.com

Maria G. Fernandes
Advt. Manager: 94485-25060

Joy Anthony Dove
Sr. Executive-Ad Sales
89516-68960

Prema
Sr. Executive Advertising
98805-49879

K.R. Circle Office: 0821-2431774
D.D. Urs Road Office: 0821-2428695
Kodagu Office: 97314-69871
Mandya Office: 87629-60325
Chamarajanagar: 92422-65657
Nanjangud: 98805-09200 / 99016-02226
T.N. Pura: 94483-05750
Bengaluru: 98440-46761

TRIPS INDIA

Organised By TRIPS INDIA
We Plan You Pack
4 DAYS Flights Package 30,000/- Per Person
PRAYAGRAJ, AYODHYA, VARANASI
3 DAYS Flights Package 25,000/- Per Person
PRAYAGRAJ, MAHA KUMBA MELA
Call: 98868 69681

DREAM WORLD TRAVELS Mysore

Jammu & Kashmir
7 Nights 8 Days
Ex Mysore to Mysore Airport pickup and drop.
Ex Bangalore to Bangalore flight
PACKAGE COST: Rs.56,800/-
DEPARTURE DATE March 31st 2025
For More Details Contact :
994 5242 427

ಬೇಕಾಗಿದ್ದಾರೆ

ಪ್ರತಿಷ್ಠಿತ ಟೈರ್ ಷೋರೂಮ್‌ನಲ್ಲಿ ಸಹಾಯಕರಾಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕನ್ನಡ ಮತ್ತು ಹಿಂದಿ ಮಾತನಾಡಲು ಬಲ್ಲವರಾಗಿರಬೇಕು. ಸಮಯ ಬೆಳಗ್ಗೆ 9 ರಿಂದ ಸಂಜೆ 7ರವರೆಗೆ. ಸ್ಥಳೀಯ ಅಧಿಕಾರಿಗಳಿಂದ ಗುರುತಿನ ಚೀಟಿ ಅಗತ್ಯ ವೇತನ: 12000ರೂ ತಿಂಗಳಿಗೆ ಮತ್ತು ಇನ್ಸೆಂಟಿವ್. ಸಂಪರ್ಕಿಸಿ
9480481000

ಇಂಪೀರಿಯಲ್ ಸಿಟಿ

HP HYLAND PROPERTIES
ಮೆಗಾ ರೆಸಿಡೆನ್ಷಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
MUDA LIMITS
ಬುಕಿಂಗ್ ಪ್ರಾರಂಭವಾಗಿದೆ
ಇಲವಾಲ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ
ಕೇವಲ ₹749/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50
40x60 | 50x80
ಅತ್ಯುತ್ತಮ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
95133 01854
88840 71010

ಸೈಟು ಬೇಕಾಗಿದೆ

ಹುಣಸೂರು ಮುಖ್ಯರಸ್ತೆಯ ಸುತ್ತಮುತ್ತಾ ಮಾರಾಟ ಮಾಡುವ ಮಾಲೀಕರು ಮಾತ್ರ ಸಂಪರ್ಕಿಸಿ
8971444919

SITES FOR SALE

50'x70' - North Face, 40 feet Road, Roopa Nagar, 3900 per sq feet

45'x60' - Commercial Site on 60 ft Road for Sale in KBL Gardenia Layout, attached to Vijayanagara 4th Stage. 4750 per sqft

8792235466 / 8073300783

ಉತ್ತರ ಕ್ರಿಯಾದಿ ಆಹ್ವಾನ



ಇವರು ದಿನಾಂಕ 16-01-2025ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 26-01-2025ರ ಭಾನುವಾರ ಬೆಳಗ್ಗೆ 11-30 ಗಂಟೆಗೆ ಮುರಳೇಶ್ವರ ಸಮುದಾಯ ಭವನದಲ್ಲಿ (ಕಾವೇರಿ ಸ್ಕೂಲ್ ಮುಂಭಾಗ) ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಶ್ರೀ ದೇಶಿಗೌಡ್ರು
ದುಃಖತಪ್ತರು: ಶ್ರೀಮತಿ ಶಿವಮ್ಮ ಮತ್ತು ಕುಟುಂಬವರ್ಗದವರು

WANTED TEACHERS

ST. GREGORIOS CONVENT SCHOOL
Sabbanahalli, Bilikere, Hunsur (Tq) Mysore (District)
We have requirement of teachers with any degree with B.Ed must and kindergarten trained teachers.
9642803373
9980392428

ಮಹಿಳಾ ವಾರ್ಡನ್ ಬೇಕಾಗಿದ್ದಾರೆ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಬಿಳಿಕೆರೆ ಹೋಬಳಿಯ ಸಬ್ಬನಹಳ್ಳಿ ಗ್ರಾಮದ ಸ್ನೇಹ ಭವನ ಸಂಸ್ಥೆಯ ವಿಶೇಷ ಚೇತನವುಳ್ಳ ಮಕ್ಕಳ ವಸತಿ ನಿಲಯಕ್ಕೆ ಒಬ್ಬರು ಮಹಿಳಾ ವಸತಿಯುತ ವಾರ್ಡನ್ ಬೇಕಾಗಿದ್ದಾರೆ. ಸಂಪರ್ಕಿಸಿ
9642803373
9980392428

Site for Sale

Muda Approved 9m x 12m West face at Dream city, Rai Estate, K Hemmanahally, Price: 26 Lakhs Negotiable. Intrested Persons Contact:
9880808485

ಮಾರುತಿ ಟ್ಯೂಬ್ ವೆಲ್ಸ್ (ರಿ)

ಬೋರ್‌ವೆಲ್ ಡ್ರಿಲ್ಲಿಂಗ್ @
ಸಿಟಿ - ₹75/- ಸ್ಟ್ರೈಟ್ ಬೋರ್‌ವೆಲ್
ಗ್ರಾಮೀಣ - ₹85/- ಕೃಷಿ ಬೋರ್‌ವೆಲ್
• ಬ್ರೋಕರ್ ಇಲ್ಲ • ಕಮಿಷನ್ ಇಲ್ಲ
8184000444

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

JOB OPPORTUNITIES

(Saree: RETAIL]
Position: Sales Team
Benefits: Accommodation + ESI + PF + FOOD
Location: Mysore and Bangalore
Immediate Joining
Contact: 8618807030

25ನೇ ವರ್ಷದ ಸವಿನೆನಪು



ನೀವು ನಮ್ಮನಗಲಿ ಇಂದಿಗೆ 25ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು
ಮಗ: ಶಿವಲಿಂಗೇಗೌಡ.
ಸೊಸೆ: ಮಂಗಳ.ಎಂ.ಎನ್.
ಮೊಮ್ಮಕ್ಕಳು: ನಿತೀನ್ ಗೌಡ ಎಸ್, ರೋಹಿಣಿ.ಎಸ್.
ಯರಗನಹಳ್ಳಿ, ಮೈಸೂರು
ಶ್ರೀಮತಿ ಜಯಮ್ಮನವರು
ನಿಧನ: 27-01-2000

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತನ್ನು ಸದರಿ ಸ್ವತ್ತಿನ ಮಾಲೀಕರಾದ ಶ್ರೀ. ಎನ್. ವಿಜಯ್‌ಕುಮಾರ್ ರವರಿಂದ ಶುದ್ಧ ಕ್ರಯಕ್ಕೆ ಪಡೆದುಕೊಳ್ಳುವ ಇಚ್ಛೆಯನ್ನು ಹೊಂದಿದ್ದು, ಈ ಸಂಬಂಧ ನಮ್ಮ ಕಕ್ಷಿದಾರರು ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು/ಸಂಘ ಸಂಸ್ಥೆಗಳು ಅಥವಾ ಷೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರೆ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದಂತಹ ಏಳು (07) ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಈಮೂಲಕ ಸೂಚಿಸಲಾಗಿದೆ. ಒಂದು ವೇಳೆ ಮೇಲೆ ತಿಳಿಸಿದಂತಹ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಂತಹ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆಂತಲೂ ಮತ್ತು ಆನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲವೆಂತಲೂ ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

ಷೆಡ್ಯೂಲ್ ಸ್ವತ್ತಿನ ವಿವರ
ಮೈಸೂರು ನಗರ, ಖಿಲ್ಲೆ ಮೊಹಲ್ಲಾ, ನಾಚನಹಳ್ಳಿ (ಜೆ.ಪಿ ನಗರ) ಬಡಾವಣೆ, 2ನೇ 'ಎ' ಹಂತದಲ್ಲಿರುವ ನಿವೇಶನ ಸಂಖ್ಯೆ 149ನೇ ಸ್ವತ್ತಿನ ವಿಸ್ತೀರ್ಣ ಪೂರ್ವಪಶ್ಚಿಮ 6.00 ಮೀಟರ್‌ಗಳು ಹಾಗೂ ದಕ್ಷಿಣೋತ್ತರ 9.00 ಮೀಟರ್‌ಗಳು, ಒಟ್ಟು ವಿಸ್ತೀರ್ಣ 54.00 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ:–
ಪೂರ್ವಕ್ಕೆ: ಸ್ವತ್ತಿನ ಸಂಖ್ಯೆ 148, ಪಶ್ಚಿಮಕ್ಕೆ: ಸ್ವತ್ತಿನ ಸಂಖ್ಯೆ 150, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸ್ವತ್ತಿನ ಸಂಖ್ಯೆ 144.

ಜಯಕುಮಾರ್
ವಕೀಲರು, ಕಛೇರಿ: ನಂ.565,/ಎ, 20ನೇ ಕ್ರಾಸ್, 4ನೇ ಮೇನ್, 1ನೇ ಹಂತ, ವಿದ್ಯಾರಣ್ಯಪುರಂ, ಮೈಸೂರು–570008 । ಮೊ.ನಂ.9844539729
ದಿನಾಂಕ: 25–01–2025 ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ರಾಮಕೃಷ್ಣ ನಗರ, ಹೆಚ್. ಬ್ಲಾಕ್, 3ನೇ ತಿರುವು, 2ನೇ ಮೇನ್, ಮನೆ ನಂಬರ್ 47ರಲ್ಲಿ ವಾಸವಾಗಿರುವ ಲೇಟ್ ಹೆಚ್.ಎಸ್. ಕೃಷ್ಣಪ್ಪ ರವರ ಮಗಳು ಶ್ರೀಮತಿ ನಿರ್ಮಲ.ಹೆಚ್.ಕೆ ಮತ್ತು ಇವರ ಮಗ ಶ್ರೀ ಅರವಿಂದ.ಎನ್.ಎನ್. ಹಾಗೂ ಇವರ ಧರ್ಮಪತ್ನಿ ಶ್ರೀಮತಿ ರಮ್ಯ.ಎನ್ ರವರುಗಳ ಇರಾದೆಯ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಕುವೆಂಪುನಗರದ ನಿವಾಸಿ ಶ್ರೀಮತಿ ಮೀರಾ ಸೀತಾರಾಮ್ ರವರು ದಿನಾಂಕ 05/09/2003 ರಂದು ಮೈಸೂರು ಸಿಟಿ, ವಿವಿ ಮೊಹಲ್ಲಾ, 5ನೇಮೈನ್, ಮನೆ ನಂಬರ್ 2773ರಲ್ಲಿ ವಾಸವಾಗಿರುವ ಶ್ರೀ ಎ.ಎಸ್. ನಾಗರಾಜು ರವರ ಧರ್ಮಪತ್ನಿ ಶ್ರೀಮತಿ ಸಂಧ್ಯಾ ರವರಿಂದ ಶುದ್ಧಕ್ರಯಕ್ಕೆ ಪಡೆದುಕೊಂಡು ತದನಂತರ ದಕ್ಷಿಣ ಉಪನೋಂದಣಾಧಿಕಾರಿಯವರ ಕಚೇರಿಯಲ್ಲಿ ನೋಂದಣಿಯಾಗಿದ್ದು ತದನಂತರ ಅವರ ಹೆಸರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಖಾತೆ ಕಂದಾಯ ಮಾಡಿಸಿಕೊಂಡು ಕಾನೂನುಬದ್ಧ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆ. ಸದರಿ ಶ್ರೀಮತಿ ಮೀರಾ ಸೀತಾರಾಮ್ ರವರಿಂದ ನಮ್ಮ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳಲು ಮಾತುಕತೆಯ ಮೂಲಕ ಒಪ್ಪಂದವಾಗಿರುತ್ತದೆ.

ಆದುದರಿಂದ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾರಿಗಾದರೂ ಹಕ್ಕು, ಬಾಧ್ಯತೆಗಳು ಇರುವುದಾದರೆ ಕೂಡಲೇ ಈ ಸಾರ್ವಜನಿಕ ಪ್ರಕಟಣೆ ಹೊರಡಿಸಿದ **7 ದಿವಸಗಳೊಳಗಾಗಿ** ಈ ಕೆಳಕಂಡ ಮೊಬೈಲ್ ನಂಬರ್ ಗಳನ್ನು ಸಂಪರ್ಕಿಸಿ ಅಥವಾ ವಕೀಲರನ್ನು ಖುದ್ದಾಗಿ ಭೇಟಿ ಮಾಡಿ ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ತಮಗಿರುವ ಹಕ್ಕು ಅಧಿಕಾರದ ಸಂಬಂಧ ದಾಖಲೆಗಳನ್ನು ನೀಡತಕ್ಕದ್ದು ಎಂದೂ, ಆನಂತರ ಬಂದ ತಕರಾರು ಹಾಗೂ ಮನವಿಗಳಿಗೆ ಕಾನೂನಿನ ಚೌಕಟ್ಟಿನಲ್ಲಿ ನಮ್ಮ ಕಕ್ಷಿದಾರರು ಬಾಧ್ಯಸ್ಥರಾಗುವುದಿಲ್ಲ ಎಂದು ತಿಳಿಯಪಡಿಸುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತಿನ ವಿವರ
ಮೈಸೂರು ಸಿಟಿ, ವಿಜಯನಗರ ಬಡಾವಣೆ, 3ನೇ ಹಂತ, 'ಇ' ಬ್ಲಾಕ್ ನಲ್ಲಿರುವ ನಿವೇಶನ ಸಂಖ್ಯೆ: 173, ಪೂರ್ವ ಪಶ್ಚಿಮ 12 ಮೀ. ದಕ್ಷಿಣೋತ್ತರ 18 ಮೀಟರ್‌ಗಳುಳ್ಳ ನಿವೇಶನಕ್ಕೆ ಚೆಕ್ಕುಬಂಧಿ:
ಪೂರ್ವಕ್ಕೆ: ನಿವೇಶನ ಸಂಖ್ಯೆ 174
ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 172
ಉತ್ತರಕ್ಕೆ: ನಿವೇಶನ ಸಂಖ್ಯೆ 196
ದಕ್ಷಿಣಕ್ಕೆ: ರಸ್ತೆ

ದಿನಾಂಕ : 25–01–2025
ಸ್ಥಳ : ಮೈಸೂರು
ಬಿ. ಶಿವಣ್ಣ, ವಕೀಲರು
ಅದಿತ್ ಅಪಾರ್ಟ್‌ಮೆಂಟ್, ಫ್ಲಾಟ್ ನಂ.104, 1ನೇ ಮಹಡಿ, ಎಸ್‌ಜೆಸಿಇ ರಸ್ತೆ, ಟೆಲಿಕಾಂ ಬಡಾವಣೆ, ಚಾಮರಾಜ ಮೊಹಲ್ಲಾ, ಮೈಸೂರು
ಮೊಬೈಲ್: 9880139649, 9845929387.

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ನಗರ, ಇಟ್ಟಿಗೆ ಹುಂಡಿ ಬೀದಿ, ಮನೆ ನಂ.269 ರಲ್ಲಿ ವಾಸವಾಗಿರುವ ಶ್ರೀ.ಪ್ರಕಾಶ್ ರವರ ಮಗ ಶ್ರೀ.ಸಂತೋಷ್.ಪಿ ರವರಿಂದ ಖರೀದಿಸುವ ಇರಾದೆಯನ್ನು ಹೊಂದಿರುವುದು ಸರಿಯಷ್ಟೆ. ಶ್ರೀ.ಸಂತೋಷ್.ಪಿ ರವರು ಮಾತ್ರ ಮಾಲೀಕರಾಗಿ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಗೂ ಒಳಪಟ್ಟು ಸ್ವಾಧೀನದಲ್ಲಿದ್ದು ಅವರು ವಿಕ್ರಯಸಲು, ಪರಭಾರೆ ಮಾಡಲು ಸಂಪೂರ್ಣ ಸ್ವಂತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೇ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ(ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಆಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್ ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ದಿಷ್ಟ ಪರಿಹಾರ ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗೆ ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ನಿವೇಶನಗಳ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸೌಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಯಾವುದು ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯದ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು.

ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಜಯಪುರ ಗ್ರಾಮದ ಸರ್ವೆ ನಂ.2/3 (ಹಳೆ ಸರ್ವೆ ನಂ.2/1-ಬಿ1) ರಲ್ಲಿ ವಿಸ್ತೀರ್ಣ 4-10 ಗುಂಟೆ ಅನ್ಯಕ್ರಾಂತವಾದ ಜಮೀನಿನಲ್ಲಿ ಅಭಿವೃದ್ಧಿಪಡಿಸಿ ನಿರ್ಮಿಸಿರುವ ಬಡಾವಣೆಯ ನಿವೇಶನ ಸಂಖ್ಯೆ 09, ಜಯಪುರ ಗ್ರಾಮಪಂಚಾಯಿತಿಯವರು ನೀಡಿರುವ ಖಾತಾ/ ನಮೂನೆ 09 ಮತ್ತು 11ಎ ರಂತೆ ಸ್ವತ್ತಿನ ನಂ.1 ಜೆ/2017/18/2/3/9, ಯೂನಿಕ್ ನಂ.15220 0423082020942 ರ ವಿಸ್ತೀರ್ಣ ಪೂರ್ವ, ಪಶ್ಚಿಮ 9.00 ಮೀಟರ್, ಉತ್ತರ ದಕ್ಷಿಣ 12.00 ಮೀಟರ್ ಒಟ್ಟು 108.00 ಚದರ ಮೀಟರ್‌ಗಳುಳ್ಳ ಪೂರ್ತಾ ಖಾಲಿ ನಿವೇಶನ ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ : ನಿವೇಶನ ಸಂಖ್ಯೆ–08, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 10, ಉತ್ತರಕ್ಕೆ : ನಿವೇಶನ ಸಂಖ್ಯೆ 22, ದಕ್ಷಿಣಕ್ಕೆ : 9.00 ಮೀಟರ್ ರಸ್ತೆ

ಸಹಿ/- ಮೋಹನ ಸಿ, ವಕೀಲರು,
ನಂ.390/ಇ. ಮೊದಲನೇ ಮಹಡಿ, 4ನೇ ಮೇನ್, ಮಾರುತಿ ಟೆಂಪಲ್ ರಸ್ತೆ, ಕುವೆಂಪುನಗರ, ಮೈಸೂರು–570023. ಮೊ: 94484 48407.
ದಿನಾಂಕ: 25/01/2025, ಸ್ಥಳ: ಮೈಸೂರು

GSSS Geetha Bharathi Higher Primary School

Siddartha Nagar, Mysuru - 570 011.

APPOINTMENT NOTIFICATION

Post	Qualification
Asst. Teachers for • English • Kannada • Hindi	BA/MA with BEd with at least 5 years of experience
• Sanskrit	Sahithya / Vidwath with at least 5 years of experience

a) Fluency in English is mandatory.
b) Kindly superscribe on the envelope, the post applied for.
c) Application with recent passport size photo must be sent by post / courier to The Secretary, GSSS (R), Siddarthanagar, Mysuru - 570 011 on or before 05-02-2025.

Dr. M. Jagannatha Shenoi, President — Smt. Anupama B. Pandit, Secretary



MYSORE to BANGALORE
City drop or Pick up
BANGALORE to MYSORE Airport drop or Pick up MYSURU
9611177599

ಹಸಿರು ನಮ್ಮ ಉಸಿರು

GSSS School of Architecture for Women

Geetha Shishu Shikshana Sangha (R)
KRS Road, Metagalli, Mysuru – 570016
(Approved by COA, New Delhi, Affiliated to VTU, Belagavi)

APPOINTMENT NOTIFICATION

Position	Required for	Subjects / Experience
Professor	School of Architecture	for Architecture, Structures & Arts
Asst. Professor	School of Architecture	for Architecture, Structures & Arts

- Salary: Based on credentials & experience.
- Free staff quarters will be provided for the post of Professor.
- Application with latest colour photo and copies of qualification and experience must be sent on or before 03-02-2025 to: The Secretary, GSSS(R), KRS Road, Metagalli, Mysuru - 570 016.

Dr. M. Jagannatha Shenoi, President — www.geethashishu.in — Smt. Anupama B. Pandit, Secretary

GSSS Simha Subbamahalakshmi First Grade College

GEETHA SHISHU SHIKSHANA SANGHA (R)
(Affiliated to UoM, Mysuru, Recognized by Govt. of Karnataka)
KRS Road, Metagalli, Mysuru - 570016

APPOINTMENT NOTIFICATION

Designation	Eligibility Criteria
ASSOCIATE PROFESSOR - BCA	Candidate with Ph.D in Core Subject, thorough knowledge about AICTE and NAAC norms, having 10 years of teaching and administration experience preferred
ASSISTANT PROFESSOR - B.Com, BBA & BCA	Candidate with min. 5 years of experience with NET / KSET and pursuing Ph.D preferred
ASSISTANT PROFESSOR - English, Sanskrit & Hindi	Candidate with min. 5 years of experience with NET/KSET and pursuing Ph.D preferred
ASST. LAB INSTRUCTOR - BCA	Candidate with min. 2 years of experience with Diploma in CS / B.Sc - CS / BCA.

1. Fluency in English is mandatory for all the posts
2. Salary is not a constraint for the right candidate.
3. Free staff quarters will be provided for the post of Asso. Prof.
4. Application with latest colour photo and copies of qualification and experience must be sent on or before 03-02-2025 to: The Secretary, GSSS(R), KRS Road, Metagalli, Mysuru - 570 016.

Dr. M. Jagannatha Shenoi, President — Smt. Anupama B. Pandit, Secretary

GSSS Institute of Engineering and Technology for Women

GEETHA SHISHU SHIKSHANA SANGHA (R)
KRS Road, Metagalli, Mysuru – 570016

APPOINTMENT NOTIFICATION

Position	Department	Qual.&Exp.
Associate Professor	CSE | ISE | AI-ML | AI-DS | MBA (Specialization - Finance)	As per AICTE Norms
Assistant Professor	ECE | CSE | AI-ML | AI-DS | ISE | Maths Mechanical | Physics | Chemistry | MBA (Specialization-Finance & Business Analytics)	As per AICTE Norms

NON - TEACHING

Position	Dept.	Qualification & Experience
Asst. Lab Instructor	CSE (AI-ML), AI-DS, ISE & ECE	Diploma in CSE / ISE / ECE or B.Sc - CS / IT. Experience in Engineering College preferred
Asst. Lab Instructor	Physics	B.Sc in PCM
Supervisor	Girls Hostel	Suitable Qualification & Experience
Asst. to Warden	Girls Hostel	Suitable Qualification & Experience
STP Operator	Girls Hostel	Suitable Qualification & Experience
Attender	Girls Hostel	Suitable Qualification & Experience

- Salary: Based on credentials & experience.
- Free staff quarters will be provided for the post of Asso. Prof.
- Application with latest colour photo and copies of qualification and experience must be sent on or before 03-02-2025 to: The Secretary, GSSS(R), KRS Road, Metagalli, Mysuru - 570 016.

Dr. M. Jagannatha Shenoi, President — www.geethashishu.in — Smt. Anupama B. Pandit, Secretary